ಶ್ರೀ ಎಂ. ಎಸ್. ಕೃಷ್ಣನ್.—ನಾವು ಒಂದು ತಿಂಗಳ ಹಿಂದೆ ಈ ವಿಷಯವಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಮಾಡಿದ್ದೆವು. ಅವರು ಒಂದು ತಿಂಗಳಲ್ಲಿ ಹೇಳುತ್ತೇನೆಂದು ಹೇಳಿದ್ದರು. ಇದುವರೆಗೆ ಯಾವ ತೀರ್ಮಾನವೂ ಅದರ ಬಗ್ಗೆ ಬಂದಿಲ್ಲ. ನಲ್ಲಿಗಳನ್ನು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ. ಅದನ್ನಾದರೂ ನಿಲ್ಲಿಸಿ. ಡಿಸ್‌ಕನೆಕ್ಟ್ ಮಾಡಿದ್ದಕ್ಕೆಲ್ಲಾ ರಿಕನೆಕ್ಟ್ ಮಾಡಿಸಿ ಎಂದು ನಾನು ಹೇಳುತ್ತೇನೆ. ಹಳೆಯ ದರದಲ್ಲಿ, ಅಂದರೆ, ಒಂದು ಸಾವಿರ ಗ್ಯಾಲನ್ನಿಗೆ ಒಂದು ರೂಪಾಯಿಯಂತೆ ತೆಗೆದುಕೊಳ್ಳಲಿ. ಮೊದಲು ಮಂತ್ರಿಗಳು ಅದರ ಬಗ್ಗೆ ಗಮನ ಕೊಡಲಿ ಎಂದು ನಾನು ಹೇಳುತ್ತೇನೆ.

Sri R. M. PATIL.—Sir, I will take the opportunity of explaining the entire position so far as water supply is concerned and also the rates that are charged and the rates that are in vogue as per the agreement between the Corporation and the Water Board.

Time may be given. I will explain the whole position.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು-ಕೋಟೆ). —ಈ ವಿಚಾರವಾಗಿ 8–10 ವರ್ಷದಿಂದಲೂ ಹೇಳುತ್ತಾ ಇದ್ದೇನೆ. ಯಾವ ಉತ್ತರವೂ ಬಂದಿಲ್ಲ.

BUDGET ESTIMATES FOR 1968-69—DEMANDS FOR GRANTS

DEMAND No. 27.

Sri G. NARAYANA GOWDA (Minister for Social Welfare).—Sir, on the recommendation of the Governor, I beg to move :

> "That a sum not exceeding Rs. 3,24,99,000 including the sums already voted on account be granted to the Government to defray the charges which will come in course of payment during the financial year for period ending 31st day of March 1969, in respect of 'Miscellaneous Social and Developmental Organisations".

Mr. DEPUTY SPEAKER.—Motion moved :

> "That a sum not exceeding Rs. 3,24,99,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969 in respect of 'Miscellaneous Social and Developmental Organisations".'

ಶ್ರೀ ಜಿ. ದುಗ್ಗಪ್ಪ (ಧರ್ಮಸಾಗರ).—ಮಾನ್ಯ ಸಭಾಪತಿಯವರೇ, ಈ ಸಭೆಯ ಮುಂದಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನಾಡಲು ಬಯಸುತ್ತೇನೆ.

ಸ್ವಾಮಿ, ಈ ಸಾಲಿಗೆ ಸುಮಾರು 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಮಾನ್ಯ ಸಚಿವರು ಕೇಳಿದ್ದಾರೆ. ಸೋಷಿಯಲ್ ಅಂಡ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ಗಾಗಿ ಅವರು ಈ ಹಣವನ್ನು ಕೇಳಿದ್ದಾರೆ. ಹಳೇ ಮೈಸೂರಿನಲ್ಲಿ ಬಹಳ ದಿವಸದಿಂದ ಇದ್ದಂಥ ಕೆಲವು ಮಾನ್ಯ ಸದಸ್ಯರಿಗೆ ಮತ್ತು ಮೈಸೂರಿನ ಇತಿಹಾಸ ಬಲ್ಲಂಥ ಕೆಲವರಿಗೆ ಈ ವಿಚಾರವಾಗಿ ಚೆನ್ನಾಗಿ ಗೊತ್ತಿರಬೇಕು. ಹಿಂದಿನ ಸರ್ಕಾರದಲ್ಲಿ ದುಡ್ಡನ್ನು ಖರ್ಚು ಮಾಡಲು ಸುಮಾರು 18 ಇಲಾಖೆಗಳು ಇತ್ತು. ಇತ್ತೀಚೆಗೆ ಈ ಬಾಬುಗಳು 118 ಇಲಾಖೆಗಳಾಗಿವೆ. ಈ ಇಲಾಖೆಯಲ್ಲಿ ಎಷ್ಟೆಷ್ಟು ಹಣ ಖರ್ಚಾಗುತ್ತಾ ಇದೆ, ಆ ಹಣ ಸದ್ವಿನಿಯೋಗವಾಗುತ್ತದೆಯೋ ಇಲ್ಲವೇ ಎನ್ನತಕ್ಕಂಥ ವಿಚಾರ

ಸರ್ಕಾರಕ್ಕೆ ಗೊತ್ತಿಲ್ಲವೋ ಎನ್ನುವ ಭಾವನೆ ನಮಗೆ ಬಂದಿದೆ. ಯಾರ ಉಪಯೋಗಕ್ಕೋಸ್ಕರವಾಗಿ, ಯಾವ ಕಾರಣಕ್ಕೋಸ್ಕರವಾಗಿ ಇದನ್ನು ಖರ್ಚು ಮಾಡುತ್ತಾರೆ, ಅದು ಸದ್ವಿನಿಯೋಗ ಆಗುತ್ತಾ ಇಲ್ಲ, ವಿನಿಯೋಗ ಮಾತ್ರ ಆಗುತ್ತಾ ಇದೆ ಎಂದು ನಾನು ಹೇಳುತ್ತೇನೆ. ಉದಾಹರಣೆಗೆ 1947 ರಿಂದ ಈಚೆಗೆ ಸ್ವಾತಂತ್ರ್ಯ ಬಂದ ಇತ್ತೀಚೆಗೆ ಏನಾಗಿದೆ ಎನ್ನುವುದನ್ನು ನೋಡೋಣ. ನಮ್ಮ ದೇಶದ 1/5 ಭಾಗದ ಜನರ ಸಂರಕ್ಷಣೆ ಹೇಗೆ ನಡೆಯುತ್ತಾ ಇದೆ. ಎಷ್ಟುಮಟ್ಟಿಗೆ ಕಾಪಾಡಿ ಕೊಂಡು ಬರುತ್ತಾ ಇದ್ದಾರೆ? ತತ್ವ, ನ್ಯಾಯ ಹೇಳುವ ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲೂ, ಪ್ರಾಂತಗಳಲ್ಲೂ ಸಹ ಅಧಿಕಾರದಲ್ಲಿದೆ. ಮೊನ್ನೆ ನಡೆದ ಜನರಲ್ ಎಲೆಕ್ಷನ್‌ನಿಂದ ಇಲ್ಲಿಯವರೆಗೆ ಎಷ್ಟು ಪರಿಣಾಮ ಏನಾಗಿದೆ ಎನ್ನುವ ವಿಚಾರ ಮೊನ್ನೆ ಪಾರ್ಲಿಮೆಂಟ್‌ನಲ್ಲಿ ಸಹ 2 ಗಂಟೆಗಳ ಕಾಲ ನಡೆದ ಚರ್ಚೆಯಿಂದ ಗೊತ್ತಾಗುತ್ತೆ. ಆಂಧ್ರದಲ್ಲಿ ಒಬ್ಬ ಹರಿಜನ ಹುಡುಗನನ್ನು ಒಂದು ತಪ್ಪಿಗಾಗಿ ಜೀವಂತವಾಗಿ ಸುಟ್ಟುಬಿಟ್ಟರು. ಮತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ಲೇಖನ ಬರೆದಿದ್ದಾರೆ, ಒಬ್ಬ ಹರಿಜನ ಸ್ತ್ರೀಯನ್ನು ನಗ್ನದಲ್ಲಿ ಬೀದಿಯಲ್ಲಿ ಮೆರವಣಿಗೆ ಮಾಡಿದರು ಎಂದು. ಮತ್ತು ನಮ್ಮ ಸಂಸ್ಥಾನದಲ್ಲಿ ನಾನು ಹೋದ ಸಾರಿ ಅಸೆಂಬ್ಲಿಯಲ್ಲಿ ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದೆ. ಕೋಲಾರದ ಮಾನ್ಯ ಸ್ನೇಹಿತರು ಇಲ್ಲಿ ಇಲ್ಲ. ಆ ಗ್ರಾಮದಲ್ಲಿ ಇವೊತ್ತು ಹರಿಜನ ಹೆಂಗಸರು ತಲೆಗೆ ಹೂ ಮುಡಿದುಕೊಂಡು ಹೋಗುವ ಹಾಗಿಲ್ಲ. ಮೊಣಕಾಲಿನ ಕೆಳಗೆ ಪಂಚೆ ಉಟ್ಟುಕೊಂಡು ಹೋಗುವಂತಿಲ್ಲ. ಇದನ್ನು ನಾನು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಈ ದಿನ ನನ್ನ ಮಗನಿಗೆ ನಾನು ಅಸ್ಪೃಶ್ಯ ಎಂದರೆ ಏತಕ್ಕೆ ನಾವು ಅಸ್ಪೃಶ್ಯರು ಎಂದು ಕರೆಸಿಕೊಳ್ಳಬೇಕು ಎಂದು ಕೇಳುತ್ತಾನೆ. ಅದಕ್ಕೆ ಏನು ಉತ್ತರ ಕೊಡುತ್ತೀರಿ? ಅಂದರೆ ನಾವು ಸಮಾಜದ ಕಟ್ಟುಪಾಡಿಗೆ ಬದ್ಧ ಒದ್ದಾಡಬೇಕಾಗಿದೆ. ಇವೊತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಡೆಪ್ಯೂಟಿ ಕಮೀಷನರ್ ಆಗಿರಬಹುದು, ಒಬ್ಬ ದೊಡ್ಡ ಶ್ರೀಮಂತನಿರಬಹುದು, ಅಧಿಕಾರದಲ್ಲಿ ಅತ್ಯಂತ ದೊಡ್ಡವನಿರಬಹುದು, ಅವನು ಸಮಾಜದ ದೃಷ್ಟಿಯಲ್ಲಿ ವ್ಯವಹಾರಿಕ ದೃಷ್ಟಿಯಲ್ಲಿ ಆಚರಣೆಯಲ್ಲಿ ಪದ್ಧತಿಗೆ ಅನುಗುಣವಾಗಿ ಅವನು ಅಸ್ಪೃಶ್ಯನೇ. ಆದುದರಿಂದ ಹರಿಜನರಿಗೆ, ಹಿಂದುಳಿದವರಿಗೆ ರಾಜ್ಯಾಂಗದಲ್ಲಿ ಎರಡು ವಿಧವಾದ ಸೇಫ್‌ಗಾರ್ಡ್‌ನ್ನು ಕೊಟ್ಟಿದ್ದಾರೆ. ಆ ರಕ್ಷಣೆಗಳು ಯಾವುವು ಎಂದರೆ :

Broadly speaking there are two categories of safeguards for Scheduled castes and Scheduled Tribes :

1. Prohibition of discrimination on ground of religion, race, caste etc. as enunciated in articles 15, 16, 17, 19,(5), 23, 29 etc.

2. Welfare measures as visualised in articles 46, 275, etc.

ಸ್ವಾಮಿ, ಇಷ್ಟಾದರೂ ನಾನು ಕೇಳುತ್ತೇನೆ, ಕೇಂದ್ರ ಸರ್ಕಾರ ಮತ್ತು ಪ್ರಾಂತ ಸರ್ಕಾರಗಳ ಮುಖಾಂತರ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ, ಅದು ಬರೀ ಪುಸ್ತಕದಲ್ಲಿ ಇದೆ. ಈ ರಕ್ಷಣೆಗಳನ್ನು ಕಾರ್ಯಗತ ಮಾಡಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿರಿ? ರಾಜ್ಯಾಂಗದ ಪ್ರಕಾರ ರಾಷ್ಟ್ರಪತಿಗಳು ನೇರವಾಗಿ ಕಮೀಷನರ್ ಫಾರ್ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಂಬ ಒಬ್ಬ ದೊಡ್ಡ ಅಧಿಕಾರಿಯನ್ನು ನೇಮಿಸುತ್ತಾರೆ. ಅವರು ನೇರವಾಗಿ ರಾಷ್ಟ್ರಪತಿಯವರಿಗೆ ಜವಾಬ್ದಾರರು. ಅವರು ಭಾರತ ದೇಶದಲ್ಲಿ ಮೂಲೆ ಮೂಲೆಗೂ, ಮನೆ ಮನೆಗೂ ಹೋಗಿ ಪ್ರತಿ ವರ್ಷವೂ ಈ 1/5 ಭಾಗದ ಹರಿಜನರ ಸ್ಥಿತಿಗತಿಗಳು ಹೇಗಿವೆ, ಅವರ ಪ್ರಗತಿ ಹೇಗಿದೆ, ಅವರು ಯಾವ ರೀತಿ ಮುಂದುವರಿದಿದ್ದಾರೆ, ರಾಜ್ಯಾಂಗದತ್ತವಾದ ರಕ್ಷಣೆಗಳು ಎಷ್ಟರ ಮಟ್ಟಿಗೆ ಕಾರ್ಯಗತವಾಗಿವೆ ಎನ್ನುವ ಬಗ್ಗೆ ಅವರು ರಿಪೋರ್ಟು ಕೊಡುತ್ತಾರೆ. ಈ ರಿಪೋರ್ಟು ಕೇಂದ್ರ ಸರ್ಕಾರದಲ್ಲಿ ಪಾರ್ಲಿಮೆಂಟ್‌ನಲ್ಲೂ ಚರ್ಚೆ ಆಗುತ್ತದೆ. ನಾನು ಹೋದ ಸಲ ಈ ಅಸೆಂಬ್ಲಿಯಲ್ಲಿ ಹೇಳಿದ್ದೇನೆ. ಈ ರಿಪೋರ್ಟ್ ಪ್ರತಿ ಪ್ರಾಂತದ ವಿಧಾನಸಭೆಗಳಲ್ಲೂ ಸಹ ಚರ್ಚೆ ಆಗಬೇಕು ಎಂದು ಮತ್ತು ಈ ವಿಧಾನಸಭೆಯಲ್ಲೂ ಸಹ ಚರ್ಚೆ ಆಗಬೇಕು ಎಂದು.

2-30 P.M.

ನನಗೆ ಕಂಡುಬಂದಿರುವ ಹಾಗೆ ಇಲ್ಲಿ ಈ ವರದಿ 1957ರಿಂದಲೂ ಚರ್ಚೆಯಾಗಿಲ್ಲ. ಈ ರಿಪೋರ್ಟ್ ಇಲ್ಲಿ ಚರ್ಚೆಯಾಗಲೇಬೇಕು. ಇದರಿಂದ ಒಂದು ಮಹದುಪಕಾರವಿದೆ. ಇದನ್ನು ಚರ್ಚೆ ಮಾಡುವುದರಿಂದ ಇಲ್ಲಿ ನಮ್ಮ ಜನರಿಗೆ ಅಂದರೆ ನಮ್ಮ ಜನಾಂಗದವರಿಗೆ ಇಲ್ಲೇನು ಅನುಕೂಲಗಳು ದೊರೆತಿವೆ, ಇಲ್ಲಿ ಇವರಿಗೆ ದೊರೆತಿರತಕ್ಕ ಸ್ಥಾನಮಾನಗಳೇನು? ನಮ್ಮ ಅಕ್ಕಪಕ್ಕದ

(ಶ್ರೀ ಜಿ. ದುಗ್ಗಪ್ಪ)

ಪ್ರಾಂತದಲ್ಲಿರತಕ್ಕ ನಮ್ಮ ಜನಾಂಗದವರಿಗೆ ಅಲ್ಲಿ ದೊರೆತಿರತಕ್ಕ ಸ್ಥಾನಮಾನಗಳೇನು? ಅವರು ಅಲ್ಲಿ ಎಷ್ಟರಮಟ್ಟಿಗೆ ಮುಂದುವರಿದಿದ್ದಾರೆ ಮತ್ತು ಯಾವ ಯಾವ ರಾಜ್ಯದಲ್ಲಿ ಆ ಸಮಿತಿಯವರ ಸಲಹೆಗಳಿಗೆ ಎಷ್ಟೆಷ್ಟರಮಟ್ಟಿಗೆ ಕೊಟ್ಟಿದ್ದಾರೆ ಹಾಗೂ ಅವರ ಸಲಹೆಗಳನ್ನು ಕಾರ್ಯಗತ ಮಾಡಿದ್ದಾರೆ ಅನ್ನುವುದನ್ನು ತಿಳಿದುಕೊಳ್ಳಲು ಇದರಿಂದ ಅನುಕೂಲವಾಗುತ್ತದೆ. ಅಷ್ಟೇ ಅಲ್ಲದೆ ಈ ಅಮೂಲ್ಯ ಸಲಹೆಗಳನ್ನು ಈ ಮಾನ್ಯ ಸಭೆಯಲ್ಲೂ ಚರ್ಚೆ ಮಾಡುವುದರಿಂದ ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಒಂದು ಅವಕಾಶವನ್ನು ಮಾಡಿಕೊಟ್ಟರೆ ಇಲ್ಲಿರತಕ್ಕ ಮಾನ್ಯ ಸದಸ್ಯರು ಯಾರ್ಯಾರು ಏನೇನು ಅಭಿಪ್ರಾಯಗಳನ್ನು ಸೂಚಿಸುತ್ತಾರೆ ಎಂಬುದನ್ನೆಲ್ಲಾ ಕ್ರೋಢೀಕರಿಸಿ ಅದಕ್ಕನುಸಾರವಾಗಿ ಈ ಜನಾಂಗದವರಿಗೆ ಮುಂದುವರಿಯುವುದಕ್ಕೆ ಅಥವಾ ಇವರ ಒಂದು ಅಭಿವೃದ್ಧಿಗೆ ಯಾವ ನೀತಿರೀತಿಗಳನ್ನು ಅನುಸರಿಸಬೇಕೋ ಅವನ್ನು ಅನುಸರಿಸುವುದಕ್ಕೆ ಒಂದು ಅನುಕೂಲವಾಗುತ್ತದೆ. ಆದರೆ ಅದಕ್ಕೆ ಇಲ್ಲಿ ಅವಕಾಶವನ್ನು ಮಾಡಿರುವುದಿಲ್ಲ. ನಾನು ಹೋದ ಸಾರಿ ಕೂಡ ಇಲ್ಲಿ ಇದೇ ಮಾತನ್ನು ಹೇಳಿದ್ದೆ. ಹಿಂದೆ ಒಂದಾವರ್ತಿ ನಮ್ಮ ಮುಖ್ಯ ಮಂತ್ರಿಗಳು ನಮ್ಮ ಒಂದು ಹರಿಜನರ ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕಾಗಿತ್ತು. ಅದಕ್ಕೆ ಒಬ್ಬ ಐ.ಎ.ಎಸ್. ಅಧಿಕಾರಿಗಳು ಕಾರ್ಯದರ್ಶಿಗಳಾಗಿದ್ದರು. ಆ ಕಾರ್ಯದರ್ಶಿಗಳು ಬಹಳ ಸೊಗಸಾಗಿ ಬಟ್ಟೆ ಹಾಕಿಕೊಂಡು ಭೂಷಣವಾಗಿ ತಯಾರಾಗಿ ಸಭೆಗೆ ಬಂದರು ಆ ದಿವಸ ಅಲ್ಲಿಗೆ ಮುಖ್ಯಮಂತ್ರಿಗಳು ಬಂದರು ಅವರು—ಏನ್ರಿ ಈ ಸಬ್‌ಜೆಕ್ಟುಗಳೆಲ್ಲಾ ಏತಕ್ಕೆ! ಈ ಅಜೆಂಡಾ ಏತಕ್ಕೆ? ಇದೊಂದೂ ಬೇಕಾಗಿಲ್ಲ ನಿಮಗೇನು ತೊಂದರೆ ಆಗಿದೆ ಅನ್ನುವುದನ್ನು ನೀವೆಲ್ಲರೂ ತಿಳಿಸಿಬಿಡಿ ಅಷ್ಟೇ ಸಾಕು—ಎಂಬುದಾಗಿ ಹೇಳಿದರು. ಹಾಗೆ ಮುಖ್ಯಮಂತ್ರಿಗಳು ಹೇಳಿದ್ದನ್ನು ನೋಡಿ ಅಲ್ಲಿದ್ದ ನಮಗೆಲ್ಲರಿಗೂ ಬಹಳ ಸಖೇದಾಶ್ಚರ್ಯವಾಯಿತು. ನಮ್ಮ ಮುಖ್ಯ ಮಂತ್ರಿಗಳು ಎಷ್ಟು ಉದಾರಿಗಳು ಎಷ್ಟು ದೊಡ್ಡ ಮನಸ್ಸಿನಿಂದ ಮಾತನಾಡತ್ತಿದ್ದಾರೆ ಎಂದು ಅಲ್ಲಿದ್ದವರೆಲ್ಲರೂ ತಮತಮಗೇನು ಅಡಚಣೆಗಳಿದ್ದವೋ ಅವುಗಳನ್ನೆಲ್ಲಾ ತಿಳಿಸಿದರು. ಆದರೆ ಅಲ್ಲಿ ಆ ದಿವಸ ಏನೇನು ಕುಂದುಕೊರತೆಗಳನ್ನು ಜನರು ನಿವೇದಿಸಿಕೊಂಡಿದ್ದರೋ ಆ ಕೆಲಸಗಳೊಂದೂ ಆಗಲಿಲ್ಲ. ಆ ಕೆಲಸಗಳಾಗದಿದ್ದರೆ ಹೋಗಲಿ, ಆ ವರದಿ ಸಹಾ ಬೆಳಕಿಗೆ ಬರಲಿಲ್ಲ. ಆದರೆ ಅವರು ಬಹಳ ದೊಡ್ಡವರು. ಅವರಿಗೆ ಅನೇಕ ವ್ಯವಹಾರಗಳಿವೆ. ಅವರು ಏನು ಮಾಡಿದರೂ ಸರಿ ಎಂತಲೆ ಹೇಳತಕ್ಕ ಜನರೂ ಇದ್ದಾರೆ. ಆ ಒಂದು ಪ್ರಬಲ ಕಾರಣದಿಂದ ಅವರೂ ಹಾಗೆ ತಾತ್ಸಾರ ಮಾಡಿದ್ದಾರೆ. ಆ ಒಂದು ಪ್ರಬಲವಾದ ತಾತ್ಸಾರಕ್ಕೆ ಕಾರಣರು ಯಾರು ಎಂದರೆ ಯಾರು ಈ ದಿವಸ ನಮ್ಮ ಮಂತ್ರಿಮಂಡಲದಲ್ಲಿ ಈ ಐದನೇ ಒಂದುಭಾಗ ನತದೃಷ್ಟ ಜನಾಂಗದವರನ್ನು ಪ್ರತಿನಿಧಿಸತಕ್ಕವರಾಗಿ ಇದ್ದಾರೋ, ಇಲ್ಲಿ ನಮ್ಮ ಪರವಾಗಿ ಮಂತ್ರಿ ಮಂಡಲದಲ್ಲಿ ಕೆಲಸ ಮಾಡುತ್ತಿದ್ದಾರೋ ಅವರು ಅಷ್ಟು ಪ್ರಬಲರಾಗಿಲ್ಲ ಅನ್ನುವುದೇ ಪ್ರಬಲವಾದ ಕಾರಣ.

ನಾನು ಈ ದಿವಸ ಇಲ್ಲಿ ನಿಂತು ದುಗ್ಗಪ್ಪನಾಗಿ ಮಾತನಾಡುತ್ತಿಲ್ಲ. ನಾನು ಒಂದು ಸಾರ್ವಜನಿಕ ಮತದಾರರ ಕ್ಷೇತ್ರದಿಂದ ಬಂದು ಇಲ್ಲಿ ನಿಂತು ಮಾತನಾಡುತ್ತಿಲ್ಲ. ಆದರೆ ನಾನು ಬಹಳ ಹಿಂದುಳಿದ ಜನಾಂಗದ ಪ್ರತಿನಿಧಿಯಾಗಿ ಬಂದು ಇಲ್ಲಿ ಈ ದಿವಸ ಮಾತನಾಡುತ್ತಿದ್ದೇನೆ. ಹಾಗೆ ನಾನು ಇಲ್ಲಿಗೆ ಅವರ ಪ್ರತಿನಿಧಿಯಾಗಿ ಬಂದು ಅವರ ಬಗ್ಗೆ ನಾನು ನನ್ನ ಕರ್ತವ್ಯವನ್ನು ಸರಿಯಾಗಿ ಪರಿಪಾಲಿಸದಿದ್ದರೆ ನಾನು ನನ್ನ ಕರ್ತವ್ಯದಲ್ಲಿ ಲೋಪಮಾಡಿದ ಹಾಗೆ ಆಗುತ್ತದೆ. ಇಲ್ಲಿ ಆಗತಕ್ಕ ಒಬ್ಬ ವ್ಯಕ್ತಿಯ ಕರ್ತವ್ಯಲೋಪದಿಂದ ಅಲ್ಲಿ ಒಂದು ಕ್ಷೇತ್ರದಲ್ಲಿರತಕ್ಕ ಇಡೀ ಜನಾಂಗ ತೊಂದರೆಗೀಡಾದರೆ—ಇಲ್ಲಿ ಮಂತ್ರಿ ಮಂಡಲದಲ್ಲಿ ಹರಿಜನ ಪ್ರತಿನಿಧಿಯಾಗಿರತಕ್ಕ ವ್ಯಕ್ತಿ ತನ್ನ ಕರ್ತವ್ಯದಲ್ಲಿ ಲೋಪ ಮಾಡಿದರೆ ಅದರಿಂದ ಇಡೀ ದೇಶದಲ್ಲಿರತಕ್ಕ ಈ ಜನಾಂಗದವರೆಲ್ಲಾ ತೊಂದರೆಗೀಡಾಗಬೇಕಾಗುವುದು. ಈ ವರ್ಗದವರ ಅಭಿವೃದ್ಧಿಗಾಗಿ ಶ್ರಮಿಸಬೇಕು ಎಂಬ ಮನಸ್ಸು ಅಧಿಕಾರ ವರ್ಗದವರಿಗಿಲ್ಲ. ನಮ್ಮ ಅಧಿಕಾರಿಗಳ ಬಗ್ಗೆ ಮಾತನಾಡಿದರೆ These are all matters of administration. The administrative officers belonging to Scheduled Castes and Scheduled Tribes approach these members. So definitely this is a matter of bringing in non-officia linfluence in the matter of administration, ಎಂದು ಹೇಳಿಬಿಡುತ್ತಾರೆ. ಹೀಗೆ ಹೇಳುತ್ತ ಅಧಿಕಾರಿಗಳು ಇದು ಅಡ್ಮಿನಿಸ್ಟ್ರೇಟಿವ್ ಮ್ಯಾಟರ್ಸಿಗೆ ಸಂಬಂಧಪಟ್ಟದ್ದು ಎಂದು ಅವರನ್ನು ಉತ್ಪ್ರೇಕ್ಷೆ ಮಾಡುತ್ತಾರೆ. ಅದಕ್ಕೆ ಒಂದು ಕಾರಣವನ್ನೂ ಸಹಾ ಕೊಡಬಹುದು. ಈ ದಿವಸ ರಾಜ್ಯದಲ್ಲಿ ಈ ರಾಜಕೀಯ ಅಧಿಕಾರ ಮತ್ತು ಆಡಳಿತದ ಅಧಿಕಾರ ಯಾರ ಕೈಲಿವೆ? ಈ ದಿವಸ ನಾನೇನು ಮಾಡಿದರೂ

ನನ್ನನ್ನು ಬಚಾಯಿಸಿಕೊಂಡು ಹೋಗುತ್ತಾರೆಂಬ ಧೈರ್ಯ ಅಧಿಕಾರಿಗಳಿಗಿದೆ. ಆದರೆ ನಮ್ಮ ಅಧಿಕಾರಿಗಳ ಬಗ್ಗೆ ನಮ್ಮ ಪ್ರತಿನಿಧಿಯಾಗಿ ಮಂತ್ರಿ ಮಂಡಲದಲ್ಲಿ ಕೆಲಸ ಮಾಡತಕ್ಕ ವ್ಯಕ್ತಿ ಕಾರ್ಯಕ್ರಮ ಕೈಗೊಳ್ಳಲು ಎಷ್ಟರಮಟ್ಟಿಗೆ ದಕ್ಷತೆಯುಳ್ಳವರಾಗಿದ್ದಾರೆ? ಅವರು ಎಷ್ಟು ದಕ್ಷತೆಯಿಂದ ಇಲ್ಲಿಯ ತನಕ ಕೆಲಸಗಳನ್ನು ಧೈರ್ಯದಿಂದ ಮುಂದುವರಿಸಿಕೊಂಡು ಬಂದಿದ್ದಾರೆ ಎಂದು ಕೇಳುತ್ತೇನೆ? ಆದರೆ ಅವರಿಗೆ ಅಲ್ಲಿ ಈ ಕೆಲಸಗಳನ್ನು ದಕ್ಷತೆಯಿಂದ ಮಾಡುವುದಕ್ಕಾಗುತ್ತಿಲ್ಲ. ಅದನ್ನು ಸರಿಪಡಿಸಲಿರುವ ಉಪಾಯ ಒಂದೇ ಒಂದು. ಅದೇನೆಂದರೆ, ಅವರು ಆ ಕ್ಯಾಬಿನೆಟ್‌ನಿಂದ ರಾಜೀನಾಮೆ ಕೊಟ್ಟು ಹೊರಗೆ ಬರುವುದು. ಅವರು ಹಾಗೆ ಮಾಡಲಿ ಎಂದರೆ ಅವರು ಇದನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳದೆ ತಮ್ಮ ಒಂದು ಅಧಿಕಾರ ಲಾಲಸೆ ಹಾಗೂ ತನ್ನ ಸ್ವಾರ್ಥ ಹಿತಕ್ಕಾಗಿ ಇಡೀ ಜನಾಂಗದ ಏಳಿಗೆಯನ್ನು ಬಲಿಕೊಟ್ಟು ಅಧಿಕಾರದಲ್ಲಿದ್ದಾರೆ. ಒಂದು ರಾಜ್ಯದಲ್ಲಿರತಕ್ಕ ತನ್ನ ಜನಾಂಗದವರ ಅಭಿವೃದ್ಧಿಯನ್ನು ಮರೆತರೆ ಮುಂದೆ ನಮ್ಮ ಪೀಳಿಗೆ ಇಂದಿನ ನಮ್ಮ ಕೆಲಸಕ್ಕಾಗಿ ಶಪಿಸಾರು. ಅಲ್ಲಿ ತಮಗೆ ಎಫಿಷಿಯೆಂಟಾಗಿ ಕೆಲಸ ಮಾಡುವುದಕ್ಕಾಗದಿದ್ದರೆ ಅವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಟ್ಟು ಬರಲಿ. ಈ ದಿವಸ ನಮ್ಮ ಮಂತ್ರಿ ಮಂಡಲದಲ್ಲಿರತಕ್ಕ ಹರಿಜನ ಪ್ರತಿನಿಧಿಗೆ ಇಡೀ ಜನಾಂಗದ ಅಭಿವೃದ್ಧಿಗೆ ಶ್ರಮಿಸಲು ಸಾಧ್ಯವಿಲ್ಲ, ಅವರ ಕೈಯಿಂದ ಆ ಕೆಲಸವಾಗುವುದಿಲ್ಲ, ಅವರಿಗೆ ಅದೊಂದು ಅಸಾಧ್ಯವಾದ ಕಾರ್ಯ ಎಂದರೆ ಅಲ್ಲಿಗೆ ಸಾಕು. ನಾವು ಅದನ್ನು ಇನ್ನು ಮುಂದೆ ಹೆಚ್ಚು ತರ್ಕಮಾಡುವುದು ಬೇಡ.

ಇನ್ನು ನಾನೀಗ "Protective measures" ಪ್ರೊಟೆಕ್ಟೀವ್ ಮೆಷರ್ಸುಗಳು ಅಂದರೆ ಯಾವುವು? ಅವುಗಳನ್ನು ಅನುಸರಿಸಿ ಈ ಜನಾಂಗಕ್ಕೆ ಎಷ್ಟರಮಟ್ಟಿಗೆ ರಕ್ಷಣೆ ಕೊಟ್ಟಿದ್ದಾರೆ ಅನ್ನುವುದನ್ನು ಪ್ರಸ್ತಾಪ ಮಾಡಬಯಸುತ್ತೇನೆ:—

Scrutiny of legislation concerning Scheduled Castes and Scheduled Tribes; enquiry into complaints and representations; undertaking of case studies; maintenance of extensive contacts; thoroughly and freely mixing with the Scheduled Caste people. These are the duties of the Commissioner. Broadly speaking there are two categories of safeguards for S.C. and S.T. as ennunciated in the constitution protective safeguards such as reservation of seats in services, abolition of untouchability, etc., welfare measures—ಆದರೆ ಈ ರಕ್ಷಣೆಗಳೆಲ್ಲಾ ಪುಸ್ತಕದಲ್ಲೇ ಉಳಿದಿವೆ. ಆ ಮಾರ್ಟಿನ್ ಲೂಥರ್ ಕಿಂಗ್ ಹೀಗೆ ಹೇಳಿದ್ದಾನೆ ನಮಗೆ ಆ ಪುಸ್ತಕದಲ್ಲಿರತಕ್ಕ ರಕ್ಷಣೆಗಳು ಬೇಡ, ಆತನು ಆ ನೀಗ್ರೋ ಜನರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಕಾಲದಲ್ಲಿ ಹೇಳಿದ ಮಾತುಗಳಿವು—ನಮಗೆ ಕಾರ್ಯತಃ ರಕ್ಷಣೆಗಳನ್ನು ಕೊಡಿ ಎಂದು—ಹೀಗೆ ಹೇಳಿದ್ದಾನೆ: Martin King Luther: "We do not want these rights in theory: but we want these rights in result." ಈ ರಾಜ್ಯಾಂಗದತ್ತವಾದ ರಕ್ಷಣೆಗಳೇಸಿವೆ ಅವು ಹಾಗೇ ಪುಸ್ತಕದಲ್ಲಿ ಉಳಿದವು. ಅವು ಇನ್ನೂ ಕಾರ್ಯಗತವಾಗಲಿಲ್ಲ. ನಮ್ಮಲ್ಲಿ ಈ ದಿವಸ ಅನೇಕರು ಈ ರಿಜರ್ವೇಷನ್ ಏತಕ್ಕಿರಬೇಕು ಇವು ಯಾವುವೂ ಬೇಕಿಲ್ಲ. ಇವೆಲ್ಲಾ ಹೋಗಬೇಕು ಅನ್ನತಕ್ಕವರೂ ಇದ್ದಾರೆ. ಈ ದಿವಸ ಇಲ್ಲಿಂದ ಆ ರಾಜ್ಯಸಭೆಗೆ ಹೋಗುವುದಕ್ಕೆ ನಮ್ಮ ಒಬ್ಬ ಸದಸ್ಯರಿಗೆ ಸಾಧ್ಯವಾಗಿದೆ. ಅಂದರೆ ಹೀಗೆ ನಾವು ಒಂದು ಜನರಲ್ ಸೀಟಿನಿಂದ ಕಂಟೆಸ್ಟ್ ಮಾಡಿ ಅಲ್ಲಿಗೆ ಹೋಗುವುದಕ್ಕೆ ಸಾಧ್ಯವಿದೆಯೇ ಎಂದು ಕೇಳುತ್ತೇನೆ. ನಮ್ಮ ಮೇಲ್ಮನೆಯಿಂದ ಕಳೆದ 20 ವರ್ಷಗಳಲ್ಲಿ ಒಬ್ಬ ಸದಸ್ಯರು ಮಾತ್ರ ಅಂದರೆ ನಮ್ಮ ಹರಿಜನ ಜನಾಂಗದ ಒಬ್ಬ ಸದಸ್ಯರು ರಾಜ್ಯ ಸಭೆಗೆ ಈ ದಿವಸ ಆರಿಸಿ ಹೋದಂತಾಯಿತು. ಹಿಂದೆ ಆ ಮೇಲ್ಮನೆಯಲ್ಲಿ 40 ಜನ ಸದಸ್ಯರುಗಳಿದ್ದಾಗ ಅಲ್ಲಿ ಇಬ್ಬರು ಹರಿಜನ ಸದಸ್ಯರು ಇರುತ್ತಿದ್ದರು. ಈ ದಿವಸ ಅಲ್ಲಿ ನಮ್ಮ ಜನಾಂಗದವರು ಎಷ್ಟು ಜನರಿದ್ದಾರೆ? ನಮ್ಮ ರಾಜ್ಯಾಂಗದಲ್ಲಿ ಇದನ್ನೆಲ್ಲಾ ನಿಷ್ಕರ್ಷೆ ಮಾಡಿದ್ದರೂ ನಾವು ಅದರ ಬಗ್ಗೆ ತಪ್ಪನ್ನು ಮಾಡುತ್ತಿದ್ದೇವೆ. ಇಲ್ಲಿಗೆ ನಾವು ಚುನಾವಣೆಯಲ್ಲಿ ಆರಿಸಿ ಬಂದನಂತರ ಇಲ್ಲಿ ನಾವೆಲ್ಲರೂ ದೇಶಕ್ಕೆ ದ್ರೋಹ ಮಾಡುವುದಿಲ್ಲ ನಾವು ರಾಜ್ಯಾಂಗಕ್ಕೆ ನಿಷ್ಠೆಯಿಂದ ನಮ್ಮ ಸೇವೆಸಲ್ಲಿಸಿಕೊಂಡು ಬರುತ್ತೇವೆಂಬುದಾಗಿ ಇಲ್ಲಿ ಪ್ರಮಾಣವಚನವನ್ನು ತೆಗೆದುಕೊಂಡು ಆನಂತರ ಆ ಪ್ರಮಾಣಕ್ಕೆ ತದ್ವಿರುದ್ಧವಾಗಿ ನಡೆಯತಕ್ಕದ್ದು ಇವೆಯಲ್ಲಾ ಇದು ದೇಶ ದ್ರೋಹಗಳಲ್ಲೆಲ್ಲಾ ಮಹಾ ಘೋರವಾದ ದ್ರೋಹವೆಂದು ನಾನು ಹೇಳುತ್ತೇನೆ ಈ ಕಾರ್ಯವನ್ನು ನಡೆಸತಕ್ಕ ಹಾದಿಯಲ್ಲಿ ಅನೇಕ ತೊಂದರೆಗಳು ಬರುತ್ತವೆ, ಈ ಜನಾಂಗದವರ ಅಭಿವೃದ್ಧಿಯನ್ನು ನೋಡಿ ಇವರ ಪ್ರಗತಿಯನ್ನು ನೋಡಿ ಅಸೂಯೆ ಪಡದೆ ಕೆಲಸಮಾಡುವ ಒಬ್ಬ ವ್ಯಕ್ತಿ ಅಲ್ಲಿಗೆ ಬೇಕು. ಬೂಟ್ಸನ್ನು ಹಾಕಿದವನಿಗೆ ಗೊತ್ತು ಆ ಬೂಟ್ಸ್ ಒಳಗಡೆ ಎಲ್ಲಿ ಕಚ್ಚುತ್ತೆ ಅನ್ನುವುದು. ಅದು ಬೇರೊಬ್ಬರಿಗೆ ಗೊತ್ತಾಗುವುದಿಲ್ಲ.

(ಶ್ರೀ ಜಿ. ದುಗ್ಗಪ್ಪ)

ನಮ್ಮ ಸ್ನೇಹಿತರು ನೇರವಾಗಿ ನೋಡಿದರೆ ಗೊತ್ತಾಗುತ್ತದೆ. ತೊಂದರೆಯನ್ನು ಅನುಭವಿಸುವ ಜನಗಳಿಗೆ ಎಲ್ಲ ನೋವಿದೆ ಎಂಬುದು ಗೊತ್ತಾಗುತ್ತದೆ. ಅದಕ್ಕೆ ಪರಿಹಾರವೇನು ಎಂಬುದನ್ನು ಅವರೇ ಕಂಡುಹಿಡಿಯುತ್ತಾರೆ. ಆದ್ದರಿಂದ ಆ ಜನಾಂಗಕ್ಕೆ ಸಂಬಂಧಪಟ್ಟ ವ್ಯಕ್ತಿಗೇ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಪೋರ್ಟ್‌ಫೋಲಿಯೋವನ್ನು ಕೊಡಬೇಕು ಎನ್ನುವ ಸೌಜನ್ಯ ಇವರಿಗೆ ಇಲ್ಲ, ಔದಾರ್ಯ ಇವರಿಗೆ ಇಲ್ಲ. ಈ ಸೋಷಿಯಲ್ ವೆಲ್‌ಫೇರ್ ಪೋರ್ಟ್‌ಫೋಲಿಯೋವನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳು ನನಗೆ ವೈಯಕ್ತಿಕವಾಗಿ ಸ್ನೇಹಿತರು. ಅವರು ನನಗೆ ಚೆನ್ನಾಗಿ ಗೊತ್ತು. ಆದರೆ ನಾನು ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾತನಾಡುವಾಗ ಅವರು ನನ್ನ ಸ್ನೇಹಿತರು ಎಂದು ನಾನು ಮಾತನಾಡುವುದಕ್ಕೆ ಆಗುವುದಿಲ್ಲ. ನನ್ನ ಒಂದು ಅಭಿಪ್ರಾಯದಲ್ಲಿ ಈ ಸೋಷಿಯಲ್ ವೆಲ್‌ಫೇರ್ ಪೋರ್ಟ್‌ಫೋಲಿಯೋವನ್ನು ಯಾರಾದರೂ ಹರಿಜನರು ತೆಗೆದುಕೊಳ್ಳಬೇಕಾಗಿತ್ತು. ಆಗ ಅವರಿಗೆ ಹರಿಜನರ ಕಷ್ಟ ನಿಷ್ಠೂರಗಳು ಏನು ಎಂಬುದು ಗೊತ್ತಾಗುತ್ತಿತ್ತು. ಅವಕ್ಕೆ ಏನು ಮಾಡಬೇಕೆಂಬುದೂ ಅವರಿಗೆ ಗೊತ್ತಾಗುತ್ತಿತ್ತು. ಬೇರೆಯವರಿಗೆ ಹರಿಜನರ ವಿಚಾರಗಳು ಗೊತ್ತಿದ್ದರೂ ಕೂಡ ಅವರಿಗೆ ಏನು ಅನುಕೂಲಗಳನ್ನು ಮಾಡಬೇಕೆಂಬುದು ಗೊತ್ತಾಗುವುದಿಲ್ಲ. ಈಗ ಒಂದು ಉದಾಹರಣೆಗೆ ಹೇಳಬೇಕಾಗಿದ್ದರೆ, ಹರಿಜನರ ಪ್ರತಿನಿಧಿಯಾಗಿರತಕ್ಕ ಮಾನ್ಯ ರೆವಿನ್ಯೂ ಮಂತ್ರಿಗಳು ಇವೊತ್ತಿನ ದಿವಸ ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಅವರು ಇಲ್ಲಿ ಇದ್ದರೆ ಕೆಲವು ವಿಷಯಗಳನ್ನು ನಾನು ಹೇಳಬೇಕೆಂದಿದ್ದೆ. ಈಗ ಸರ್ಕಾರದವರು ಹರಿಜನರಿಗೆ ಸಂಬಂಧಪಟ್ಟ ಹಾಗೆ ಒಂದು ಪುಸ್ತಕವನ್ನು ಹೊರಡಿಸಿದ್ದಾರೆ. ಅದರ ಹೆಸರು Ameliorative measures for Backward Classes in Mysore State ಎಂದು. ಇದರಲ್ಲಿರತಕ್ಕ ವರದಿಯನ್ನು ಬೇಕಾದರೆ ಓದುತ್ತೇನೆ. ಕೇರಳದಲ್ಲಿ ಹರಿಜನರಿಗೋಸ್ಕರ ಮತ್ತು ಹಿಂದುಳಿದ ವರ್ಗದವರಿಗೋಸ್ಕರ ಬೇರೆ ಒಂದು ಕಾನೂನನ್ನು ಮಾಡಿ ಇಟ್ಟಿದ್ದಾರೆ. ಅವರಿಗೆ ಜಮೀನು ಮಂಜೂರುಮಾಡುವುದಕ್ಕಾಗಿ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಹಾಗೆ ಬೇರೆ ಒಂದು ಕಾನೂನು ಇದೆ. ಮೈಸೂರಿನಲ್ಲಿ ಲ್ಯಾಂಡ್ ರೆವಿನ್ಯೂ ಕೋಡನ್ನು ಸರಿಯಾಗಿ ಜಾರಿ ಮಾಡುತ್ತಿಲ್ಲ. ಹರಿಜನರಿಗೆ ಮತ್ತು ಇತರ ಹಿಂದುಳಿದ ವರ್ಗದವರಿಗೆ ಸರಿಯಾಗಿ ಜಮೀನು ಮಂಜೂರು ಮಾಡುತ್ತಿಲ್ಲ. ಬೆಳಿಗ್ಗೆ ಪ್ರಶ್ನೋತ್ತರ ಕಾಲದಲ್ಲಿ ಜಮೀನು ಮಂಜೂರಾತಿಗೆ ಸಂಬಂಧಪಟ್ಟ ಹಾಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಕೊಟ್ಟಂತಹ ಒಂದು ಉತ್ತರವೇ ಸಾಕು. ಆ ಒಂದು ನಿದರ್ಶನವೇ ಸಾಕು. ಶಿವಮೊಗ್ಗ ಜಿಲ್ಲೆಯಲ್ಲಿ 200–300 ಎಕರೆ ಜಮೀನು ಇರತಕ್ಕವರಿಗೆ ನೀರಾವರಿ ಜಮೀನನ್ನು ಕೊಟ್ಟಿದ್ದಾರೆ. ಹಿಂದುಳಿದ ಜನಗಳಿಗೆ ಹರಿಜನರಿಗೆ ಅಲ್ಲಿ ಜಮೀನನ್ನು ಕೊಟ್ಟಿಲ್ಲ. ಜಮೀನು ಇಲ್ಲದೇ ಇರುವವರಿಗೆ ಜಮೀನು ಕೊಟ್ಟಿಲ್ಲ. ಊರಿನಲ್ಲಿ ಬಲಾಢ್ಯರಾಗಿರತಕ್ಕವರು, ಪ್ರಮುಖರಾಗಿರತಕ್ಕವರು ಬಗರ್ ಹುಕುಂನಿಂದ ಸಾಗು ಮಾಡಿದ್ದರೆ ಅಂಥವರಿಗೇ ಜಮೀನು ಕೊಟ್ಟಿದ್ದಾರೆ. ಈಗ ಅಲ್ಲಿ ಗೂಂಡಾಗಿರಿ ಹೆಚ್ಚಿದೆ. ಮಂಡ್ಯಾ ಜಿಲ್ಲೆಯಲ್ಲಿ, ಬೀದರ್‌ನಲ್ಲಿ, ಚಿತ್ರದುರ್ಗದಲ್ಲಿ, ಹರಿಹರದಲ್ಲಿ, ದಾವಣಗೆರೆಯಲ್ಲಿ ಯಾರು ಯಾರಿಗೆ ಜಮೀನುಗಳನ್ನು ಕೊಡುತ್ತಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಹರಿಜನಾಂಗದ ಪ್ರತಿನಿಧಿಯಾದ ರೆವಿನ್ಯೂ ಮಂತ್ರಿಗಳು ಇದ್ದಾರೆ. ಅವರು ಎಷ್ಟು ಜನ ಹರಿಜನರಿಗೆ ಜಮೀನನ್ನು ಮಂಜೂರುಮಾಡುತ್ತಿದ್ದಾರೆ, ಅನುಕೂಲ ಮಾಡುತ್ತಿದ್ದಾರೆ ಎಂಬುದನ್ನು ಹೇಳಲಿ. ನೀರಾವರಿ ಜಮೀನನ್ನು ಮಂಜೂರುಮಾಡತಕ್ಕ ವಿಷಯದಲ್ಲಿ ರೆವಿನ್ಯೂ ಮಂತ್ರಿಗಳಿಗೆ ಎಷ್ಟು ಅರ್ಜಿಗಳು ಬಂದಿವೆ ಎಂಬುದನ್ನು ಹೇಳಲಿ. ಈ ನತದೃಷ್ಟ ಹರಿಜನಗಳು ಹೇಳುತ್ತಿದ್ದಾರೆ, ನಮಗೆ ಗ್ರಾಮಗಳಲ್ಲಿ ವ್ಯವಸಾಯ ಮಾಡುವುದಕ್ಕೆ ಜನಗಳು ಜಮೀನನ್ನು ಬಿಟ್ಟುಕೊಡುವುದಿಲ್ಲ ಎಂದು. ಅವರಿಂದ ಬಂದಂತಹ ಅರ್ಜಿಗಳನ್ನು ನಾನು ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಆ ಬಗ್ಗೆ ಅವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ನಾನು ಕೇಳುತ್ತೇನೆ. ಇವೊತ್ತಿನ ದಿವಸ ಈ ಜಮೀನು ವ್ಯವಹಾರಕ್ಕೆ ಸಂಬಂಧಪಟ್ಟ ಹಾಗೆ ಹರಿಜನರಿಂದ 200-300 ಅರ್ಜಿಗಳು ಬರುತ್ತಿವೆ. ಹರಿಜನರ ಪರವಾಗಿ ಒಬ್ಬ ವ್ಯಕ್ತಿಗಳು ಮಂತ್ರಿಗಳಾಗಿ ಅಧಿಕಾರದಲ್ಲಿದ್ದಾರೆ. ಅವರು ಇವರ ಬಗ್ಗೆ ಏನು ಮಾಡಿದ್ದಾರೆ! ಅವರು ಇವೊತ್ತು ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಅವರಿಗೆ ಚೆನ್ನಾಗಿ ಮನದಟ್ಟಾಗುವ ಹಾಗೆ ಹೇಳಬಹುದಾಗಿತ್ತು. ಇವರು ಇಲ್ಲಿ ಇದ್ದಿದ್ದರೆ ಹೇಳುವುದಕ್ಕೆ ಒಂದು ತರಹ ಸ್ಫೂರ್ತಿ ಬರುತ್ತಿತ್ತು. ಹಿಂದುಳಿದ ವರ್ಗದವರ ಮತ್ತು ಹರಿಜನರ ಅಭಿವೃದ್ಧಿಯ ವಿಷಯದಲ್ಲಿ, ಅವರ ಕಷ್ಟ ನಿಷ್ಠೂರಗಳೇನು ಎಂಬುದನ್ನು ತಿಳಿದುಕೊಂಡು ಅವರ ಅಭಿವೃದ್ಧಿಯ ಬಗ್ಗೆ ಇವರು ಸಾಕಷ್ಟು ಕೆಲಸವನ್ನು ಮಾಡಿಲ್ಲ. ಇವರು ಇಲ್ಲಿ ಹರಿಜನರ ಪರವಾಗಿ ರೆವಿನ್ಯೂ ಮಂತ್ರಿಗಳಾಗಿರುವುದಕ್ಕೆ ನಾಲಾಯಕ್ ಎಂದು ನಾನು ಹೇಳುತ್ತೇನೆ. ಮಂತ್ರಿಗಳು ಉತ್ತರವನ್ನು ಹೇಳಬೇಕಾಗಿದ್ದರೆ ಪ್ರಾಸಂಗಿಕವಾಗಿ ಹೇಳುತ್ತಾರೆ. ಇಲ್ಲಿ ನಾವು ಏನಾದರೂ ಒಂದು ಪ್ರಶ್ನೆಯನ್ನು ಪ್ರಸ್ತಾಪ ಮಾಡಿದರೆ ಅದರ ಹಿನ್ನೆಲೆ ಏನು ಎನ್ನುವುದನ್ನು ಅರಿತು ಸರ್ಕಾರದವರು ಉತ್ತರವನ್ನು

ಕೊಡಬೇಕು. ಮೊನ್ನೆ ಇದೇ ಮಹಾಸಭೆಯಲ್ಲಿ ಶ್ರೀಮಾನ್ ಪುಟ್ಟದಾಸ ಅವರು ಮೆಡಿಕಲ್ ಡಿಮ್ಯಾಂಡಿನ ಮೇಲೆ ಪ್ರಸ್ತಾಪ ಮಾಡುತ್ತಾ ಆಸ್ಪತ್ರೆಗಳಲ್ಲಿ ಸ್ಪಿರಿಟ್ ಇರುವುದಿಲ್ಲ ಎಂದು ಹೇಳಿದರು. ನಮ್ಮ ಮಾನ್ಯ ಮಂತ್ರಿಗಳಾದ ವೈದ್ಯಕೀಯ ಇಲಾಖೆಯ ಮಂತ್ರಿಗಳಿಗೆ ಗೊತ್ತಿರುವಹಾಗೆ ಹಿಂದಿನ ಕಾಲದಲ್ಲಿ ಅಸೆಂಬ್ಲಿಯಲ್ಲಿ ಸರ್ಕಾರದ ಪ್ರತಿನಿಧಿಗಳು ಎಂದರೆ ಇಲಾಖೆಯ ಅಧಿಕಾರಿಗಳು ಉತ್ತರವನ್ನು ಹೇಳುತ್ತಿದ್ದರು ಅವರು ಯಾವ ರೀತಿ ಉತ್ತರವನ್ನು ಕೊಡುತ್ತಿದ್ದರು ಎಂಬುದು ಎಲ್ಲರಿಗೂ ಗೊತ್ತಿದೆ. ಅದೇ ಮಾದರಿಯಲ್ಲಿ ನಮ್ಮ ಮಾನ್ಯ ಮಂತ್ರಿಗಳಾದ ಪುಟ್ಟಸ್ವಾಮಿಯವರು ಮೊನ್ನೆ ಈ ಸಭೆಯಲ್ಲಿ ಬಹಳ ವ್ಯಂಗ್ಯವಾಗಿ ಉತ್ತರವನ್ನು ಹೇಳಿದರು. ಸ್ಪಿರಿಟ್ಟಿಗೆ ಬದಲಾಗಿ ಡೆಟಾಲ್ ಉಪಯೋಗಿಸುತ್ತೇವೆ ಎಂದು ಹೇಳಿದರು. ಇದರ ಹಿನ್ನಲೆ ಏನು, ಜನರ ಮನೋಭಿಪ್ರಾಯವೇನು ಎಂಬುದನ್ನು ತಿಳಿದುಕೊಳ್ಳಬೇಕು. ಸುಮ್ಮನೆ ಮಾತಿಗೆ ಮಾತು ಹೇಳಿ ಕಾಲ ಕಳೆದು ಹೋಗತಕ್ಕ ಸಭೆ ಇದಲ್ಲ. ಸಾಮಾನ್ಯವಾದ ಕೋ-ಆಪರೇಟೀವ್ ಸೊಸೈಟಿಯ ಜನರಲ್‌ಬಾಡಿ ಮೀಟಿಂಗ್ ಮಾಡಿದಹಾಗೆ ಆಗಬಾರದು ಎಂದು ನಾನು ಹೇಳುತ್ತಿದ್ದೇನೆ. ಸ್ವಲ್ಪ ಎಫೆಕ್ಟೀವ್ ಆಗಿ ಇರಬೇಕು. ಹಿಂದೆ ಶಾಸನ ಸಭೆ ನಡೆಯುವಾಗ ಸದಸ್ಯರುಗಳಿಗೆ ಉಚಿತ ಕಾಫಿ ಮತ್ತು ತಿಂಡಿಯ ವ್ಯವಸ್ಥೆ ಆಗುತ್ತಿತ್ತು. ಆ ಕಾಲದಲ್ಲಿ ಒಂದು ದೊಡ್ಡ ಉಪಕಾರವಾಗುತ್ತಿತ್ತು. ಶಾಸನ ಸಭೆಯಲ್ಲಿ ಯಾವುದೇ ವಿಚಾರವನ್ನು ಪ್ರಸ್ತಾಪ ಮಾಡಿದರೂ ಕೂಡ ಈ ಸಭೆಯಲ್ಲಿ ಇಲಾಖೆಯ ಮುಖ್ಯಾಧಿಕಾರಿಗಳು ಮತ್ತು ಇಲಾಖೆಯ ಕಾರ್ಯದರ್ಶಿಗಳು ಇರುತ್ತಿದ್ದರು, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತಹ ವಿಷಯ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಹೋಗುತ್ತಿತ್ತು. ಅದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಅವರು ತೆಗೆದುಕೊಳ್ಳುತ್ತಿದ್ದರು. ಈಗ ಅಧಿಕಾರಿಗಳು ಏನು ಹೇಳುತ್ತಿದ್ದಾರೆ ಎಂದರೆ, ನಮಗೆ ಮಂತ್ರಿಗಳ ಕಾಟ ಎಂದು ಹೇಳುತ್ತಿದ್ದಾರೆ. ಅವರಿಗೂ ಬೇಜಾರು ಆಗಿದೆ. ಒಳ್ಳೆಯದಕ್ಕೂ, ಕೆಟ್ಟದ್ದಕ್ಕೂ ಸಣ್ಣದಕ್ಕೂ, ದೊಡ್ಡದಕ್ಕೂ ಮಂತ್ರಿಗಳ ಸಲಹೆ ಇಲ್ಲದೆ ಮುಂದಕ್ಕೆ ಹೋಗುವ ಹಾಗೇ ಇಲ್ಲ. ಪ್ರತಿಯೊಂದಕ್ಕೂ ಮಂತ್ರಿಗಳನ್ನು ಕೇಳಬೇಕು. ಇದರಿಂದ ಏನಾಗಿದೆ ಎಂದರೆ, ಜವಾಬ್ದಾರಿಯುತವಾದ ಅಧಿಕಾರಿಗಳೂ ಸಹ ಸುಮ್ಮನೆ ಕೈಕಟ್ಟಿಕೊಂಡು ಅಸಹಾಯಕರಾಗಿ ಕುಳಿತುಕೊಂಡಿದ್ದಾರೆ. ಪ್ರತಿಯೊಂದಕ್ಕೂ ಮಂತ್ರಿಗಳು ಇಂಟರ್‌ಫಿಯರ್ ಆಗುತ್ತಾರೆ. ಅದು ಸರಿಯಲ್ಲ; ಒಂದು ನೀತಿ ನಿರೂಪಣೆಯನ್ನು ಹಾಕಿದರೆ ಒಂದು ತತ್ವವನ್ನು ನಿರೂಪಣೆ ಮಾಡಿದರೆ, ಅದರಂತೆ ಅಧಿಕಾರಿಗಳು ನಡೆಸಿಕೊಂಡು ಹೋಗುತ್ತಾರೆ. ಸಣ್ಣಪುಟ್ಟದ್ದಕ್ಕೆಲ್ಲಾ ಮಂತ್ರಿಗಳು ಕೈ ಹಾಕುವುದಕ್ಕೆ ಹೋಗುವುದು ಸರಿಯಲ್ಲ. ಇದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕೆಲಸದಲ್ಲಿ ಆಸಕ್ತಿ ಇಲ್ಲದೆ ಹೋಗಿದೆ. ಅದೃಷ್ಟವಶಾತ್ ಈ ಇಲಾಖೆಗೆ ಈಗ ಸೀನಿಯರ್ ಸ್ಕೇಲಿನ ಆಫೀಸರನ್ನು ಡೈರೆಕ್ಟರಾಗಿ ಹಾಕಿದ್ದಾರೆ. ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಅಧಿಕಾರಿಗಳಿಗೆ ಸ್ವಾತಂತ್ರ್ಯವನ್ನು ಕೊಡಿ, ನಿಮ್ಮ ಕಾರ್ಯನೀತಿ ಏನಿದೆ ಅದರಂತೆ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗಬೇಕೆಂದು ಹೇಳಿ. ಮಧ್ಯ ಪ್ರವೇಶ ಮಾಡಬೇಡಿ. ಈ ಇಲಾಖೆಯಲ್ಲಿ 3 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ (ಹರಿಹರ).—ಮೂರು ಕೋಟಿ ರೂಪಾಯಿಗಳು ಮಿಸ್‌ಲೇನಿಯಸ್ ಸೇರಿಸಿಕೊಂಡು ಇದೆ. ಹರಿಜನರಿಗೋಸ್ಕರ ಒಂದು ಕೋಟಿ ಮಾತ್ರ ಇದೆ.

ಶ್ರೀ ಜಿ. ದುಗ್ಗಪ್ಪ.—ಮಾನ್ಯ ಸದಸ್ಯರು ನನಗೆ ಈ ಸಮಯದಲ್ಲಿ ಈ ವಿಷಯವನ್ನು ಹೇಳಿದ್ದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಮೈಸೂರು ದೇಶದಲ್ಲಿ ಏನು ಹಾಸ್ಟಲುಗಳನ್ನು ಪ್ರಾರಂಭ ಮಾಡಿದ್ದಾರೆಯೋ ಅದನ್ನೆಲ್ಲಾ ಸೇರಿಸಿ ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಪಟ್ಟಿಯನ್ನು ಕೊಟ್ಟಿದ್ದಾರೆ.

[MR. CHAIRMAN (SMT. NAGARATHNAMMA HIREMATH) in the Chair]

ರಾಜ್ಯಾಂಗದಲ್ಲಿ ಹೇಳಿರುವಂತೆ ಹಿಂದುಳಿದವರನ್ನು ರಕ್ಷಣೆ ಮಾಡುವುದಕ್ಕೆ ನಿಮಗೆ ಆಗುತ್ತಿಲ್ಲ. ನಿಮ್ಮ ಒಂದು ರಿಪೋರ್ಟಿನಿಂದ ಇದು ಗೊತ್ತಾಗುತ್ತದೆ. ಸಾಮಾಜಿಕ ಅಭಿವೃದ್ಧಿ ಮೂಲಕ ಹಿಂದುಳಿದವರಿಗೆ ಕೊಡುತ್ತಿರುವ ಗಾಡಿ, ಎತ್ತು, ಕೋಳಿ, ಮೇಕೆ ಮುಂತಾದವುಗಳನ್ನು ನಿಲ್ಲಿಸಿಬಿಡಿ. ಈ ರೀತಿ ಸಹಾಯ ಮಾಡುವುದರಿಂದ ಯಾವ ಪುರುಷಾರ್ಥವೂ ಸಾಧನೆಯಾಗುವುದಿಲ್ಲ. ಹಿಂದುಳಿದವರಿಗೆಲ್ಲಾ ಈ ಸರ್ಕಾರದವರು ಕೋಳಿಮೊಟ್ಟೆಯನ್ನು ಸಹ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ರೀತಿ ಸಹಾಯ ಮಾಡುವುದರಿಂದ ಇವರ ಆರ್ಥಿಕ ಪ್ರಗತಿಯಾಗುವುದಿಲ್ಲ. ನಿಜವಾಗಿಯೂ ಇವರ ಆರ್ಥಿಕ ಪ್ರಗತಿಯಾಗಬೇಕಾದರೆ ಇವರನ್ನು ವಿಚಾರವಂತರನ್ನಾಗಿ ಮಾಡಿ, ವಿದ್ಯಾವಂತರನ್ನಾಗಿ ಮಾಡಿ. ಇವತ್ತಿನದಿವಸ ಹಳ್ಳಿಗಾಡಿನಲ್ಲಿ ಹಿಂದುಳಿದ ಪಂಗಡದವರು ತಮ್ಮ ಮಕ್ಕಳನ್ನು ಅವರಿಗೆ

(ಶ್ರೀ ಜಿ. ದುಗ್ಗಪ್ಪ)

ಸ್ಲೇಟ್ ಕೊಡಿಸುವುದಕ್ಕೆ ಕಾಸಿಲ್ಲವೆಂದು ಸ್ಕೂಲಿಗೆ ಸೇರಿಸುತ್ತಿಲ್ಲ. ಆದ್ದರಿಂದ ಇಂತಹ ವಿದ್ಯಾರ್ಥಿಗಳಿಗೆ ಸರ್ಕಾರದವರು ಉಚಿತವಾಗಿ ಸ್ಲೇಟ್ ಮತ್ತು ಪುಸ್ತಕಗಳನ್ನು ಒದಗಿಸಬೇಕು. ಯಾವ ಮಕ್ಕಳು ಸರಿಯಾಗಿ ಶಾಲೆಗೆ ಬರುತ್ತವೋ ಅಂತಹ ಮಕ್ಕಳಿಗೆ ಉಚಿತವಾಗಿ ಬಟ್ಟೆಯನ್ನು ಕೊಡಬೇಕು. ವಿದ್ಯಾರ್ಥಿವೇತನ ಕೊಡಬೇಕು. ಈಗ ನೀವು 93 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ನಾನಾ ಸ್ಕೀಮುಗಳನ್ನು ಜಾರಿಗೆ ತರುವುದರ ಬದಲು ಹಿಂದುಳಿದವರಿಗೆ ವಿದ್ಯಾಭ್ಯಾಸ ಕೊಡಿಸಲು ಹೆಚ್ಚು ಹಣ ಖರ್ಚುಮಾಡಿ. ಇವತ್ತಿನದಿವಸ ಸಂಘ ಸಂಸ್ಥೆಗಳವರು ಬಾಲವಾಡಿಗಳನ್ನು ನಡೆಸುತ್ತಿದ್ದಾರೆ. ಸಮರ್ಪಕವಾದಂಥ ರೀತಿಯಲ್ಲಿ ನಡೆಸುತ್ತಿದ್ದಾರೆ. ಅದೇ ಸರ್ಕಾರದ ಆಶ್ರಯದಲ್ಲಿ ನಡೆಯುತ್ತಿರುವ ಬಾಲವಾಡಿಗಳು ಇವತ್ತಿನದಿವಸ ಯಾವ ರೀತಿ ನಡೆಯುತ್ತಿವೆ ಎಂಬುದನ್ನು ನೋಡಿದರೆ, ಈ ಬಗ್ಗೆ ಮಾನ್ಯ ಮಂತ್ರಿಗಳಿಗೇ ಸಮಾಧಾನವಾಗಿಲ್ಲವೆಂದು ಹೇಳಬಹುದು. ಕೇಂದ್ರಸರ್ಕಾರದ ಸಹಾಯ ಸಿಗುತ್ತದೆ ಎನ್ನುವ ಒಂದೇ ಕಾರಣದಿಂದ ಏನೋ ಒಂದು ರೀತಿ ನಡೆಸಿಕೊಂಡು ಹೋಗುತ್ತಿದ್ದಾರೆಯೇ ವಿನಾ ಮನಃಪೂರ್ವಕವಾಗಿ ಈ ಜನರ ಉದ್ಧಾರವಾಗಬೇಕು ಎಂಬ ಉದ್ದೇಶದಿಂದ ನಡೆಸುತ್ತಿಲ್ಲ. ಮನಸ್ಸು ಇಲ್ಲದೆ ಅನೇಕ ಯೋಜನೆಗಳನ್ನು ಮಾಡುತ್ತೇವೆ ಎಂದು ಪುಸ್ತಕಗಳನ್ನು ಅಚ್ಚು ಹಾಕಿಸಿ ಹೇಳುವುದಕ್ಕೆ ಬದಲು ಮನಃಪೂರ್ವಕವಾಗಿ ಒಂದೇ ಒಂದು ಯೋಜನೆಯನ್ನು ಜಾರಿಗೆ ತಂದರೆ ಇವರು ಎಷ್ಟೋ ಉದ್ಧಾರವಾಗುತ್ತಾರೆಂದು ಹೇಳಬಹುದು. ಮನಸ್ಸು ಇಲ್ಲದೆ ಯೋಜನೆಗಳನ್ನು ಮಾಡುವಾಗ ದುಡ್ಡು ವ್ಯಯವಾಗುತ್ತದೆಯಲ್ಲದೆ ಯಾವ ರೀತಿಯ ಪ್ರಯೋಜನವೂ ಆಗುವುದಿಲ್ಲ. ಇದೇ ರೀತಿ ಹಿಂದುಳಿದ ಜನಾಂಗಕ್ಕೆ ಮನೆ ಕಟ್ಟಿಸಿ ಕೊಡುವ ಸಲುವಾಗಿ ಮೂರೂವರೆ ಕೋಟಿ ರೂಪಾಯಿಗಳನ್ನು ಸಾಲವಾಗಿ ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್‌ನಿಂದ ಪಡೆಯಲಾಗಿದೆಯೆಂದು ಮಾನ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಹೇಳಿದಾಗ ಅವರನ್ನು ನಾನು ಮೆಚ್ಚಿಕೊಂಡೆ ಮತ್ತು ಅವರ ಬಗ್ಗೆ ಒಂದೆರಡು ಒಳ್ಳೆಯ ಮಾತುಗಳನ್ನು ಸಹ ಹೇಳಿದೆ. ಆದರೆ ಈಗ ಇಷ್ಟು ಹಣದಲ್ಲಿ ಖರ್ಚು ಮಾಡಿರುವುದು ಕೇವಲ 76 ಲಕ್ಷ ರೂಪಾಯಿಗಳು ಮಾತ್ರ. ಈ ರೀತಿಯ ಮಲತಾಯಿ ಧೋರಣೆ ಏತಕ್ಕೆ ಎಂದು ಕೇಳುತ್ತೇನೆ. ಹಿಂದುಳಿದ ಜನಾಂಗವನ್ನು ಮುಂದೆ ತರುವ ಸಲುವಾಗಿ ಅನೇಕ ಸ್ಕೀಮುಗಳನ್ನು ಕೈಕೊಂಡಿದ್ದೇವೆಂದು ಒಂದು ರಿಪೋರ್ಟ್ ತಯಾರು ಮಾಡಿ ನಮಗೆಲ್ಲಾ ಭೂತಕನ್ನಡಿ ಹಾಕಿ ತೋರಿಸಿ ನಮ್ಮನ್ನು ಉಬ್ಬಿಹೋಗುವಂತೆ ಮಾಡುತ್ತೀರಿ. ಇವರ ಬಗ್ಗೆ ನಿಜವಾಗಿಯೂ ನಿಮಗೆ ಕನಿಕರವಿದ್ದರೆ ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್‌ನಿಂದ ಸಾಲವಾಗಿ ತೆಗೆದುಕೊಂಡಿರುವ ಮೂರುವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಿ. ಇವತ್ತಿನದಿವಸ ಅಪೆಕ್ಸ್ ಬ್ಯಾಂಕಿನಿಂದ ಹಿಡಿದು ಪ್ರತಿಯೊಂದು ಸಂಸ್ಥೆಗೂ ಖಾಸಗೀ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ಮಾಡಿದ್ದೀರಿ. ಆದರೆ ಹರಿಜನ ಗೃಹನಿರ್ಮಾಣ ಸೊಸೈಟಿಗೆ ಮಾತ್ರ ಡೆವಲಪ್‌ಮೆಂಟ್ ಕಮೀಷನರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಒಂದೊಂದು ಸೊಸೈಟಿಗೆ ಒಂದೊಂದು ಕಾನೂನು ಇಟ್ಟಿದ್ದೀರಿ. ಹಣ ದುರುಪಯೋಗವಾಗಬಹುದೆಂದು ಹರಿಜನ ಗೃಹನಿರ್ಮಾಣ ಸೊಸೈಟಿಗೆ ಖಾಸಗೀ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ಮಾಡಿಲ್ಲವೆಂದು ಸರ್ಕಾರದವರು ಕೇಳಬಹುದು. ಹಣ ದುರುಪಯೋಗವಾದರೂ ಸಹ ಒಂದು ಪರ್‌ಸೆಂಟ್ ಆಗಬಹುದು, ಆದರೆ ಆಗಲಿ, ಈ ಕೆಲಸದಲ್ಲಿ ಆಸಕ್ತಿಯಿರುವಂಥವರನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಮಂಜೂರು ಮಾಡಿದಂಥ ಕೆಲಸ ಆಗಿಯೇ ತೀರುತ್ತದೆ. ತಾಲ್ಲೂಕ್ ಬೋರ್ಡ್ ಸದಸ್ಯರನ್ನು ಬೇಕಾದರೆ ಈ ಸೊಸೈಟಿಗೆ ಅಧ್ಯಕ್ಷರನ್ನಾಗಿ ಮಾಡಬಹುದು. ಆದರೆ ಸರ್ಕಾರದ ಅಧಿಕಾರಿಗಳೇ ಅಧ್ಯಕ್ಷರಾಗಿದ್ದರೆ ಯಾವ ಕೆಲಸವೂ ಪೂರ್ತಿಯಾಗಿ ಆಗುವುದಿಲ್ಲ.

ಇನ್ನು ಒಂದು ಮುಖ್ಯವಾದಂಥ ವಿಷಯವೆಂದರೆ, ಹಿಂದುಳಿದ ವರ್ಗದವರಿಗೆ ಸರ್ಕಾರೀ ಹುದ್ದೆಗಳನ್ನು ಮೀಸಲಾಗಿಡಬೇಕು ಎಂಬತಕ್ಕಂಥದ್ದು 1936ನೇ ಇಸವಿಯಲ್ಲಿಯೇ ಕೇಂದ್ರಸರ್ಕಾರದವರು ಒಂದು ಆರ್ಡರ್ ಹೊರಡಿಸಿ ಜಾರಿಗೆ ತಂದಿದ್ದಾರೆ. ಹಿಂದುಳಿದ ವರ್ಗದವರಲ್ಲಿ ಯಾರು ವಿದ್ಯಾವಂತರು ಇದ್ದಾರೆ, ಯಾರು ಯೋಗ್ಯರಾದವರು ಇದ್ದಾರೆ ಅಂತಹವರಿಗೆ ಇಷ್ಟು ಪರ್‌ಸೆಂಟ್ ಸರ್ಕಾರಿ ಕೆಲಸವನ್ನು ಕೊಡಬೇಕೆಂದು 1936ನೇ ಇಸವಿಯಲ್ಲಿ ಆರ್ಡರ್ ಆಗಿದೆಯೇ ಹೊರತು ಸ್ವಾತಂತ್ರ್ಯ ಬಂದಮೇಲೆ ಈ ಸ್ಕೀಮು ಜಾರಿಗೆ ಬಂದಿದ್ದು ಅಲ್ಲ. 1936 ರಿಂದ ಇದುವರೆಗೆ ದೊಡ್ಡ ದೊಡ್ಡ ಹುದ್ದೆಗಳಿಗೆ ಎಷ್ಟು ಜನರನ್ನು ತೆಗೆದುಕೊಂಡಿದ್ದೀರಿ ಎಂಬ ಲೆಕ್ಕವನ್ನು ಕೇಳುತ್ತೀರಾ? ಈ ರೀತಿ ಪ್ರಶ್ನೆ ಕೇಳಿದಾಗಲೆಲ್ಲಾ ಸರ್ಕಾರದವರು ದೊಡ್ಡ ದೊಡ್ಡ ಹುದ್ದೆಗಳಿಗೆ ಅರ್ಹರಾದವರು ಹಿಂದುಳಿದ ಜನಾಂಗದಲ್ಲಿ ಸಿಗುತ್ತಿದ್ದರೂ ಸಹ ಸಿಗುತ್ತಿಲ್ಲವೆಂದು ಹೇಳಿಬಿಡುತ್ತಾರೆ. ಐ.ಎ.ಎಸ್., ಐ.ಪಿ.ಎಸ್., ಪ್ರೊಫೆಸರ್‌ಗಳು ಇಂತಹ ದೊಡ್ಡ ದೊಡ್ಡ ಹುದ್ದೆಗಳು ಬೇಡ, ನಾಲ್ಕನೆ

ದರ್ಜೆಯ ಹುದ್ದೆಗಳನ್ನು ಈ ವರ್ಗದವರಿಗೆ ಇದುವರೆಗೆ ಎಷ್ಟು ಪರ್‌ಸೆಂಟ್ ಕೊಟ್ಟಿದ್ದೀರೀ ಎಂದು ಕೇಳುತ್ತೇನೆ. ಎಷ್ಟು ಪರ್‌ಸೆಂಟ್ ಇವರಿಗೆ ಕೊಡಬೇಕೆಂದು ಸರ್ಕಾರದ ನಿಯಮವಿದೆಯೋ ಅದರಂತೆ ಇಲಾಖಾ ಅಧಿಕಾರಿಗಳು ಕೊಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಪಿ.ಡಬ್ಲ್ಯು.ಡಿ. ಚೀಫ್ ಇಂಜನಿಯರ್ (ಜನರಲ್) ಅವರಲ್ಲಿಗೆ ನಾಲ್ಕನೆ ದರ್ಜೆಯ ಒಂದು ಹುದ್ದೆಗಾಗಿ ಹಿಂದುಳಿದ ಒಬ್ಬರ ಅರ್ಜಿಯನ್ನು ತೆಗೆದುಕೊಂಡು ಹೋದಾಗ ಅವರು ತಮ್ಮ ನಿಸ್ಸಹಾಯಕತೆಯನ್ನು ತೋರಿಸಿದರು. ಈ ಇಲಾಖೆಯಲ್ಲಿ 4–5 ಜನ ಚೀಫ್ ಇಂಜನಿಯರುಗಳಿರುವುದರಿಂದ ಮತ್ತೊಬ್ಬರಲ್ಲಿಗೆ ಹೋದೆ, ಅವರಿಗೆ ಕಣ್ಣಿನ ಜಾಗದಲ್ಲಿ ಕಣ್ಣು ಇಲ್ಲದೆ ನೆತ್ತಿಯಮೇಲೆ ಕಣ್ಣಿದೆಯೆಂದು ತಿಳಿಯಿತು. ನಂತರ ಇನ್ನೊಬ್ಬರಲ್ಲಿ ಹೋದಾಗ ಅವರು ತಲೆಯಲ್ಲೇ ನಡೆಯುತ್ತಾರೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹಿಂದುಳಿದ ಜನಾಂಗದವರಿಗೆ ಪ್ರತಿಯೊಂದು ಇಲಾಖೆಯಲ್ಲೂ ಎಷ್ಟು ಪರ್‌ಸೆಂಟ್ ಕೆಲಸ ಕೊಟ್ಟಿದ್ದಾರೆ ಎಂಬ ಬಗ್ಗೆ ಒಂದು ಸೆಲ್ ಮಾಡಿದ್ದೇವೆ, ಅದಕ್ಕೆ ಒಬ್ಬ ಆಫೀಸರನ್ನು ನೇಮಕ ಮಾಡಿದ್ದೇವೆ, ಅವರು ಪ್ರತಿಯೊಂದು ಆಫೀಸಿಗೂ ಹೋಗಿ ಲೆಕ್ಕ ತೆಗೆದುಕೊಂಡು ಬರುತ್ತಾರೆಂದು ಹೇಳಬಹುದು. ಆದರಿಂದ ನಮಗೆ ತೃಪ್ತಿಯಾಗುವುದಿಲ್ಲ. ಡೈರೆಕ್ಟರ್ ಆಫ್ ಸೋಶಿಯಲ್ ವೆಲ್‌ಫೇರ್ ಆಫೀಸರ್‌ಗೆ ಸಂಪೂರ್ಣವಾದ ಅಧಿಕಾರವನ್ನು ಸರ್ಕಾರದವರು ಕೊಡಬೇಕು. ಇದರಲ್ಲಿ ಸರ್ಕಾರದವರು ಕೈಹಾಕಬಾರದು. ನಂತರ ಯಾವ ಯಾವ ಯೂನಿಟ್ ಆಫೀಸರ್‌ಗಳು ತಮಗೆ ಕೊಟ್ಟಿರುವ ಅಧಿಕಾರದಲ್ಲಿ ತಪ್ಪು ಮಾಡಿದ್ದಾರೆ ಅಂಥವರನ್ನು ಹಿಡಿದು ಬಲಿ ಹಾಕಬೇಕು. ಹೀಗಾದರೆ ನಿಮ್ಮ ರೀತಿ ನೀತಿ ಏನು, ನಿಮ್ಮ ತತ್ವ ಏನು? ಇವುಗಳನ್ನೆಲ್ಲಾ ಜಾರಿಗೆ ತರುವುದಕ್ಕೆ ಆಗುತ್ತದೆಯೇ? ಇಲ್ಲ, ಸಾಧ್ಯವಾಗುತ್ತಾ ಇಲ್ಲ. ನಿಮ್ಮ ಅಧಿಕಾರಿಗಳ ಚೆಲ್ಲಾಟವಾಗಿದೆ. ಇದರಿಂದ ತೊಂದರೆ ಯಾರಿಗೆ? ಯಾರು ಅನುಕೂಲಸ್ಥರಿದ್ದಾರೋ, ಅವರು ಅನುಕೂಲಸ್ಥರಾಗುತ್ತಾ ಹೋಗುತ್ತಾರೆ, ಯಾರು ಬಡವರಿದ್ದಾರೋ, ಅವರು ಇನ್ನೂ ಬಡವರಾಗಿಯೇ ಇದ್ದಾರೆ. ಈ ಒಂದು ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿದು, ನಾಲ್ಕನೆಯದಕ್ಕೆ ಬರುತ್ತಿದ್ದೇವೆ. ಆದರೂ ಇದು ಸಾಧ್ಯವಾಗಿದೆಯೇ? ಪಂಚವಾರ್ಷಿಕ ಯೋಜನೆಗಳಿಗೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದೀರಿ, ಅವುಗಳಲ್ಲಿ ಈ ನತದೃಷ್ಟರಿಗೆ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ? ಎಷ್ಟು ಜನರಿಗೆ ಅವು ತಲಪಿವೆ? ಒಬ್ಬ ಕವಿಶಾಸನರು ಹೇಳಿದ್ದಾರೆ—ಸಾಮಾನ್ಯ ಜನರ ಪ್ರಗತಿಯಾಗಬೇಕಾದರೆ, ಮೀಸಲಾಗಿ ಹಣ ಇಡಬೇಕು. ಪಂಚವಾರ್ಷಿಕ ಯೋಜನೆಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡುತ್ತೇವೆ, ತತ್ಪರಿಣಾಮವಾಗಿ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ, ಆ ಅನುಕೂಲದ ದೆಸೆಯಿಂದ ಹರಿಜನರು ಕೂಡ ಮುಂದೆ ಬರಬಹುದು ಎಂದು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಎಷ್ಟು ಜನರಿಗೆ ಇದರ ಅನುಕೂಲವಾಗಿದೆ. ಎಷ್ಟು ಜನರಿಗೆ ಪಂಪ್ ಸೆಟ್ಟು ಕೊಟ್ಟಿದ್ದೀರಿ? ಎಷ್ಟು ಜನರಿಗೆ ಜಮೀನು ಮಂಜೂರು ಮಾಡಿದ್ದೀರಿ? ಇದಕ್ಕೆ ಕಾರಣವೇನೆಂದರೆ, ನಿಮಗೆ ಮನಸ್ಸು ಇಲ್ಲದ ಮನಸ್ಸೇ ನಿಮ್ಮದಲ್ಲದೆ ನಮ್ಮದೂ ತಪ್ಪು ಇದೆ. ನಮ್ಮ ತಪ್ಪು ಏನೆಂದರೆ, ನಾವು ಪ್ರತಿನಿಧಿಗಳಾಗಿ ಇಲ್ಲಿ ಬಂದು, ಸ್ವಾರ್ಥಗಳಿಸುವುದಕ್ಕೋಸ್ಕರ, ಯಾವ ಕಾರಣಕ್ಕೋಸ್ಕರ ಬಂದಿದ್ದೇವೆಯೋ, ಅದನ್ನು ಮರೆತು ಬಿಡುತ್ತೇವೆ. ಇದರಿಂದ ಬಡವರು ಬಡವರಾಗಿಯೇ ಇದ್ದಾರೆ. ಅದರಲ್ಲೂ ಕೆಳಮಟ್ಟದ ಜನರಾದ ಭಂಗಿಗಳು ಸ್ವೀಪರ್‌ಗಳನ್ನು ತೆಗೆದುಕೊಳ್ಳಿ.

3–00 P.M.

ಇವತ್ತಿನ ದಿವಸ ಸಮಾಜ ಕಲ್ಯಾಣ ಎಂದು ಯಾರ ಕಲ್ಯಾಣಕ್ಕೋಸ್ಕರ ಖರ್ಚು ಮಾಡುತ್ತಿದ್ದೀರಿ? ಮೊದಲು ಹಿಂದುಳಿದವರಿಗೆ, ಅವರ ಮಕ್ಕಳಿಗೋಸ್ಕರ ಖರ್ಚು ಮಾಡಿ. ನೀವು ಹೇಳಬಹುದು ಮಿಸ್‌ಯೂಸ್ ಆಗಿದೆ ಎಂದು. ಆದರೆ ಒಂದು ಕಡೆ ಮಿಸ್‌ಯೂಸ್ ಆಗಿರಬಹುದು. ಒಂದು ಕಡೆ, ಸೋಶಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ವಿಮೆನ್ ವೆಲ್‌ಫೇರ್ ಆಫೀಸ್ ಎಂದು ಬೋರ್ಡು ನೋಡಿದೆ. ಇದು ಯಾರ ಕಲ್ಯಾಣಕ್ಕೋಸ್ಕರ? ಹಿಂದೆ 18 ಇಲಾಖೆಗಳಿತ್ತು. ಇದು ಈಗ 118 ಆಗಿದೆ. ಮಾನ್ಯ ಸಿದ್ದವೀರಪ್ಪನವರು ಕೇಳಿದ ಒಂದು ಪ್ರಶ್ನೆಗೆ ಒಂದು ಆಸ್ತಿಗಳ ಪಟ್ಟಿಯನ್ನು ಮಾನ್ಯ ಆರ್ಥಿಕ ಮಂತ್ರಿಯವರು ಕೊಟ್ಟಿದ್ದಾರೆ. ನಾನಾದರೂ ಕೇಳುತ್ತೇನೆ, 56ನೇ ಇಸವಿಯಿಂದ ಇವರ ಆಸ್ತಿಪಾಸ್ತಿಗಳು ಎಷ್ಟು ಇವೆ ಎಂಬುದನ್ನು ಕಂಡುಹಿಡಿಯಬೇಕು. ಇವತ್ತು ಹೆಂಡವನ್ನು ಜಾರಿಗೆ ತಂದಿದ್ದಾರೆ. ಇದರಿಂದ ಕೇಂದ್ರದಿಂದ ಬರುವ ಗ್ರಾಂಟ್ ನಿಂತು ಹೋಗಬಹುದು, ಅದನ್ನು ಹೆಂಡ ಜಾರಿಗೆ ತಂದಿರುವುದರಿಂದ ನಿಲ್ಲಿಸುತ್ತೇವೆಂದು ಹೇಳುತ್ತಾರೆ. ಇವತ್ತು ಇಲ್ಲಿ ಅರ್ಥ ಮಂತ್ರಿಯವರು ಇಲ್ಲ, ಇಲ್ಲದಿದ್ದರೆ ಎಲ್ಲವನ್ನೂ ಹೇಳಬೇಕೆಂದಿದ್ದೆ. ನಿಮಗೆ ಕೇಂದ್ರ ಸರ್ಕಾರದಿಂದ ಗ್ರಾಂಟ್ ಎಷ್ಟು ಕೇಳಬೇಕು, ಎಷ್ಟು ಖರ್ಚುಮಾಡಬೇಕು, ಇದು ಎಲ್ಲವೂ ಒಂದು ನಿಮಗೆ ಗೊಂದಲ

(ಶ್ರೀ ಜಿ. ದುಗ್ಗಪ್ಪ)

ಆಗಿದೆ. ಇವತ್ತು ಅಭಿವೃದ್ಧಿ ಇಲಾಖೆಯಲ್ಲಿ ಒಂದು ಆಫೀಸರುಗಳ ಸೈನ್ಯವೇ ಇದೆ. ಅವರಲ್ಲಿ ಕೆಲವ ರನ್ನು ಮನೆಗೆ ಕಳಿಸಬೇಕೆಂದಿದ್ದಾರೆ. ಆದರೆ ಅದನ್ನು ಹೇಗೆ ಮಾಡುತ್ತಾರೆ ಇವರು? ಇದಕ್ಕೆಲ್ಲಾ ಒಂದು Financial Enquiry Comission ಮಾಡಬೇಕು. ನಮ್ಮ ದೇಶದ ಆದಾಯವೇನು, ಯಾವುದು ಅನ್ಯಾಯವಾಗಿ ಖರ್ಚಾಗುತ್ತದೆ ಎಂದು ನೋಡಬೇಕು. ಹಿಂದೆ ಹನುಮಂತಯ್ಯನವರು ಇದ್ದಾಗ, ಇಂಥ ಒಂದು ಸಲಹೆಯನ್ನು ಅಂಗೀಕಾರ ಮಾಡಿದ್ದಾರೆ. ಅವರು ಹೇಳುತ್ತಿದ್ದರು, ಕೇಂದ್ರದಿಂದ ಗ್ರಾಂಟನ್ನು ರಾಜ್ಯಸರ್ಕಾರದವರು ತೆಗೆದುಕೊಂಡು ಬರುವುದಕ್ಕೆ ಪ್ರತಿ ವರ್ಷ ಸಾಲಾಗಿ ನಿಂತುಕೊಳ್ಳಬೇಕು, ಮತ್ತು ಅದು ಒಂದು ಜಟಿಲವಾದ ಪ್ರಶ್ನೆ ಎಂದು ಹೇಳಿದ್ದಾರೆ. ಅದ ಕ್ಕಾಗಿ ನೀವು ಒಂದು ಫಿನಾನ್ಸ್ ಇನ್‌ಕ್ವಾಯರಿ ಕಮಿಟಿ ಮಾಡಿ, ನಿಮ್ಮ ಪರಿಸ್ಥಿತಿ ಏನು, ನಿಮ್ಮ ಆದಾಯವೇನು, ಖರ್ಚು ಏನು ಎಂಬುದನ್ನೆಲ್ಲಾ ಕೂಲಂಕುಷವಾಗಿ ಕಂಡುಹಿಡಿಯಬೇಕು. ಇವತ್ತು ಸೇಂಧಿ ಜಾರಿಗೆ ತಂದಿದ್ದಾರೆ, ಯಾರಿಗೋಸ್ಕರ ತಂದಿದ್ದಾರೆ? ಇದರಿಂದ ನಾವು 20 ವರ್ಷ ಹಿಂದೆ ಹೋದಹಾಗೆ ಆಯ್ತು. ಇವತ್ತು ಮನೆಯಲ್ಲಿ ಒಂದು ಒಳ್ಳೆಯ ತಿಂಡಿಯನ್ನು ಎಲ್ಲರೂ ಒಟ್ಟಿಗೆ ತಿನ್ನುವುದು ವಾಡಿಕೆ. ಆದರೆ, ಇಂದು ಮನೆಯ ಯಜಮಾನ ಹೆಂಡ ಕುಡಿದು, ಚೆನ್ನಾಗಿದೆ, ಎಂದು ಮಗುವಿಗೂ ಕೊಡುತ್ತಾನೆ, ನಂತರ, ತನ್ನ ಹೆಂಡತಿಗೂ ಕುಡಿಸುತ್ತಾನೆ. ಇದರಿಂದ ಎಲ್ಲರೂ ಕುಡಿಯುವ ಒಂದು ಸಂದರ್ಭ ಬರುತ್ತದೆ. ಇದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ನಿಮಗೆ ತೋಂದರೆ ಇದೆ, ಅದನ್ನು ಕೇಂದ್ರ ಸರ್ಕಾರಕ್ಕೆ, ಈ ರೀತಿಯ ಒಂದು ಕಮಿಶನ್ ಮಾಡಿ ತಿಳಿಸ ಬೇಕು. ಇವತ್ತು ಅಭಿವೃದ್ಧಿ ಇಲಾಖೆ ಎಂದು ಹೇಳಿ ಎಷ್ಟೆಷ್ಟು ಖರ್ಚು ಮಾಡಬೇಕೆಂದು ಇಲ್ಲ. ಪ್ರಾರಂಭವಾಗಿದೆ, ನಡೆದುಕೊಂಡು ಹೋಗುತ್ತಿದೆ. ನಿಲ್ಲಿಸುವುದಕ್ಕೆ ಇವರಿಗೆ ಆಗುವುದಿಲ್ಲ. ಹಾಸ್ಟೆಲನ್ನು 40 ಹುಡುಗರಿಗೆ ಪ್ರಾರಂಭ ಮಾಡಿ, ಮುಂದೆ 100 ಹುಡುಗರಿಗೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಪ್ರಗತಿ ಗೊತ್ತಿಲ್ಲ, ಏನೂ ಇಲ್ಲ. ಈ ರೀತಿ ಒಂದು ಅಸಹಾಯಕ ಪರಿಸ್ಥಿತಿಗೆ ತಂದುಬಿಟ್ಟಿದ್ದಾರೆ. ಇದಕ್ಕೆ ನಿವಾರಣೆಯೆಂದರೆ, ಆ ಒಂದು ಫೈನಾನ್ಸಿಯಲ್ ಇನ್‌ಕ್ವಾಯರಿ ಕಮಿಟಿ ಮಾಡಿ ಅನಗತ್ಯವಾದ ಖರ್ಚುಗಳನ್ನು ತಡೆಗಟ್ಟಿ, ನಿಜವಾಗಿ ಅಭಿವೃದ್ಧಿಯಾಗಬೇಕಾದ, ವಿದ್ಯಾಭ್ಯಾಸ ಮುಂತಾದ ಬಾಬುಗಳಿಗೆ ಖರ್ಚು ಮಾಡಬೇಕು. ಇದಕ್ಕೆ ನಮ್ಮ ಪ್ರತಿನಿಧಿಗಳು ಒಂದು ಹೋರಾಟವನ್ನು ಮಾಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ಮುನಿಸ್ವಾಮಯ್ಯ (ಆನೇಕಲ್).—ಸನ್ಮಾನ್ಯ ಅಧ್ಯಕ್ಷಣಿಯವರೇ, ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯವರು ಮಂಡಿಸಿರತಕ್ಕ 27ನೇ ಡಿಮ್ಯಾಂಡನ್ನು ಸ್ವಾಗತಿಸುತ್ತೇನೆ; ಮತ್ತು ಅವರು ಕೇಳಿರತಕ್ಕಂತಹ ಮೂರು ಕೋಟಿ ಚಿಲ್ಲರೆ ರೂಪಾಯಿಯನ್ನು ಕೊಡಬೇಕೆಂದು ಒತ್ತಾಯದಿಂದ ಹೇಳುತ್ತೇನೆ. ಇಷ್ಟೇ ಅಲ್ಲದೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕಾಗಿತ್ತು ಎನ್ನತಕ್ಕದ್ದನ್ನು ನಾನು ಸಭೆಯಲ್ಲಿ ಹೇಳುತ್ತೇನೆ. ಕೆಲವರು ಇದನ್ನು ವಿರೋಧಿಸುತ್ತಾ, ಇದು ಸರಿಯೇ, ಇಷ್ಟೊಂದು ಹಣವನ್ನು ಒದಗಿಸುವುದು ತಪ್ಪು ಎಂದು ಹೇಳಿದರು. ಆದರೆ, ನಮಗೆ ಪ್ರಗತಿ ಬೇಕಾದರೆ, ಸುಧಾರಣೆಯಾಗಬೇಕಾದರೆ, ಹಣ ಬೇಕೇ ಬೇಕು. ಇದನ್ನು ಅವರು ಮರೆತಿರುವ ಹಾಗೆ ಇದೆ. ಆದರೆ ಆಡಳಿತದಲ್ಲಿ ನ್ಯೂನತೆಗಳು ಕೆಲವು ಇರಬಹುದು, ಕೊರತೆಗಳು ಇರಬಹುದು, ಮತ್ತು ಅದನ್ನು ಸರಿಪಡಿಸುವುದಕ್ಕೆ, ಸಲಹೆಗಳನ್ನು ಕೊಡಬೇಕೇ ಹೊರತು ಕೊಡತಕ್ಕ ಹಣವನ್ನು ಕಡಿಮೆ ಮಾಡಿ, ಕೆಲಸವನ್ನು ಹೆಚ್ಚು ಮಾಡಿ, ಪ್ರಗತಿಯನ್ನು ಮಾಡಿ ಎಂದು ಹೇಳಿದರೆ ಅದು ಹೇಗೆ ಸಾಧ್ಯವಾಗುತ್ತದೆ? ಇದನ್ನು ಅವರು ತಮ್ಮಲ್ಲೇ ಪ್ರಶ್ನೆ ಮಾಡಿಕೊಳ್ಳುವುದು ಒಳ್ಳೆಯದು ಎಂದು ನಾನು ಹೇಳಬೇಕಾಗಿದೆ.

ಪ್ರಥಮವಾಗಿ ಈ ಬೇಡಿಕೆಯಲ್ಲಿ ಹರಿಜನರ ಪರವಾಗಿ ಕೆಲವು ವಿಷಯಗಳನ್ನು ಇಲ್ಲಿ ಮಾತ ನಾಡಬೇಕು ಎಂದು ಇದ್ದೇನೆ. ಸರಕಾರದವರು ಇಲ್ಲಿ ಕೇಳಿರತಕ್ಕ ಸುಮಾರು ಮೂರು ಕೋಟಿ ರೂಪಾಯಿಗಳಲ್ಲಿ ಹೆಚ್ಚು ಕಡಿಮೆ ಒಂದು ಕೋಟಿಯಷ್ಟು ಹಣವನ್ನು ಹರಿಜನರ ಪ್ರಗತಿಗಾಗಿ ಒದಗಿಸಿ ಕೊಂಡಿದ್ದಾರೆ ಎನ್ನುವುದು ನಮಗೆ ಕೊಟ್ಟಿರುವ ವಿವರಗಳಿಂದ ಗೊತ್ತಾಗುತ್ತದೆ. ಸರಕಾರ ಹರಿ ಜನರ ಪ್ರಗತಿಗಾಗಿ ಹಿಂದೆ ಸಾಧಿಸಿರತಕ್ಕ ಪ್ರಗತಿಯ ಬಗ್ಗೆ ಮತ್ತು ಈಗ ಇಲ್ಲಿಯವರೆಗೆ ಸಾಧಿಸಿರು ವುದರ ಬಗೆಗೆ ಆಗಾಗ್ಗೆ ಬುಲೆಟಿನ್‌ಗಳನ್ನು ಪ್ರಕಟಮಾಡುತ್ತಾರೆ. ಈ ಬುಲಟಿನ್‌ಗಳಲ್ಲಿ ಎಲ್ಲ ವಿಚಾರ ಗಳನ್ನೂ ಸಂಗ್ರಹಿಸಿ ಪ್ರಕಟಿಸುತ್ತಿದ್ದಾರೆ. ನಮಗೆ ಕೊಟ್ಟಿರುವ ವಾಲ್ಯೂಂ ಒಂದು ಜುಲೈ 1966ರಲ್ಲಿ ಪ್ರಕಟವಾಗಿರುವುದು ಒಂದು ಬಂದಿದೆ. ಇದಾದಮೇಲೆ ವಾಲ್ಯೂಂ ಒಂದು ಎಂದು ಅಕ್ಟೋಬರ್ 1966ರಲ್ಲಿ ಒಂದು ಪ್ರಕಟವಾಗಿದೆ. ಇದಾದ ನಂತರ ಈಗ 1968ರಲ್ಲಿ ಪ್ರಕಟಮಾಡಿರುವ ಬುಲೆ ಟಿನ್ನನ್ನೂ ನಮಗೆ ಒದಗಿಸಿ ಕೊಟ್ಟಿದ್ದಾರೆ. ಇದು ಬ್ಯಾಕ್‌ವರ್ಡ್ ಕ್ಲಾಸಸ್ ಜನಗಳಿಗಾಗಿ ಮತ್ತು,

ಅವರ ಅಭಿವೃದ್ಧಿಗಾಗಿ ಪ್ರಕಟವಾಗಿರುವ ಒಂದು ಇಂಗ್ಲಿಷ್ ವರದಿಯನ್ನೂ ನಮಗೆ ಒದಗಿಸಿ ಕೊಟ್ಟಿದ್ದಾರೆ. ಇದನ್ನು ನಾವೆಲ್ಲ ಸ್ವಲ್ಪ ಎಚ್ಚರಿಕೆಯಿಂದ ಓದಿದರೆ ಹಿಂದೆ ಒಂದಷ್ಟು ಕೆಲಸಗಳು ಆಗಿರುವುದು ಹಾಗೂ ಮುಂದೆ ಮಾಡತಕ್ಕ ಕೆಲಸಗಳು ಏನು ಎನ್ನುವುದು ಇದರಿಂದ ಗೊತ್ತಾಗುತ್ತದೆ. ಆದರೆ ಇದಕ್ಕಾಗಿ ಹಣವನ್ನು ಖರ್ಚುಮಾಡಬೇಕೆಂದು ಒದಗಿಸಿದ್ದರೂ ಇದರಿಂದ ನಿರೀಕ್ಷಿಸಿದಷ್ಟು ಫಲಗಳು ಬರಲಿಲ್ಲ ಮತ್ತು ಅಷ್ಟು ಪರಿಣಾಮಕಾರಿಯೂ ಆಗಲಿಲ್ಲ ಎಂದು ವಿಷಾದದಿಂದ ಇಲ್ಲಿ ಹೇಳಬೇಕಾಗಿದೆ. ಇದಕ್ಕೆ ಕಾರಣ, ನಮ್ಮ ಸ್ನೇಹಿತರು ಈಗಾಗಲೇ ಹೇಳಿದ ಹಾಗೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಸುಮಾರು ಇಪ್ಪತ್ತು ವರ್ಷಗಳು ಆದರೂ ಈ ಇಪ್ಪತ್ತು ವರ್ಷಗಳಲ್ಲಿ ಹರಿಜನರ ಪ್ರಗತಿ ಏನೂ ಅಷ್ಟು ಸಾಧನೆಯಾಗಲಿಲ್ಲ ಮತ್ತು ಅಸ್ಪೃಶ್ಯತೆ ಕೂಡ ನಿವಾರಣೆಯಾಗಲಿಲ್ಲ. ಆದರೆ ಮೊದಲು ಅಸ್ಪೃಶ್ಯತೆ ಯಾವ ರೀತಿ ಇತ್ತೋ ಇಂದು ಅಷ್ಟು ಇಲ್ಲ. ಆದರೆ ಯಾವುದೋ ಕಾಲದಿಂದ ಬಂದಿರುವ ಈ ಅಸ್ಪೃಶ್ಯತೆಯನ್ನು ತೊಡೆದುಹಾಕಬೇಕು ಎಂದು ಪ್ರಯತ್ನಪಟ್ಟು ಮಾಡುತ್ತಿದ್ದಾರೆ. ಆದರೆ ಇದಕ್ಕೆಲ್ಲಾ ಒಂದು ಅಭ್ಯಾಸಬಲ ಕಾರಣವಾಗಿದೆ. ಮೊದಲಿನಿಂದ ಬಂದಿರುವ ಈ ಪದ್ಧತಿಯನ್ನು ಮತ್ತು ಸಮಾಜದಲ್ಲಿನ ಈ ಒಂದು ಅಸ್ಪೃಶ್ಯತೆಯ ದೊಡ್ಡ ಭೂತವನ್ನು ಒಮ್ಮೆಲೇ ತೊಡೆದು ಹಾಕಲು ಆಗುತ್ತಿಲ್ಲ. ಆದರೆ ಹಿಂದೆ ಇದ್ದಷ್ಟು ಇಂದು ಅಸ್ಪೃಶ್ಯತೆ ಇಲ್ಲ, ಅದು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಸಾಧ್ಯವಾದಷ್ಟು ಮಟ್ಟಿಗೆ ಅಸ್ಪೃಶ್ಯತೆಯನ್ನು ತೊಡೆದುಹಾಕುವ ಕೆಲಸಗಳು ಅಲ್ಲಲ್ಲಿ ಆಗುತ್ತಿರುವುದನ್ನು ನೋಡಿ ನನಗೂ ಕೂಡ ಸಂತೋಷವಾಗಿದೆ. ಸುಮಾರು ಮೂವತ್ತು ಅಥವಾ ನಲವತ್ತು ವರ್ಷಗಳ ಹಿಂದೆ ಹರಿಜನರ ಹುಡುಗರನ್ನು ಪಾಠಶಾಲೆಗಳಿಗೆ ಸೇರಿಸುತ್ತಿರಲಿಲ್ಲ. ಅವರೆಲ್ಲಾ ಕಿಟಕಿಯ ಹತ್ತಿರ ಕುಳಿತುಕೊಂಡು ಕಲಿಯುತ್ತಿದ್ದರು. ಅನೇಕ ಊರುಗಳಲ್ಲಿ ಹರಿಜನರು ದಾರಿಯ ಮಧ್ಯದಲ್ಲಿ ಹೋಗುವುದಕ್ಕೆ ಅವಕಾಶ ಇರಲಿಲ್ಲ. ಇದರಿಂದ ಅವರಿಗೆಲ್ಲ ಒಂದು ರೀತಿಯಾದ ಅಡ್ಡಿಗಳಾಗುತ್ತಿತ್ತು. ಮತ್ತು ಪಾಠಶಾಲೆಗಳಿಗೆ ಹರಿಜನರ ಹುಡುಗರು ಬಂದು ಓದಲು ಅವಕಾಶ ಇರುತ್ತಿರಲಿಲ್ಲ. ಈಗ ಅಂತಹ ಕಷ್ಟಗಳು ಇಲ್ಲ. ಎಲ್ಲ ಹರಿಜನರನ್ನೂ ಪಾಠಶಾಲೆಗೆ ಸೇರಿಸಿಕೊಳ್ಳುತ್ತಾರೆ ಮತ್ತು ಓದಲು ಅವಕಾಶ ಮಾಡಿಕೊಡುತ್ತಿದ್ದಾರೆ ಮತ್ತು ದೊಡ್ಡ ದೊಡ್ಡ ದೇವಸ್ಥಾನಗಳಿಗೆ ಕೂಡ ಹರಿಜನರು ಹೋಗಲು ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಬಹುಮಟ್ಟಿಗೆ ಇಂದು ಸಮಾಜದಲ್ಲಿ ಒಂದು ರೀತಿಯ ಸಾಧಾರಣೆಯಾಗಿ ಹರಿಜನರಿಗೆ ಅವಕಾಶಗಳನ್ನು ಮಾಡಿಕೊಟ್ಟಿದ್ದಾರೆ. ಈಗ ಎಷ್ಟೋ ಕಡೆಗಳಲ್ಲಿ ನಾನು ನೋಡಿರುವಂತೆ ಮಂತ್ರಿಗಳ ಮನೆಗಳಿಗೆ ಹಾಗೂ ಕೆಲವು ಸದಸ್ಯರುಗಳ ಮನೆಗಳಲ್ಲಿ ಹರಿಜನರು ಹೋಗಿ ಬರಲು ಅವಕಾಶಗಳನ್ನು ಕಲ್ಪಿಸಿಕೊಡುತ್ತಿದ್ದಾರೆ. ಇಲ್ಲಿ ಅಷ್ಟೇನೂ ಅಸ್ಪೃಶ್ಯತೆ ಇಲ್ಲ ಎಂದೇ ಹೇಳಬಹುದು. ಆದರೂ ಸಮಾಜದಲ್ಲಿ ಇನ್ನೂ ಕೆಲವು ಕಡೆಗಳಲ್ಲಿ ಸ್ವಲ್ಪಮಟ್ಟಿಗೆ ಇದೆ. ಹರಿಜನರು ಕೆಲವು ಕಡೆ ಹಳ್ಳಿಗಳಲ್ಲಿ ಸವರ್ಣದ ಜನಗಳು ತಮ್ಮ ಬಾವಿಯಲ್ಲಿ ನೀರನ್ನು ತೆಗೆದುಕೊಳ್ಳುವುದಕ್ಕೆ ಹರಿಜನರಿಗೆ ಅವಕಾಶಗಳನ್ನು ಮಾಡಿಕೊಡುತ್ತಿಲ್ಲ. ಇದರಿಂದ ಕೆಲವು ಕಡೆಗಳಲ್ಲಿ ಹರಿಜನರು ಬಹಳ ಕಷ್ಟಕ್ಕೆ ಸಿಕ್ಕಿ ಇಲ್ಲದ ತೊಂದರೆಗಳನ್ನೂ ಅನುಭವಿಸಿದ್ದಾರೆ. ಇಂತಹ ಉದಾಹರಣೆಗಳು ಎಷ್ಟೋ ಇವೆ. ಕೆಲವು ಊರುಗಳಲ್ಲಿ ಇಂತಹ ಜಗಳಕ್ಕೆ ಅವಕಾಶ ಕೊಡಬಾರದು ಎಂದು ಹರಿಜನರಿಗಾಗಿಯೇ ಪ್ರತ್ಯೇಕವಾದ ಬಾವಿಗಳನ್ನು ಮಾಡಿಸಿಕೊಟ್ಟಿದ್ದಾರೆ. ಕೆಲವು ಕಡೆಗಳಲ್ಲಿ ಹರಿಜನರು ಬೇರೆ ಜನ ನೀರು ತೆಗೆಯುವ ಬಾವಿಗಳಿಂದ ನೀರು ತೆಗೆಯುವಾಗ ಅವರಮೇಲೆ ಕೇಸುಗಳಾಗಿವೆ ಮತ್ತು ಕೆಲವು ಕಡೆ ಅಲ್ಲಿನ ಜನರೇ ಒಂದು ರೀತಿಯ ಸಮಾಧಾನ ಮಾಡುವ ಸಲುವಾಗಿ ಹರಿಜನರಿಗಾಗಿ ಪ್ರತ್ಯೇಕವಾದ ಬಾವಿಗಳನ್ನೇ ತೆಗೆಸಿಕೊಟ್ಟಿದ್ದಾರೆ. ಇದರಿಂದ ಒಂದು ರೀತಿಯಾದ ಶಾಂತಿ ಊರಿನಲ್ಲಿ ಇರಲಿ ಎಂದು ಈ ರೀತಿ ಮಾಡಿದ್ದಾರೆ. ಅಸ್ಪೃಶ್ಯತೆಯನ್ನು ಸಮಾಜದಲ್ಲಿ ತೊಡೆದು ಹಾಕುವ ಸಲುವಾಗಿ ಸರಕಾರ ಸಾಕಾದಷ್ಟು ಪ್ರಯತ್ನಗಳನ್ನು ಮಾಡಿ ಶ್ರಮ ವಹಿಸುತ್ತಿದ್ದಾರೆ. ಇದು ಒಂದು ದೊಡ್ಡ ಸಮಸ್ಯೆಯಾಗಿ ಇನ್ನೂ ಇದೆ. ಈಗ ಎಂಟನೇ ಬಸವಜಯಂತಿಯ ಶತಮಾನೋತ್ಸವ ಎಲ್ಲೆಲ್ಲೂ ನಡೆಯುತ್ತಿದೆ. ಇದರಂತೆ ಮುಂದೆ ಮಹಾತ್ಮ ಗಾಂಧಿಯವರ ಶತಮಾನೋತ್ಸವವೂ ನಡೆಯುವುದರಲ್ಲಿದೆ. ಇಂತಹ ಸಂದರ್ಭಗಳಲ್ಲಿ ಅಸ್ಪೃಶ್ಯತೆಯನ್ನು ತೊಡೆದು ಹಾಕುವ ಪ್ರಯತ್ನಗಳನ್ನು ಮಾಡಬೇಕು ಮತ್ತು ಮಠಾಧಿಪತಿಗಳು ಇದರಲ್ಲಿ ಹೆಚ್ಚು ಉತ್ಸಾಹ ತೋರಿ ಪ್ರಚಾರ ಮಾಡಬೇಕು. ಎಲ್ಲ ಸವರ್ಣ ಹಿಂದೂಗಳೂ ಕೂಡ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಪ್ರಯತ್ನಮಾಡಬೇಕು ಮತ್ತು ಇದಕ್ಕೆ ಇನ್ನೂ ಸಾಕಷ್ಟು ಹೆಚ್ಚು ಪ್ರಚಾರ ಮಾಡುವುದು ಅವಶ್ಯಕ. ಅನೇಕ ವರ್ಷಗಳಿಂದ ಅಸ್ಪೃಶ್ಯತೆ ಎನ್ನುವುದು ಒಂದು ರೀತಿಯಾದ ಅಭ್ಯಾಸಬಲದಿಂದ ಬಂದಿದೆ. ಇದನ್ನು ತೊಡೆಯಲು ಸಾಕಷ್ಟು ಪ್ರಚಾರ ಮಾಡಬೇಕಾದುದು ಅಗತ್ಯ. ಇದಕ್ಕಾಗಿ ವೇದಗಳಲ್ಲಿ ಹಾಗೂ ಪುರಾಣ ಇತಿಹಾಸಗಳಲ್ಲಿ ಯಾವ ರೀತಿಯಾಗಿತ್ತು ಎನ್ನುವುದರ ಬಗ್ಗೆ ಮಠಾಧಿಪತಿಗಳು ಹಾಗೂ ಇತರ ತಜ್ಞರು ಇದರ ಬಗ್ಗೆ ಹೆಚ್ಚು ಪ್ರಚಾರಮಾಡಿ ಜನರಲ್ಲಿ ತಿಳುವಳಿಕೆ ಉಂಟುಮಾಡಿ ಅಸ್ಪೃಶ್ಯತೆಯನ್ನು ತೊಡೆಯಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು

(ಶ್ರೀ ಆರ್. ಮುನಿಸ್ವಾಮಯ್ಯ)

ಇದಕ್ಕಾಗಿ ಇನ್ನೂ ಹೆಚ್ಚು ಹಣವನ್ನು ಒದಗಿಸಿಕೊಡಬೇಕು ಎಂದು ಇಲ್ಲಿ ಒತ್ತಾಯದಿಂದ ಹೇಳುತ್ತಿದ್ದೇನೆ. ಆದರೆ ಹಿಂದೆ ಮೂವತ್ತು ವರ್ಷಗಳ ಹಿಂದೆ ಹರಿಜನರ ಸ್ಥಿತಿ ಯಾವ ರೀತಿ ಇತ್ತು, ಮತ್ತು ಈಗ ಹೇಗಿದೆ ಎನ್ನುವುದನ್ನು ನೋಡಿದರೆ ಹಿಂದೆ ಅಕ್ಷರಸ್ಥರೇ ಇರುವುದು ಕಾಣಿಸುತ್ತಿರಲಿಲ್ಲ. ಇಂದು ಒಂದೊಂದು ತಾಲ್ಲೂಕುಗಳಲ್ಲಿ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಎಷ್ಟೋ ಜನ ಹರಿಜನರು ವಿದ್ಯಾವಂತರಾಗಿ ಮುಂದೆ ಬರುತ್ತಿರುವುದನ್ನು ನೋಡುತ್ತಿದ್ದೇವೆ. ಆದರೆ ಎಲ್ಲೋ ಒಬ್ಬಿಬ್ಬರು ಹೆಚ್ಚು ವಿದ್ಯಾವಂತರಾಗಿ ಡಿಗ್ರಿಗಳನ್ನು ಪಡೆದ ಪದವೀಧರರುಗಳಾಗಿ ಬಂದಿರಬಹುದು. ಒಬ್ಬೊಬ್ಬರು ಟೆಕ್ನಿಕಲ್ ವಿದ್ಯೆಯಲ್ಲೂ ಪರಿಣಿತರಾಗಿ ಡಿಗ್ರಿಗಳನ್ನು ಪಡೆದಿರಬಹುದು. ಸ್ವಲ್ಪ ಮಟ್ಟಿಗೆ ವಿದ್ಯಾಭ್ಯಾಸದಲ್ಲಿ ಹರಿಜನರು ಮುಂದೆ ಬರುತ್ತಿದ್ದಾರೆ. ಆದರೆ ಎಷ್ಟು ಮಟ್ಟಿಗೆ ಮುಂದೆ ಬರಬೇಕೋ ಇನ್ನೂ ಆ ಮಟ್ಟಕ್ಕೆ ಬಂದಿಲ್ಲ. ಎಲ್ಲ ಹಳ್ಳಿಗಳಲ್ಲೂ ಇರುವ ಪಾಠಶಾಲೆಗಳಿಗೆ ಹರಿಜನರು ವಿದ್ಯಾಭ್ಯಾಸ ಮಾಡಲು ಅನುಕೂಲವಾಗುವಂತೆ ಅವರಿಗೆ ಹೆಚ್ಚು ಹಣ ಖರ್ಚುಮಾಡಬೇಕಾದ ಅಗತ್ಯವಿದೆ. ವಿದ್ಯಾಭ್ಯಾಸ ಪಡೆಯುವ ಹರಿಜನರ ಮಕ್ಕಳಿಗೆ ಶಾಲೆಗೆ ಬಂದು ಸೇರುವಾಗ ಅವರಿಗಾಗಿ ಪುಸ್ತಕಗಳನ್ನು ಹಾಗೂ ಸ್ಲೇಟುಗಳನ್ನು ಒದಗಿಸಿಕೊಡಬೇಕು. ಈಗ ಒದಗಿಸಿರುವುದು ಸಾಲದು. ಇದಕ್ಕಾಗಿ ಇನ್ನೂ ಹೆಚ್ಚು ಹಣ ಒದಗಿಸಿ ಎಲ್ಲ ಊರುಗಳಲ್ಲಿಯೂ ಹೆಚ್ಚು ಮಂದಿ ಹರಿಜನರನ್ನು ವಿದ್ಯೆ ಪಡೆಯಲು ಅನುಕೂಲವಾಗುವಂತೆ ಅವರಿಗೆ ಸಹಾಯ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಹರಿಜನರಿಗೆ ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸಿ ಸಹಾಯ ಮಾಡಬೇಕು. ಸುಮಾರು ಎಳೆಂಟು ವರ್ಷಗಳಿಂದೀಚೆಗೆ ಅನೇಕ ಹಾಸ್ಟೆಲುಗಳನ್ನು ಹರಿಜನರಿಗಾಗಿ ತೆರೆದಿದ್ದಾರೆ. ಮತ್ತು ಕೆಲವು ಹಾಸ್ಟೆಲುಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೂಲಕ ತೆರೆದಿರುವ ಕಡೆ ಒಬ್ಬೊಬ್ಬರನ್ನು ಸೂಪರಿಂಟೆಂಡೆಂಟರಾಗಿ ಕೂಡ ನೇಮಿಸಿದ್ದಾರೆ. ಆದರೆ ಇಲ್ಲಿಗೆ ಸೂಪರಿಂಟೆಂಡೆಂಟ್ ಆಗಿ ನೇಮಕವಾಗಿರುವವರು ಕೇವಲ ಎಸ್.ಎಸ್.ಎಲ್.ಸಿ. ಓದಿದವರು ಮಾತ್ರ ಆಗಿರುತ್ತಾರೆ. ಇದಕ್ಕೆ ಬದಲು ಒಬ್ಬರು ಪದವೀಧರರಾಗಿರುವಂತಹವರನ್ನು ಇಲ್ಲಿಗೆ ಸೂಪರಿಂಟೆಂಡೆಂಟರಾಗಿ ನೇಮಕಮಾಡಿದರೆ ಇಲ್ಲಿನ ಹುಡುಗರಿಗೆ ಸ್ವಲ್ಪ ಸಹಾಯವಾಗುತ್ತದೆ. ಇದಕ್ಕಾಗಿ ಪೂರ್ತಿ ಕಾಲ ಇರುವಂತಹ ಒಬ್ಬರು ಪದವೀಧರರನ್ನು ಹಾಸ್ಟೆಲುಗಳ ಸೂಪರಿಂಟೆಂಡೆಂಟರಾಗಿ ನೇಮಿಸುವುದು ಒಳ್ಳೆಯದು ಎಂದು ಇಲ್ಲಿ ನಾನು ಸಲಹೆ ಮಾಡುತ್ತೇನೆ. ಈಗ ಇರುವಂತೆ ಎಸ್.ಎಸ್.ಎಲ್.ಸಿ. ಆಗಿರುವವರನ್ನು ಸೂಪರಿಂಟೆಂಡೆಂಟರಾಗಿ ನೇಮಿಸಿದರೆ ಅದರಿಂದ ಅನುಕೂಲವಾಗುವುದಿಲ್ಲ. ಹಾಸ್ಟೆಲುಗಳಲ್ಲಿ ಹನ್ನೊಂದನೇ ಸ್ಟ್ಯಾಂಡರ್ಡ್‌ನಲ್ಲಿ ವರ್ಗದಲ್ಲಿ ಓದುವವರೂ ಇರುತ್ತಾರೆ. ಇಂತಹ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಆಗಿರುವವರು ಇದ್ದರೆ ಅವರು ಏನೂ ಸಹಾಯ ಮಾಡಲಾಗುವುದಿಲ್ಲ. ಇದಕ್ಕಾಗಿ ಇಲ್ಲಿ ಪದವೀಧರರಾಗಿರುವವರನ್ನು ನೇಮಿಸುವುದು ಸೂಕ್ತವಾಗಿರುತ್ತದೆ. ಮತ್ತು ಸರಕಾರ ಈಗ ಒದಗಿಸಿರುವ ಹಣ ಸಾಲದು. ಇದನ್ನು ಒಂದಕ್ಕೆ ಎರಡರಷ್ಟು ಹೆಚ್ಚುಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ವಿದ್ಯಾರ್ಥಿವೇತನಗಳನ್ನು ಹರಿಜನರಿಗಾಗಿ ಕೊಡುತ್ತಿದ್ದಾರೆ. ಇದು ಸುಮಾರು 10-15-20 ವರ್ಷಗಳಿಂದ ಏನು ಕೊಡುತ್ತಿದ್ದರೋ ಇಂದೂ ಅದೇ ರೀತಿಯಲ್ಲಿದೆ. ಮೊದಲು ಮಿಡಲ್ ಸ್ಕೂಲಿನಲ್ಲಿ 3 ರೂಪಾಯಿ, ಹೈಸ್ಕೂಲುಗಳಲ್ಲಿ ಏಳೂವರೆ ರೂಪಾಯಿಗಳಷ್ಟು ಕೊಡುತ್ತಿದ್ದರು. ಈಗಲೂ ಕೂಡ ಇದೇ ರೇಟಿದೆ. ಇದನ್ನು ಇನ್ನೂ ಹೆಚ್ಚು ಮಾಡಬೇಕು, ಎಂದರೆ, ಒಂದಕ್ಕೆರಡರಷ್ಟು ಹೆಚ್ಚುಮಾಡಬಹುದು ಎಂದರೆ ಮಿಡಲ್ ಸ್ಕೂಲಿನಲ್ಲಿ 5 ರೂಪಾಯಿನಂತೆ, ಹೈಸ್ಕೂಲುಗಳಲ್ಲಿ ಹತ್ತು ರೂಪಾಯಿಗಳಂತೆ ಹೆಚ್ಚು ಮಾಡಬೇಕು ಎಂದು ಸರಕಾರಕ್ಕೆ ಇಲ್ಲಿ ಸಲಹೆ ಮಾಡುತ್ತೇನೆ. ಮತ್ತು ಕೇಂದ್ರ ಸರ್ಕಾರದವರು ಹರಿಜನರಿಗಾಗಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವವರಿಗೆ ವಿದ್ಯಾರ್ಥಿವೇತನಗಳನ್ನು ಕೊಡುತ್ತಿದ್ದಾರೆ. ಇದರಿಂದ ರಾಜ್ಯ ಸರಕಾರಕ್ಕೆ ಹಣದ ಖರ್ಚು ಇಲ್ಲ. ಇದರಿಂದ ರಾಜ್ಯ ಸರಕಾರದವರು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿ ಈಗಿರುವ ವೇತನಗಳನ್ನು ಒಂದಕ್ಕೆರಡರಷ್ಟು ಹೆಚ್ಚಿಸಬೇಕು ಮತ್ತು ಕೇಂದ್ರದಮೇಲೆ ಹೆಚ್ಚು ಒತ್ತಾಯ ತರಬೇಕೆಂದು ನಾನು ಇಲ್ಲಿ ಸರಕಾರಕ್ಕೆ ಸಲಹೆ ಮಾಡುತ್ತಿದ್ದೇನೆ ಮತ್ತು ಇದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಸರಕಾರ ತೆಗೆದುಕೊಳ್ಳಬೇಕೆಂದು ಇಲ್ಲಿ ನಾನು ಹೇಳುತ್ತೇನೆ.

ಡಿಪ್ರೆಸ್ಡ್ ಕ್ಲಾಸ್ ಲೈಬ್ರರಿ ಎಂದು ಬೆಂಗಳೂರು ಮೈಸೂರು ಯೂನಿವರ್ಸಿಟಿಯಲ್ಲಿ ಇದೆ. ಇದಕ್ಕೆ ಕೇಂದ್ರ ಸರಕಾರ ಹಣ ಒದಗಿಸುತ್ತದೆ. ಇರತಕ್ಕ ಹಣದಲ್ಲಿ ಅರ್ಧದಷ್ಟು ಸಹ ಖರ್ಚು ಮಾಡಿಲ್ಲ. ಡಿಪ್ರೆಸ್ಡ್ ಕ್ಲಾಸ್‌ಗೆ ಸಂಬಂಧಪಟ್ಟ ಪುಸ್ತಕಗಳನ್ನು ತೆಗೆದುಕೊಳ್ಳಲಿಲ್ಲ. ಇದರಿಂದ ಇದಕ್ಕೆ

ಒದಗಿಸಿದ ಹಣ ಉಳಿದುಹೋಗಿದೆ. ಇದನ್ನು ಕೂಡಲೇ ಪರಿಶೀಲಿಸಿ, ಕೇಂದ್ರದವರು ಕೊಡತಕ್ಕಂಥ ಹಣ ಖರ್ಚು ಮಾಡಿ, ಎಲ್ಲಾ ತರಹದ ಪುಸ್ತಕಗಳನ್ನು ಒದಗಿಸಿ ಸಹಾಯ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಮನೆಗಳನ್ನು ಕಟ್ಟಿಸುವ ವಿಚಾರ. ಮನೆಗಳ ಸೊಸೈಟಿ ವಿಷಯ ಹೇಳುತ್ತೇನೆ. ಹರಿಜನರು ಬಡವರು ಎನ್ನತಕ್ಕಂಥ ವಿಚಾರ ಎಲ್ಲರಿಗೂ ಗೊತ್ತಿದೆ. ಹರಿಜನರು ಜೀವನ ನಡೆಸುವುದಕ್ಕೆ ಆರ್ಥಿಕ ತೊಂದರೆಯು ಜೊತೆಗೆ ಸಮಾಜದಲ್ಲಿ ಇವರು ಅಸ್ಪೃಶ್ಯರು ಎನ್ನುವುದರಿಂದ ಸಮಾಜದ ತೊಂದರೆ ಸಹ ಹರಿಜನರಿಗೆ ಇದೆ. ಹರಿಜನರಿಗಾಗಿ ಮನೆಗಳನ್ನು ಕಟ್ಟಿಸುವುದಕ್ಕೆ ಒಂದು ಕಾರ್ಪೊರೇಷನ್ ಇದೆ. ಇದಕ್ಕೆ ನಾಮಕರಣ ಮಾಡಿದ ಸದಸ್ಯರನ್ನು ನೇಮಕ ಮಾಡಿದ್ದಾರೆ. ಈ ಕಾರ್ಪೊರೇಷನ್ ಸಭೆ ವರ್ಷಕ್ಕೆ ಒಂದು ಸಲವೋ ಅಥವಾ ಇನ್ನೊಂದು ಸಲವೋ ಸಭೆ ಸೇರುತ್ತದೆ. ಆದುದರಿಂದ ಮನೆ ಕಟ್ಟುವಂಥಾದ್ದು ಇವರಿಂದ ಪರಿಶೀಲನೆಯಾಗುತ್ತದೆ ಎಂದು ಹೇಳಿದರೆ ಅದು ತಪ್ಪು. ಈ ಕಾರ್ಪೊರೇಷನ್ನಿಗೆ ಇನ್ನೂ ಹೆಚ್ಚು ಜನ ಸದಸ್ಯರನ್ನು ಕೊಡಬೇಕು ಮತ್ತು ಪ್ರತಿ ಮೂರು ತಿಂಗಳಿಗೆ ಒಂದು ಸಲ ಮೀಟಿಂಗ್ ಕರೆದು ಮನೆ ಕಟ್ಟುವ ಪ್ರಗತಿ ಪರಿಶೀಲನೆ ಮಾಡಬೇಕು ಹಾಗೂ ಇದಕ್ಕೆ ಪ್ರೋತ್ಸಾಹ ಕೊಡಬೇಕು ಎಂದು ಹೇಳುತ್ತೇನೆ.

ಹರಿಜನರ ಮನೆಗಳನ್ನು ಕಟ್ಟುವುದಕ್ಕೆ 200 ರೂಪಾಯಿ ಮರ ಉಚಿತವಾಗಿ ಕೊಡಬೇಕು ಎಂದು ಅರಣ್ಯ ಇಲಾಖೆಯವರು ಅಪ್ಪಣೆ ಕೊಡಿಸಿದ್ದಾರೆ. ಈ ಇನ್ನೂರು ರೂಪಾಯಿ ಮರ ತರಬೇಕಾದರೆ ಹರಿಜನರಿಗಾಗುವ ಪರದಾಟ ನೋಡಬೇಕು. ಶ್ರೀಮತಿ ನಾಗರತ್ನಮ್ಮನವರು ಹೇಳಿದಹಾಗೆ ಕಣ್ಣೀರು ಸುರಿಸಬೇಕಾಗುತ್ತದೆ. ಈ ಮರ ತರಲು ಹಳ್ಳಿಗಳಲ್ಲಿ ಮೊದಲು ಪಂಚಾಯತಿ ಲೈಸೆನ್ಸ್, ಆಮೇಲೆ ಬಿ. ಡಿ. ಓ. ಅವರಿಂದ ಲೈಸೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಇರುವವರೆಗೆ ಮರ ತರಲು ಚಿಕ್ಕಮಗಳೂರು ಡಿಪೋಕ್ಕೆ ಹೋಗಬೇಕಾಗುತ್ತದೆ. ಅಲ್ಲಿಗೆ ಹೋಗಿ ಮರ ಕೊಡಿ ಎಂದು ಕೇಳಿದರೆ ನಿಮ್ಮ ಅರ್ಜಿ ಬರಲಿಲ್ಲ, ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಅಲ್ಲದೆ ನಮ್ಮ ಡಿಪೋದಿಂದ ಕೊಡಬೇಕು ಎಂದು ಹೇಳಿಲ್ಲ, ಹುಣಸೂರು ಡಿಪೋಕ್ಕೆ ಹೋಗಿ ಎಂದು ಹೇಳುತ್ತಾರೆ. ಹುಣಸೂರು ಡಿಪೋಕ್ಕೆ ಹೋದರೆ ವಿವರ ಕೊಟ್ಟು ಬರವಣಿಗೆಯಲ್ಲಿ ತಿಳುವಳಿಕೆ ಬರಲಿಲ್ಲ, ತರೀಕೆರೆ ಡಿಪೋಕ್ಕೆ ಹೋಗಿ ಎಂದು ಹೇಳಲಾಗುತ್ತದೆ. ಹೀಗೆ ಒಂದು ಡಿಪೋನಿಂದ ಇನ್ನೊಂದು ಡೀಪೋಕ್ಕೆ ಹೋಗಿ ಇನ್ನೂರು ರೂಪಾಯಿ ಖರ್ಚು ತಲೆಮೇಲೆ ಹಾಕಿಕೊಂಡು ನಿರುತ್ಸಾಹಿಗಳಾಗಿ ಬಿಡುವ ಸಂದರ್ಭ ಇದೆ. ಆದುದರಿಂದ ಇದನ್ನು ಸರಕಾರ ಗಮನಿಸಬೇಕು ಎಂದು ಹೇಳುತ್ತೇನೆ.

ಇನ್ನು ಉದ್ಯೋಗದಲ್ಲಿ ಶೇಕಡ 18ರಷ್ಟು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮೀಸಲಾಗಿ ಕಾಯ್ದಿಡಬೇಕು ಎಂದು ಹೇಳಿದ್ದಾರೆ. ಈ ರೀತಿ ಹೇಳುವುದು ಪುಸ್ತಕದಲ್ಲಿ ಕಾನೂನಿನಲ್ಲಿ ರೂಲ್ಸ್‌ನಲ್ಲಿ ಮಾತ್ರ ಇದೆ, ಆದರೆ ನಿಜವಾಗಿ ನಡೆಯುತಕ್ಕಂಥಾದ್ದು ಅಲ್ಲ. ನಮ್ಮ ಹರಿಜನರಿಗೆ ನಾಲ್ಕನೇ ತರಗತಿಯ ಆಳುಗಳ ಕೆಲಸ ಕೂಡ ಸರಕಾರದಲ್ಲಿ ದಕ್ಕುತ್ತಿಲ್ಲ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಎಂಪ್ಲಾಯ್‌ಮೆಂಟ್ ಸೆಲ್ ಎಂದು ಮಾಡಿದ್ದಾರೆ. ಆದರೆ ಅಧಿಕಾರಿಗಳು ಪರೀಕ್ಷೆ ಮಾಡಿದಾಗ ಶೇಕಡ 1.7 ಅಷ್ಟು ಮಾತ್ರ ಅನುಕೂಲ ಮಾಡಿಕೊಟ್ಟಿದ್ದಾರೆ. ಉಳಿದವರಿಗೆ 4ನೇ ತರಗತಿ ಸೇವಕರ ಕೆಲಸ ಸಿಕ್ಕುತ್ತಿಲ್ಲ. 3ನೇ ತರಗತಿ ಬಗ್ಗೆ ವಿಚಾರಿಸಿದರೆ ಅರ್ಹತೆಯುಳ್ಳ ಕ್ಯಾಂಡಿಡೇಟ್ ಬರಲಿಲ್ಲ, ಆದುದರಿಂದ ಟೆಂಪರರಿ ಅರೇಂಜ್‌ಮೆಂಟ್ ಮಾಡಿ ಬೇರೆಯವರನ್ನು ಇಟ್ಟುಕೊಂಡಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಮಂತ್ರಿಗಳು ಇದನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕು. ಖಚಿತವಾದ ಅಪ್ಪಣೆ ಹೊರಡಿಸಿ ಈ ರೀತಿ ಮಾಡದ ಹಾಗೆ ಅಧಿಕಾರಿಗಳಿಗೆ ತಿಳುವಳಿಕೆ ಕೊಡಬೇಕು. ಮೈಸೂರು ದೇಶದಲ್ಲಿ ನಮ್ಮದು ದುರಾದೃಷ್ಟ. ಇಲ್ಲಿ ಸುತ್ತುಮುತ್ತು ಕೇಂದ್ರ ಸರಕಾರದ ಕೈಗಾರಿಕೆಗಳು ಕಾರ್ಖಾನೆಗಳು ಇವೆ. ಹಾಗು ನಮ್ಮ ಕೈಗಾರಿಕೆಗಳು ಕಾರ್ಖಾನೆಗಳು ಸಹ ಇವೆ. ಇಲ್ಲಿ ಉದ್ಯೋಗ ಒದಗಿಸುವುದಕ್ಕೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ಹೆಸರು ತರಿಸಿಕೊಳ್ಳುತ್ತಾರೆ. ಮೈಸೂರು ದೇಶದಲ್ಲಿ ಹುಟ್ಟಿ ಬೆಳೆದು ಭೂಮಿ ಉಳುಮೆಮಾಡಿ ದೇಶಕ್ಕೆ ಆಹಾರ ಒದಗಿಸುವ ಈ ದೇಶದ ಹರಿಜನರಿಗೆ ಕೆಲಸ ದೊರಕದೆ ಕೇರಳ ಮದ್ರಾಸ್‌ನವರಿಗೆ ಹೋಗುತ್ತವೆ. ಆದುದರಿಂದ ಸರಕಾರ ಇದನ್ನು ಗಮನಿಸಬೇಕು ಎಂದು ಹೇಳುತ್ತೇನೆ.

ಇನ್ನು ಎಸ್. ಈ. ಎಸ್. ಹಣಕಾಸಿನ ಸ್ಥಿತಿ ಬಗ್ಗೆ ಹೇಳುವುದಾದರೆ ಇದಕ್ಕೆ ಕೇಂದ್ರದಿಂದ ಹಣ ಬರುತ್ತದೆ; ಹಾಗೂ ನಮ್ಮ ಸರಕಾರ ಕೂಡ ಹಣ ಒದಗಿಸುತ್ತದೆ. ಹರಿಜನ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಸೇಕಡ 18ರಷ್ಟು ಹಣ ಒದಗಿಸಬೇಕು ಮತ್ತು ಅವರಿಗಾಗಿ ಕೆಲಸ

(ಶ್ರೀ ಆರ್. ಮುನಿಸ್ವಾಮಯ್ಯ)

ಕಾರ್ಯಗಳನ್ನು ಏರ್ಪಡಿಸಬೇಕು, ಹಾಗೂ ಅಂದಾಜು ಮಾಡಿದ ಹಣ ಉಳಿಸದೆ ಖರ್ಚು ಮಾಡಬೇಕು ಎಂದು ನಿಗದಿಯಾಗಿದೆ. ಇದನ್ನು ಯಾವ ಬಿ. ಡಿ. ಓ. ಅಧಿಕಾರಿಗಳಾಗಲಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರಾಗಲಿ ಗಮನಿಸಿಲ್ಲ. ದಯವಿಟ್ಟು ಮೂರು ತಿಂಗಳಿಗೆ ಒಂದು ಸಲ ರಿಪೋರ್ಟ್ ತರಿಸಿಕೊಳ್ಳಬೇಕು ಮತ್ತು ಅವರಿಗೆ ಸರಿಯಾದ ತಿಳುವಳಿಕೆ ಕೊಟ್ಟು ಇದನ್ನು ತಾತ್ಸಾರ ಮಾಡಬಾರದು ಎಂದು ಹೇಳಬೇಕು. ಇಷ್ಟೇ ಅಲ್ಲದೆ ತಾತ್ಸಾರಮಾಡತಕ್ಕಂಥ ಅಧಿಕಾರಿಗಳಮೇಲೆ ಕಣ್ಣು ಇಡಬೇಕು ಎಂದು ಹೇಳುತ್ತೇನೆ.

ಇನ್ನು ಈಗ ಭೂಮಿ ವಿಷಯ ಹೇಳುವುದಕ್ಕೆ ಬಂದರೆ, ನಮ್ಮ ಸ್ನೇಹಿತರಾದ ಶ್ರೀಮಾನ್ ರಾಚಯ್ಯನವರನ್ನು ಕೂಡಲೇ ಡಿಸ್‌ಮಿಸ್ ಮಾಡಬೇಕೆಂದು ಇದ್ದೇವೆ. ಅದಕ್ಕೆ ಕಾರಣ ಇಷ್ಟೇ. ಎಷ್ಟೋ ಕಾಲದಿಂದ ಹರಿಜನರಿಗೆ ಭೂಮಿ ಇಲ್ಲ, ಕೆಲವು ಸವರ್ಣ ಹಿಂದುಗಳಿಗೂ ಭೂಮಿ ಇಲ್ಲ. ನೂರಾರು ಎಕರೆ ಭೂಮಿ ಬಗರ್ ಹುಕುಮ್‌ನಿಂದ ಸಾಗುವಳಿ ಮಾಡುತ್ತಿದ್ದಾರೆ. ನಮ್ಮವರು ಸಹ ಹಳ್ಳಿಗಳಲ್ಲಿ ಅರ್ಧ ಎಕರೆ, ಕಾಲು ಎಕರೆ, ಮುಕ್ಕಾಲು ಎಕರೆ ಒಂದು ಎಕರೆ, ಬಗರ್ ಹುಕುಮಿನಿಂದ ಸಾಗುವಳಿ ಮಾಡುತ್ತಿದ್ದವರನ್ನು ಓಡಿಸಬೇಕು ಎಂದು ಆರ್ಡರ್ ಮಾಡಿ ಬಹಳ ಅನ್ಯಾಯ ಮಾಡಿದ್ದಾರೆ. ಇದನ್ನು ನಾವು ಸಹಿಸಲು ಸಾಧ್ಯವಿಲ್ಲ. ಹರಿಜನರು ಉಳುಮೆ ಮಾಡತಕ್ಕ ಅರ್ಧ ಎಕರೆ ಕಾಲು ಎಕರೆ ಜಮೀನನ್ನು ಅವರಿಗೇ ರಿಜಿಸ್ಟರ್ ಮಾಡಿಕೊಡಬೇಕು ಇಲ್ಲದಿದ್ದರೆ ನಿಮಗೆ ಕೆಟ್ಟದ್ದು ಆಗುತ್ತದೆ.

ತೋಟಿ ತಳವಾರರು ನೀರಗಂಟಿಗಳಿಗೆ ಸರ್ವಿಸ್ ಇನಾಮ್ ಜಮೀನು ಇದೆ. ಹೊಸ ರೂಲ್ ಮಾಡಿ ಇನಾಮ್ ಜಮೀನು ಕೊಟ್ಟಿರುವುದನ್ನು ತೆಗೆದುಹಾಕಬೇಕು ಎಂದು ಮಾಡಿದ್ದಾರೆ. ಈ ಭೂಮಿ ಬೇರೆಯವರು ಕೊಂಡುಕೊಂಡು ಬಿಟ್ಟಿದ್ದಾರೆ. ವ್ಯವಸಾಯ ಮಾಡುವುದೇ ತಪ್ಪು ಎನ್ನುವ ಹಾಗೆ ಮಾಡಿದ್ದಾರೆ. ಇಂದು ಭೂಮಿ ಕಳೆಕೊಂಡು ಬಡ ಹರಿಜನರು ಬೀದಿ ಭಿಕಾರಿಗಳಾಗಿದ್ದಾರೆ. ಆದುದರಿಂದ ಇನ್ನು ಕೂಡಲೇ ಪರಿಶೀಲನೆಮಾಡಿ ಇನಾಮತಿ ಇರತಕ್ಕಂಥ ಭೂಮಿಯನ್ನು ಅವರವರಿಗೆ ರಿಜಿಸ್ಟರ್ ಮಾಡಿಸಿ ಕೊಡಬೇಕು ಎಂದು ಹೇಳುತ್ತೇನೆ.

ಮದ್ರಾಸ್ ರಾಜ್ಯದಲ್ಲಿ ಹರಿಜನರ ಕಲ್ಯಾಣ ಇಲಾಖೆ ಎಂದು ಒಂದು ಇಲಾಖೆ ಇದೆ. ಇಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅದು ಸೇರಿದೆ. ಬ್ಯಾಕ್‌ವರ್ಡ್ ಎನ್ನುವುದಕ್ಕೆ ಅರ್ಥ ಹೇಳಿರುವುದು ಏನು ಅಂದರೆ, 1500 ರೂಪಾಯಿ ಒಳಗೆ ಆದಾಯ ಇರತಕ್ಕಂಥವರು ಎಲ್ಲರೂ ಹಿಂದುಳಿದವರು ಎಂದು ಅರ್ಥ ಕೊಟ್ಟು ಒಂದು ರೀತಿಯ ಆರ್ಥಿಕ ಮಟ್ಟದ ಅರ್ಥ ಕೊಟ್ಟಿದ್ದಾರೆ. ರೂಲ್ಸ್ ಮಾಡುವ ಕಾಲದಲ್ಲಿ ಹರಿಜನರ ಕಲ್ಯಾಣ ಮರೆತು ಹೋಗುತ್ತಿದೆ. ಆದುದರಿಂದ ಹರಿಜನರ ಕಲ್ಯಾಣ ಮರೆತು ಹೋಗದ ಹಾಗೆ ಮದ್ರಾಸ್ ರಾಜ್ಯದಲ್ಲಿ ಇರುವ ಹಾಗೆ, ಆಂಧ್ರ ರಾಜ್ಯದಲ್ಲಿರುವ ಹಾಗೆ ಹರಿಜನರ ಕಲ್ಯಾಣ ಇಲಾಖೆ ಎಂದು ಮಾಡಿ ಈಗ ಇರತಕ್ಕ ಮಂತ್ರಿಗಳೇ ಈ ಮಂತ್ರಿಗಳಾಗಿ ಮುಂದುವರಿಯಬಹುದು, ಇಷ್ಟವಿಲ್ಲದಿದ್ದರೆ ಬೇರೆಯವರಿಗೆ ಕೊಡಬಹುದು. ಒಟ್ಟಿನಲ್ಲಿ ಹರಿಜನರ ಕಲ್ಯಾಣ ಇಲಾಖೆ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ವೆಲ್ಫೇರ್ ವಿಷಯ ಹೇಳುವುದಾದರೆ ಅದು ಬರಿ ಪುಸ್ತಕದಲ್ಲಿ ಇದೆ. ಈ ವಿಷಯ ಸಮಾಜ ಕಲ್ಯಾಣ ಇಲಾಖೆಗೆ ಹೋಗಿದೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಗೆಜೆಟೆಡ್ ಆಫೀಸರನ್ನು ಕೇಳಿದ್ದೇವೆ. ಎಲ್ಲೆಲ್ಲಿ ಕೊಡುತ್ತೀರಿ. ನಮ್ಮ ಕ್ಷೇತ್ರಕ್ಕೆ ಬೆಂಗಳೂರು ಡಿಸ್ಟ್ರಿಕ್ಟ್‌ಗೆ ಕೊಡುವುದಕ್ಕೆ ಸಾಧ್ಯವೇ? ಈ ವೆಲ್ಫೇರ್ ಸ್ಕೀಂ ಏರ್ಪಾಡು ಮಾಡುವುದಕ್ಕೆ ಸಾಧ್ಯವೇ ಎಂದು ಕೇಳಿದರೆ ಅವರು ನಿಸ್ಸಹಾಯಕತೆ ತೋರಿಸುತ್ತಾರೆ. ಈ ಸ್ಕೀಂ ಇದೆ, ಆದರೆ ಇವಕ್ಕೆ ಹಣ ಒದಗಿಸಿಲ್ಲ, ಆದುದರಿಂದ ಕೊಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಆರ್ಡರ್ ನೋಡಿ ತೃಪ್ತಿಪಟ್ಟುಕೊಳ್ಳುವಂತಾಗಿದೆ. ಅಲ್ಲೊಂದು ಇಲ್ಲೊಂದು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಇದನ್ನು ಪುಸ್ತಕದಲ್ಲಿ ಬಹಳ ಚೆನ್ನಾಗಿ ವರ್ಣನೆ ಮಾಡಿದ್ದಾರೆ. ಈ ಪುಸ್ತಕ ಅಮೇರಿಕಾದಿಂದ ಬಂದವರು ನೋಡಿದರೆ ನೀಗ್ರೋ ಜನರಂಥವರು ಕಿಣತರವಾದ ರೇಷಿಯಲ್ ತೊಂದರೆಪಟ್ಟುಕೊಂಡವರು ನೋಡಿದರೆ ಅವರಿಗೆ ಅನ್ನಿಸಬಹುದು ಮೈಸೂರು ದೇಶದಲ್ಲಿ ಎಷ್ಟು ಸೊಗಸಾಗಿ ಕೆಲಸ ಮಾಡುತ್ತಾ ಇದ್ದಾರೆ, ಎಷ್ಟು ಅಭಿವೃದ್ಧಿ ಕಾರ್ಯ ಕೈಕೊಂಡಿದ್ದಾರೆ ಎಂದು ಅವರು ಸಂತೋಷ ಪಡುತ್ತಾರೆ. ಆದರೆ ಇಲ್ಲಿ ಅನುಭವಿಸುತ್ತಿರುವ ನಾವು ಪುಸ್ತಕದಲ್ಲಿರುವುದನ್ನು ನೋಡಿಕೊಂಡು ಅದರಲ್ಲಿರುವ ಪ್ರಗತಿಯನ್ನು ನೋಡಿ ಸಂತೋಷಪಡಬೇಕಾಗಿದೆ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

3-30 P.M.

ಪ್ರವಾಸೋದ್ಯಮದ ವಿಚಾರ ಹೇಳಬೇಕಾದರೆ, ಮೈಸೂರು ದೇಶದಲ್ಲಿ ಬಹಳ ಪ್ರಗತಿಪರವಾದ ಸೌಂದರ್ಯಪೂರಿತವಾದ, ಸೌಂದರ್ಯಕರವಾದ ಅನೇಕ ದೃಶ್ಯಗಳಿವೆ. ಅನೇಕ ಪ್ರವಾಸಿಗರು ಪರದೇಶಗಳಿಂದ ಮತ್ತು ಪ್ರಪಂಚದ ಅನೇಕ ಭಾಗಗಳಿಂದ ಬರುತ್ತಾರೆ. ಅನೇಕಲ್ ತಾಲ್ಲೂಕಿನಲ್ಲಿ ಬಹಳ ರಮಣೀಯವಾದ ದೃಶ್ಯಗಳಿವೆ, ಸೌಂದರ್ಯವಾದ ಬೆಟ್ಟಗಳು ಮತ್ತು ಅರಣ್ಯ ಪ್ರದೇಶಗಳಿವೆ. ಅನೇಕ ಆನೆಗಳು ಮತ್ತು ವನ್ಯ ಮೃಗಗಳು ಇವೆ. ಇವನ್ನೆಲ್ಲ ನೋಡುವುದಕ್ಕೆ ಮನರಂಜನೀಯವಾಗಿರುತ್ತದೆ. ಮುತ್ತ್ಯಾಲಮಡುವು ಎಂಬ ಸಣ್ಣ ಜಲಪಾತವಿದೆ. ಅದು ನೋಡುವುದಕ್ಕೆ ಬಹಳ ರಮಣೀಯವಾಗಿದೆ. ಅದನ್ನು ಒಂದು ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕೆಂದೂ ಮತ್ತು ಸಂಚಾರಿಗಳಿಗೆ ಏನೇನು ಸೌಲಭ್ಯಗಳು ಬೇಕೋ ಅವನೆಲ್ಲ ಒದಗಿಸಬೇಕೆಂದೂ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರುವ ಬೇಡಿಕೆಯನ್ನು ವಿರೋಧಿಸುತ್ತ ನಾನು ಕೆಲವು ವಿಚಾರಗಳನ್ನು ಮೈಸೂರು ಸರ್ಕಾರದ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ಇವೊತ್ತಿನ ದಿವಸ ಒಂದು ವಿಷಾದದ ಸಂಗತಿ ಎಂದರೆ, ಹರಿಜನರ ಬೇಡಿಕೆ ಚರ್ಚೆಯಾಗುವಾಗ ಅದು ನಮಗೆ ಏನು ಸಂಬಂಧ ಎನ್ನುವ ಹಾಗೆ ಸಭೆಯ ಸದಸ್ಯರು ಎರಡು ಕಡೆಗಳಲ್ಲೂ ಬಹಳ ವಿರಳವಾಗಿದ್ದಾರೆ. ಇದು ಬಹಳ ದುಃಖದ ಸಂಗತಿ. ಏಕೆಂದರೆ, ಇವೊತ್ತು ನಾವು ನಾಡನ್ನು ಕಟ್ಟಲಿಕ್ಕೆ ಹೊರಟಿರುವವರು, ಸಮಾಜವನ್ನು ಕಟ್ಟಲಿಕ್ಕೆ ಹೊರಟಿರುವವರು, ಪ್ರತಿಯೊಬ್ಬರಿಗೂ ಹರಿಜನರ ವಿಚಾರದಲ್ಲಿ ಆಸಕ್ತಿ ಇರಬೇಕು ; ಅವರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ, ನಾಡಿಗೆ ಹೊಸ ಚೈತನ್ಯ ತುಂಬುವುದರಲ್ಲಿ ಆಸಕ್ತಿ ಇರಬೇಕು. ಇದನ್ನು ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ.

ಈ ಹೊತ್ತಿನ ದಿವಸ 1968-69 ರ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಯನ್ನು ನೋಡಿದಾಗ ಮಾನ್ಯ ಸಚಿವರು ಹೊಸದಾಗಿ ಏನನ್ನೂ ಈ ಬೇಡಿಕೆಗೆ ಶಕ್ತಿಯನ್ನು ತಂದು ಕೊಟ್ಟಿಲ್ಲ ಎನ್ನುವ ಮಾತನ್ನು ವಿಷಾದದಿಂದ ಅವರ ಗಮನಕ್ಕೆ ತರುತ್ತೇನೆ. ಈ ಬಜೆಟ್‌ನಲ್ಲಿ ಈ ವರ್ಷ ಸುಮಾರು ಹಿಂದುಳಿದ ಜನಾಂಗಗಳಿಗಾಗಿ 62 ಲಕ್ಷ 35 ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಬೇಡಿಕೆ 3,24,99,000 ರೂಪಾಯಿ ಇದ್ದರೂ ಕೂಡ ಹಿಂದುಳಿದ ವರ್ಗಗಳ ಕಲ್ಯಾಣದ ಸಲುವಾಗಿ ಕೊಟ್ಟಿರುವುದು ಕೇವಲ 62,35,000 ರೂಪಾಯಿಗಳು, ಸಿಬ್ಬಂದಿಯ ಸಲುವಾಗಿ 30 ಲಕ್ಷ ರೂಪಾಯಿ. ಇದನ್ನು ನೋಡಿದಾಗ ಎಲ್ಲವೂ ಕೂಡಿ ಸುಮಾರು 92 ಲಕ್ಷ ರೂಪಾಯಿಗಳಾಗುತ್ತವೆ. ಇದನ್ನು ಬಿಟ್ಟು ಸರ್ಕಾರದವರು ಯಾವ ಒಂದು ಹೆಚ್ಚಳವನ್ನೂ ಮಾಡಿಲ್ಲ. 1961ರ ಜನಗಣತಿ ಲೆಕ್ಕದ ಪ್ರಕಾರ ಜನಸಂಖ್ಯೆಯನ್ನು ತೆಗೆದುಕೊಂಡಾಗ ಮೈಸೂರು ರಾಜ್ಯದಲ್ಲಿ ಹರಿಜನರು ಸುಮಾರು 32 ಲಕ್ಷ, ಟ್ರೈಬ್ಸ್ 2 ಲಕ್ಷ, ಡೀನೋಟಿಫೈಡ್ ಟ್ರೈಬ್ಸ್ 8,10,000 ಮತ್ತು ನೊಮ್ಯಾಡಿಕ್, ಸೆಮಿ ನೊಮ್ಯಾಡಿಕ್ 4,15,000 ಹೀಗೆ ಒಟ್ಟು 46 ಲಕ್ಷ ಜನಾಂಗ ಈ ರೀತಿ ಇದ್ದಾರೆ. ಈ ಜನಾಂಗದ ಸಲುವಾಗಿ ಸರ್ಕಾರದವರು 62 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಇಟ್ಟುಕೊಂಡಿದ್ದಾರೆ. ಅಂದರೆ ಸುಮಾರು 23,28,000 ರೂಪಾಯಿಗಳು ಶಿಕ್ಷಣದ ಸಲುವಾಗಿ, 4,03,000 ರೂಪಾಯಿಗಳು ಆರ್ಥಿಕಾಭಿವೃದ್ಧಿಯ ಸಲುವಾಗಿ, 6,25,000 ರೂಪಾಯಿ ಆರೋಗ್ಯ ಮತ್ತು ಗೃಹ ನಿರ್ಮಾಣ ಮತ್ತು ಇತರ ಯೋಜನೆಗಳ ಸಲುವಾಗಿ ಷೆಡ್ಯೂಲ್ಡ್ ಕ್ಯಾಸ್ಟ್ ಜನಾಂಗದವರ ಸಲುವಾಗಿ ಇಟ್ಟಿದ್ದಾರೆ. ಷೆಡ್ಯೂಲ್ಡ್ ಟ್ರೈಬ್ಸ್ ಸಲುವಾಗಿ, 3,70,000 ರೂಪಾಯಿಗಳನ್ನು ಶಿಕ್ಷಣದ ಸಲುವಾಗಿ 1,70,000 ರೂಪಾಯಿಗಳನ್ನು ಆರ್ಥಿಕಾಭಿವೃದ್ಧಿಯ ಸಲುವಾಗಿ, 1,37,000 ರೂಪಾಯಿಗಳನ್ನು ಆರೋಗ್ಯ ಮತ್ತು ಇತರ ಖರ್ಚುಗಳಿಗಾಗಿಯೂ, ನೊಮ್ಯಾಡಿಕ್ ಮತ್ತು ಸೆಮಿ ನೊಮ್ಯಾಡಿಕ್ ಸಲುವಾಗಿ 3,35,000 ರೂಪಾಯಿಗಳನ್ನು ಶಿಕ್ಷಣದ ಸಲುವಾಗಿಯೂ, ಆರ್ಥಿಕಾಭಿವೃದ್ಧಿಯ ಸಲುವಾಗಿ 85,000 ರೂಪಾಯಿಗಳನ್ನೂ, ಆರೋಗ್ಯ ಮತ್ತು ಇತರೆ ಖರ್ಚುಗಳಿಗಾಗಿ 55,000 ರೂಪಾಯಿಗಳನ್ನೂ, ಈ ರೀತಿ ಒಟ್ಟು 62 ಲಕ್ಷ ರೂಪಾಯಿಗಳನ್ನು ಈ ಸಾಲಿನಲ್ಲಿ ಇಟ್ಟುಕೊಂಡಿದ್ದಾರೆ. ಇದನ್ನು ನೋಡಿದಾಗ ಮೈಸೂರು ಸರ್ಕಾರದವರು ತಮ್ಮ ಯಾವುದೇ ಹೆಚ್ಚು ಉಳಿಕೆಯನ್ನು ಈ ವರ್ಷದ ಬಜೆಟ್ಟಿನಲ್ಲಿ ಹಾಕಿಲ್ಲ.

ಮಕ್ಕಳ ಶಿಕ್ಷಣದ ಸಲುವಾಗಿ ಅಂಕಿ ಸಂಖ್ಯೆಗಳನ್ನು ನೋಡಿದಾಗ ಹಿಂದೆ ಸ್ಕಾಲರಷಿಪ್‌ಗಾಗಿ ಎಷ್ಟು ಹಣವಿತ್ತೋ ಅಷ್ಟೇ ಹಣವನ್ನು ಈ ಸಲವೂ ಇಟ್ಟುಕೊಂಡಿದ್ದಾರೆ. ಒಂದು ಸಲ ನಾನು ಚುಕ್ಕೆ ಗುರುತಿನ ಪ್ರಶ್ನೆ ಕೇಳಿದಾಗ ಮಾನ್ಯ ಶಿಕ್ಷಣ ಸಚಿವರು 8-9 ಲಕ್ಷ ರೂಪಾಯಿಗಳು ಪ್ರತಿ ವರ್ಷವೂ ಕಡಮೆ ಬೀಳುತ್ತಿದೆ, ಅದರ ಸಲುವಾಗಿ ಹೆಚ್ಚುವರಿಯನ್ನು ಕೇಂದ್ರ ಸರಕಾರಕ್ಕೆ ಕೇಳುತ್ತಿ

(ಶ್ರೀ ಎಸ್. ಎಸ್. ಅರಕೇರಿ)

ದ್ದೇವೆ ಎಂದು ಹೇಳಿದರು. ಆ ಕಾಲದಲ್ಲಿ ಮಾನ್ಯ ಸಮಾಜಕಲ್ಯಾಣ ಮಂತ್ರಿಗಳೂ ಈ ಮಾನ್ಯ ಸಭೆಯಲ್ಲಿ ಇದ್ದರು. ಈ ಹೊತ್ತಿನ ದಿವಸ ಅವರು ಕೊಟ್ಟಿರುವ ಅಂಕಿ ಸಂಖ್ಯೆಗಳನ್ನು ನೋಡಿದರೆ ಕೇಂದ್ರ ಸರ್ಕಾರದಿಂದ ಬಂದದ್ದು ಕೇವಲ 17,70,000 ರೂಪಾಯಿಗಳು. ಪ್ರತಿವರ್ಷ ಪೋಸ್ಟ್ ಮೆಟ್ರಿಕ್ಯುಲೇಷನ್ ಶಿಕ್ಷಣದ ಸಲುವಾಗಿ ಕೊಡುತ್ತಿದ್ದುದು 17,42,000 ರೂಪಾಯಿ ಎಂದು ಹೇಳಿದಾಗ ನಮ್ಮ ಸಮಾಜ ಕಲ್ಯಾಣ ಮಂತ್ರಿಗಳು ಬಂದು ಒಂದು ವರ್ಷವಾದರೂ ಕೂಡ ಸುಮಾರು 28 ಸಾವಿರ ರೂಪಾಯಿಗಳು ಬಂದುವೇ ಹೊರತು ಸಭೆಯಲ್ಲಿ ಅವರು ಏನು ಆಶ್ವಾಸನೆಯನ್ನು ಕೊಟ್ಟಿದ್ದರು, ಎರಡು ಮೂರು ಲಕ್ಷ ರೂಪಾಯಿಗಳನ್ನಾದರೂ ಕೇಂದ್ರ ಸರ್ಕಾರದಿಂದ ತರುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಏನು ಹೇಳಿದ್ದರು ಅದು ಸಾಧ್ಯವಾಗಿಲ್ಲ. 1,30,000 ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಸಿಕ್ಕಲಾರದೆ ಪ್ರತಿ ವರ್ಷವೂ ಅವರು ಕಷ್ಟಪಡುತ್ತಿದ್ದಾರೆ. 93,000 ವಿದ್ಯಾರ್ಥಿಗಳಿಗೆ ಮಾತ್ರ ಸ್ಕಾಲರ್‌ಷಿಪ್ ಸಿಕ್ಕುತ್ತಿದೆ. ಇದರಿಂದ ಕಾಲೇಜು ವಿದ್ಯಾರ್ಥಿಗಳಿಗೆ ಅನೇಕರಿಗೆ ಮತ್ತು ಹೈಸ್ಕೂಲು ವಿದ್ಯಾರ್ಥಿಗಳಿಗೆ ಹೊಸ ತೊಂದರೆ ನಿರ್ಮಾಣವಾಗುತ್ತಿದೆ. ಷೆಡ್ಯೂಲ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಗೆ ಸೇರಿದ ಎಲ್ಲ ವಿದ್ಯಾರ್ಥಿಗಳಿಗೂ ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳಲ್ಲಿ ಫೀಜು ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ನೋಡಿದಾಗ ಸರ್ಕಾರದವರು ಅಂಥ ಪ್ರೈಮರಿ ಮತ್ತು ಹೈಸ್ಕೂಲುಗಳಿಗೆ ಸಹಾಯ ಧನವನ್ನು ಎಲ್ಲಿಸಬೇಕು. ಹರಿಜನರ ಏಳಿಗೆಯಾಗಬೇಕಾದರೆ, ಹರಿಜನರ ಉದ್ಧಾರವಾಗಬೇಕಾದರೆ ಶಿಕ್ಷಣದ ಬಾಬಿನ ಸಲುವಾಗಿ ಸರಿಯಾದ ಮೊತ್ತವನ್ನು ಮುಂದಿನಿಂದ ಆದರೂ ಕೊಡಬೇಕು ಎನ್ನುವಂಥ ಸೂಚನೆಯನ್ನು ಸರ್ಕಾರಕ್ಕೆ ಕೊಟ್ಟು ಆ ರೀತಿ ಮಾಡಬೇಕು ಎಂದು ಬಹಳ ಅಂತಃಕರಣ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಕೇಂದ್ರ ಸರ್ಕಾರದವರು ಈ ಸಲ ಸುಮಾರು ಕೇಂದ್ರೀಯ ಯೋಜನೆಗಳಿಗೆ ಸಹಾಯ ಧನವಾಗಿ 27,10,000 ರೂಪಾಯಿಗಳನ್ನು ಕೊಟ್ಟಿದ್ದಾರೆ. ಷೆಡ್ಯೂಲ್ ಕ್ಯಾಸ್ಟ್‌ನವರಿಗೆ 18,70,000 ರೂಪಾಯಿ, ಡೀನೋಟಿಫೈಡ್ ಟ್ರೈಬ್ಸ್‌ಗೆ 1,76,000 ರೂಪಾಯಿ, ಷೆಡ್ಯೂಲ್ ಟ್ರೈಬ್ಸ್ ಸಲುವಾಗಿ 5,90,000 ರೂಪಾಯಿ, ನೊಮ್ಯಾಡಿಕ್ ಮತ್ತು ಸೆಮಿನೊಮ್ಯಾಡಿಕ್ ಸಲುವಾಗಿ ಸುಮಾರು 74,000 ರೂಪಾಯಿ ಈ ರೀತಿಯಾಗಿ ಕೊಟ್ಟಿದ್ದಾರೆ. 27 ಲಕ್ಷದಲ್ಲಿ ಶಿಕ್ಷಣದ ಸಲುವಾಗಿ ಕೇವಲ 17 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮೂರು ವರ್ಷಗಳ ಅಂಕಿಗಳನ್ನು ನೋಡಿದಾಗ ಹರಿಜನರಿಗೆ ಸರ್ಕಾರದವರು ಯಾವುದೇ ರೀತಿಯಲ್ಲಿ ಹೆಚ್ಚು ಸಹಾಯವನ್ನು ಕೊಡಲು ಪ್ರಯತ್ನಮಾಡಿಲ್ಲ ಎಂದು ಹೇಳಲು ದುಃಖವೆನಿಸುತ್ತದೆ. ಈಗ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಮುಂದುವರಿದ ಶಿಕ್ಷಣಕ್ಕೆ ಹೋಗಬೇಕು ಎಂದರೆ ನಿರಾಶಾದಾಯಕವಾದ ಪರಿಸ್ಥಿತಿ ಒದಗುತ್ತಿದೆ. ಸೋಷಿಯಲ್ ವೆಲ್‌ಫೇರ್ ಡೈರೆಕ್ಟರು ಮತ್ತು ಅವರ ಸಿಬ್ಬಂದಿ ಇದರ ಬಗ್ಗೆ ಹೆಚ್ಚು ಗಮನ ಕೊಟ್ಟು ಮಂತ್ರಿಗಳಿಗೆ ಹೆಚ್ಚಿನ ಪ್ರಕಾಶವನ್ನು ತರಬೇಕೆಂದು ಒಂದು ಸೂಚನೆಯನ್ನು ಮಾಡುತ್ತಿದ್ದೇನೆ.

ಅಸ್ಪೃಶ್ಯತಾ ನಿವಾರಣೆಗಾಗಿ ಕಳೆದ ಮೂರು ವರ್ಷಗಳಿಂದ ನೋಡಿದರೆ ಸರ್ಕಾರದವರು ಪ್ರತಿ ವರ್ಷ 18,000 ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ವರ್ಷ ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹರಿಜನರ ಪ್ರಚಾರಕ್ಕೆ, ಎಂದರೆ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ಕೆ ಎಷ್ಟುಮಟ್ಟಿಗೆ ಇದರಲ್ಲಿ ವಿನಿಯೋಗವಾಗಿದೆ ಎನ್ನುವುದು ನನಗೆ ಶಂಕೆಯಾಗಿದೆ. ಹರಿಜನ ಸೇವಕ ಸಂಘ ಈ ದುಡ್ಡನ್ನು ತಿನ್ನುತ್ತಿದೆ. ಹಳ್ಳಿಗಳಲ್ಲಿ ಆಗಲೀ, ಬೇರೆ ಎಲ್ಲಿಯೇ ಆಗಲೀ ಅಸ್ಪೃಶ್ಯತಾ ನಿವಾರಣಾ ಕಾರ್ಯ ಹರಿಜನ ಪ್ರಚಾರ ಕಾರ್ಯ, ನಡೆಯುತ್ತಿಲ್ಲ. ಈ ಸಮಿತಿ ಈ ರಾಜ್ಯದಲ್ಲಿ ನಿರುಪಯೋಗವಾಗಿದೆ, ದೇಶದಲ್ಲಿ ನಿರ್ಬಲವಾಗಿ ಕೆಲಸ ಮಾಡುತ್ತಿದೆ. ಗಾಂಧೀಜಿಯವರು ಇದ್ದಾಗ ಯಾವ ರೀತಿ ಕೆಲಸ ಮಾಡುತ್ತಿತ್ತು ಎಂದು ನೆನೆಸಿಕೊಂಡರೆ ಈಗ ಕೇವಲ ಶೂನ್ಯವಾಗಿ ನಡೆದಿದೆ ಎಂದು ಹೇಳಬಹುದು. ಕಾಂಗ್ರೆಸ್ ಸರ್ಕಾರ 20 ವರ್ಷಗಳಲ್ಲಿ ಹರಿಜನರ ಸಲುವಾಗಿ ಎಷ್ಟು ಉದಾಸೀನದಿಂದ ನಡೆಯುತ್ತಿದೆ ಎಂದು ನೋಡಿದಾಗ ಈ ಸಮಿತಿಯ ಕೆಲಸವೂ ಅದೇ ರೀತಿ ಆಗಿದೆ ಎನ್ನುವುದು ಸ್ಪಷ್ಟವಾಗಿ ಕಾಣಿಸುತ್ತದೆ. ನಮ್ಮ ರಾಜ್ಯ ಸರ್ಕಾರದವರು ಒಂದು ವರ್ಷಕ್ಕೆ ಸರಾಸರಿ ಒಬ್ಬ ಹರಿಜನನಿಗೆ 90 ಪೈಸೆ ಖರ್ಚು ಮಾಡುತ್ತಿದ್ದರೆ ಕೇಂದ್ರ ಸರ್ಕಾರದವರು 35 ಪೈಸೆ ಖರ್ಚು ಮಾಡುತ್ತಿದ್ದಾರೆ. ಇದು ಬಹಳ ದುರ್ದೈವಕರವಾದುದು ಎಂದು ಕಾಣಿಸುತ್ತದೆ. ಇನ್ನು ಮುಂದಾದರೂ ಸರ್ಕಾರದವರು ಆದಷ್ಟುಮಟ್ಟಿಗೆ ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಲು ಪ್ರಯತ್ನ ಮಾಡಬೇಕು. ಈ ಹೊತ್ತಿನ ದಿವಸ ಸುಮಾರು 50 ಲಕ್ಷ ಹರಿಜನರು ಕನ್ನಡ ನಾಡಿನಲ್ಲಿದ್ದಾರೆ. ದೇಶದಲ್ಲಿ ಸುಮಾರು ಏಳೂವರೆ, ಎಂಟು ಕೋಟಿ ಹರಿಜನರಿದ್ದಾರೆ.

ಇದನ್ನು ನೋಡಿದರೆ ಸರಕಾರದವರು ಸಾಕಷ್ಟು ಪ್ರಯತ್ನ ಮಾಡದಿರುವುದರಿಂದ ಆಗಬೇಕಾದಷ್ಟು ಅನುಕೂಲಗಳಾಗಿಲ್ಲವೆಂಬುದು ಕಂಡುಬರುತ್ತದೆ. ಮಹಾತ್ಮ ಗಾಂಧೀಜೀಯವರು ಹೇಳಿರುವುದನ್ನು ಸರಕಾರ ಬಹುಶಃ ಮರೆತಿರುವಂತೆ ಕಾಣುತ್ತದೆ. ಹಿಂದುಳಿದವರಿಗಾಗಿ ಒದಗಿಸುವ ಹಣವನ್ನು ಸರಿಯಾಗಿ ಖರ್ಚು ಮಾಡದಿದ್ದರೆ ಹೇಗೆತಾನೆ ಅವರಿಗೆ ಅನುಕೂಲವಾದೀತು! ಡಾ|| ಅಂಬೇಡ್‌ಕರ್‌ರವರು ಒಂದು ಮಹತ್ವವಾದ ವಿಚಾರವನ್ನು ಹೇಳಿದ್ದಾರೆ. ಜಗತ್ತಿನಲ್ಲಿ ಅವರು ಮಹನೀಯರು ಅರ್ಥ ಶಾಸ್ತ್ರಜ್ಞರು ಮತ್ತು ರಾಜನೀತಿ ಶಾಸ್ತ್ರಜ್ಞರು ಆಗಿದ್ದ ಡಾ|| ಅಂಬೇಡ್‌ಕರ್ ಪ್ರಸಿದ್ಧ ಇತಿಹಾಸಕಾರರೂ ಆಗಿದ್ದರು ಅಂಬೇಡ್‌ಕರ್‌ರರು ಈ ರೀತಿ ಹೇಳಿದ್ದಾರೆ:

> "No country will be grateful to another Country at the cost of her freedom, No man will be grateful to another man at the cost of his self-respect, and no woman will be grateful to a man at the cost of her chastity."

ಹರಿಜನರಿಗೆ ಸರಕಾರ ಸಹಾಯ ಮಾಡಿದರೆ ಉಪಕಾರ ಮಾಡಿದ ಹಾಗೆ ಅಲ್ಲ. ಅದು ಕರ್ತವ್ಯವಾಗಿದೆ. ಹರಿಜನರ ಮೇಲೆ ಉಪಕಾರ ಮಾಡಿರುವೆವು ಎಂಬ ಮನೋಭಾವನೆ ಇರುವುದು ತಪ್ಪು. ಸಮಾಜದಲ್ಲಿ ಕಳಂಕ ಹೋಗಲಾಡಿಸುವುದು ಸರಕಾರದ ಪರಮಗುರಿ. ಈ ದಿವಸ ಬೇರೆ ದೇಶಗಳನ್ನು ನೋಡಿದರೆ, ನೀಗ್ರೋಗಳಿರುವ ದೇಶ ಗುಲಾಮಗಿರಿ ಇರುವ ದೇಶಗಳನ್ನು ನೋಡಿದರೆ ಅವುಗಳೊಡನೆ ತುಲನಮಾಡಿದರೆ ಅಲ್ಲಿ ಹಿಂದುಳಿದವರಿಗಾಗಿ ಏನು ಅನುಕೂಲ ಕಲ್ಪಿಸಿದ್ದಾರೆ, ಅದರಂತೆ ನಾವೂ ಕಲ್ಪಿಸಬೇಕು ಎಂಬ ಭಾವನೆ ಸರಕಾರಕ್ಕೆ ಬರುವುದು. ಹಾಗೆ ಮಾಡದಿದ್ದರೆ, ಇತರ ದೇಶಗಳವರನ್ನು ನೋಡಿ ಕಲಿಯದಿದ್ದರೆ ಎಷ್ಟು ಹಣ ಹಿಂದುಳಿದವರಿಗಾಗಿ ಕೊಟ್ಟರೂ ಪ್ರಯೋಜನವಾಗುವುದಿಲ್ಲ, ಸರಿಯಾದ ಯೋಜನೆ ಮಾಡುವುದಕ್ಕೆ ಬರುವುದಿಲ್ಲ.

ಇನ್ನು ಹರಿಜನರಿಗೆ ದೊಡ್ಡ ಕಂಟಕ ಏನಿದೆಯೆಂದರೆ ನಿರುದ್ಯೋಗ ಸಮಸ್ಯೆ. ಇದು ದೇಶದಲ್ಲಿ ಬಹಳ ಭೀಕರವಾಗಿದೆ. ಒಂದಾನೊಂದು ಕಾಲದಲ್ಲಿ ಹಿಂದುಳಿದ ಜನಾಂಗದಲ್ಲಿ ಪದವೀಧರರಿರಲಿಲ್ಲ, ಇಂದು ಅವರು ಬೇಕಾದಷ್ಟಿದ್ದಾರೆ, ಅವರು ಎಂಪ್ಲಾಯಮೆಂಟ್ ಎಕ್ಸ್‌ಛೇಂಜಿನಲ್ಲಿ ತಮ್ಮ ಹೆಸರುಗಳನ್ನು ರಿಜಿಸ್ಟರು ಮಾಡಿಸಿ ಬೀದಿ ಬೀದಿ ಅಲೆಯುತ್ತಿದ್ದಾರೆ. ಮುಖ್ಯ ಮಂತ್ರಿಗಳಿಗೆ ಈ ವಿಚಾರವನ್ನು ಹೇಳಿದಾಗ ಆ ಬಗ್ಗೆ ಒಂದು ಪಟ್ಟಿ ಕೊಡುವಂತೆ ತಿಳಿಸಿದರು. ಆದರೆ ಎಂಪ್ಲಾಯಮೆಂಟ್ ಎಕ್ಸ್‌ಛೇಂಜು ಮಾಡಿರುವುದಾದರೂ ಏನು? ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಎಂಪ್ಲಾಯಮೆಂಟ್ ಸೆಲ್ ಮಾಡಿದ್ದಾರೆ, ಆ ಇಲಾಖೆಗಳವರು ಬೇರೆ ಇಲಾಖೆಗಳವರಿಗೆ ಹಿಂದುಳಿದ ಉಮೇದುವಾರರ ಹೆಸರುಗಳನ್ನು ರೆಕಮೆಂಡ್ ಮಾಡಿದರೆ ಆಯಾ ಇಲಾಖೆಗಳ ಒಬ್ಬ ಅಧಿಕಾರಿಗಳ ಮೂಗು ಮುರಿಯುತ್ತಾರೆ. ಹೀಗಾದರೆ ಹರಿಜನರ ಕ್ಷೇಮಾಭ್ಯುದಯ ಹೇಗೆತಾನೆ ಸಾಧಿಸೀತು? ಸೋಷಿಯಲ್ ವೆಲ್‌ಫೇರದಿಂದ ಕಳಿಸಿದ ಉಮೇದುವಾರರಿಗೆ ಸರಿಯಾದ ಬೆಲೆ ಇಲ್ಲದೆ ಇದ್ದರೆ ಸ್ಥಾನಮಾನವಿಲ್ಲದಿದ್ದರೆ ಇಂಥ ಇಲಾಖೆಗಳಿಗೇಕೆ ಹಣ ಖರ್ಚು ಮಾಡಬೇಕು? ಈ ಇಲಾಖೆಗಳವರು ಕಳುಹಿಸುವ ಪಟ್ಟಿಯಲ್ಲಿರುವವರನ್ನೇಕೆ ಕೆಲಸಕ್ಕೆ ಬೇರೆ ಇಲಾಖೆಯ ಮುಖ್ಯಾಧಿಕಾರಿಗಳು ತೆಗೆದುಕೊಳ್ಳುವುದಿಲ್ಲ? ಈ ಬಗ್ಗೆ ಮಂತ್ರಿಗಳೇನು ಕ್ರಮ ತೆಗೆದುಕೊಂಡಿದ್ದಾರೆ? ನವೆಂಬರ್ 67ರಲ್ಲಿ ಚೀಫ್ ಸೆಕ್ರೆಟರಿಯವರು ಒಂದು ಗವರ್ನಮೆಂಟ್ ಆರ್ಡರನ್ನು ಹೊರಡಿಸಿ ಹರಿಜನರಿಗೆ ಸೇಕಡ 15 ಮತ್ತು ಗಿರಿಜನರಿಗೆ ಸೇಕಡ 3 ಹುದ್ದೆಗಳನ್ನು ಹೀಗೆ ಒಟ್ಟು ಸೇಕಡ 18 ಹುದ್ದೆಗಳನ್ನು ಕೊಡುವಂತೆ ಆಯಾ ಇಲಾಖೆಗಳಿಗೆ ತಿಳಿಸಿದ್ದಾರೆ. ಆದರೆ ಅದಕ್ಕೆ ಟೈಂ ಲಿಮಿಟ್ ಹಾಕಿಲ್ಲ. ಎಷ್ಟು ದಿವಸಗಳಲ್ಲಿ ತುಂಬ ಕೊಡಬೇಕೆಂಬುದನ್ನು ನಮೂದುಮಾಡಿಲ್ಲ. ಅದರ ಪ್ರಕಾರ ಕೆಲಸಗಳನ್ನು ಹರಿಜನ—ಗಿರಿಜನರಿಗೆ ಕೊಡದಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ದಂಡವನ್ನು ವಿಧಿಸುತ್ತಾರೆಂಬ ಭಯವಿರಬೇಕು. ಮಂತ್ರಿಗಳು ವಿಚಾರಮಾಡಿ 6 ತಿಂಗಳು ಅಥವಾ ವರ್ಷದೊಳಗೆ ಸೇಕಡ 18 ಹುದ್ದೆಗಳನ್ನು ಸರಕಾರಿ ಆಜ್ಞೆ ಪ್ರಕಾರ ಹರಿಜನರಿಗೆ ನೌಕರಿ ಭರ್ತಿ ಮಾಡದಿದ್ದರೆ 500 ರೂಪಾಯಿ ದಂಡ ಮತ್ತು 3 ತಿಂಗಳು ಶಿಕ್ಷೆಯನ್ನು ಕಾನೂನಿನ ಪ್ರಕಾರ ವಿಧಿಸುವುದಾಗಿ ಸೀರಿಯಸ್ ವಾರ್ನಿಂಗನ್ನು ಅಧಿಕಾರಿಗಳಿಗೆ ಕೊಡಬೇಕು. ಬೀರಪ್ಪ ಕಮಿಟಿ ವರದಿಯನ್ನು ನೋಡಿದರೆ ವಿಷಾದವಾಗುತ್ತದೆ, 1960ರಲ್ಲಿ ಆ ಸಮಿತಿಯನ್ನು ರಚಿಸಿದರು, 1962ರಲ್ಲಿ ಆ ಸಮಿತಿಯವರು ವರದಿ ಕೊಟ್ಟಿದ್ದಾರೆ. ಅದರಲ್ಲಿ ಬಹಳ ಉತ್ತಮವಾದ ಸಲಹೆಗಳಿವೆ. ಆದರೆ ಮೈಸೂರು ಸರಕಾರ ಅದನ್ನು ಇನ್ನೂ ಜಾರಿಗೆ ತಂದಿಲ್ಲ. ಅದನ್ನು ಜಾರಿಗೆ ತರಲು ಕಷ್ಟ ಎಂದು ಕೈಬಿಟ್ಟಿದ್ದೇವೆ ಎಂಬುದಾಗಿ ಮುಖ್ಯ ಮಂತ್ರಿಗಳು ಈ ಮಾನ್ಯ ಸಭೆಯಲ್ಲಿ ಹೇಳಿದ್ದಾರೆ. ಅದನ್ನು ಜಾರಿಗೆ ಕೊಡುವುದರಲ್ಲೇನು ತೊಂದರೆಯಿದೆ? ಕೆಲಸಗಳಲ್ಲಿ ಹಿಂದುಳಿದವರಿಗೆ ಕೊಟ್ಟಿರುವ

(ಶ್ರೀ ಎಸ್. ಎಸ್. ಅರಕೇರಿ)

ಪ್ರಾತಿನಿಧ್ಯ ನೋಡಿದರೆ ದುಃಖವಾಗುತ್ತದೆ, ಷೆಡ್ಯೂಲ್ ಕ್ಯಾಸ್ಟಿನವರು 1962ರಲ್ಲಿ ಎಷ್ಟು ಜನರು ಹುದ್ದೆಗಳಲ್ಲಿದ್ದರು ಎಂಬುದಕ್ಕೆ ವಿವರವಿದೆ, ಅಲ್ಲಿಂದೀಚೆಗೆ ಹೆಚ್ಚು ಬದಲಾವಣೆಯಾಗಿರುವಂತೆ ಕಾಣಲಿಲ್ಲ, ಸೇಕಡ ಒಂದರಷ್ಟು ಹೆಚ್ಚಾಗಿರಬಹುದು. ಆಗ ಷೆಡ್ಯೂಲ್ಡ್ ಕ್ಯಾಸ್ಟಿನವರು ಈ ರೀತಿ ಹುದ್ದೆಗಳಲ್ಲಿದ್ದರು : ಕ್ಲಾಸ್ ಒಂದನೆ ಹುದ್ದೆಯಲ್ಲಿ 1.89, ಕ್ಲಾಸ್ ಎರಡನೆಯದರಲ್ಲಿ 3.36 ಜನ, ಕ್ಲಾಸ್ ಮೂರರಲ್ಲಿ 6.38, ಕ್ಲಾಸ್ 4 ರಲ್ಲಿ 11.96, ಒಟ್ಟು ಸರಾಸರಿ ಸೇಕಡ 7 ಇದ್ದರು. ಷೆಡ್ಯೂಲ್ಡ್ ಟ್ರೈಬ್ಸ್‌ನವರು ಕ್ಲಾಸ್ ಒಂದರಲ್ಲಿ 0.24, ಕ್ಲಾಸ್ 2 ರಲ್ಲಿ 0.24, ಕ್ಲಾಸು 3ರಲ್ಲಿ 0. 43 ಮತ್ತು ಕ್ಲಾಸು 4 ರಲ್ಲಿ 1.10 ಇದ್ದರು. ಉಳಿದ ಕಮ್ಯೂನಿಟಿಯವರು ಕ್ಲಾಸು ಒಂದರಲ್ಲಿ 97, ಕ್ಲಾಸು 2ರಲ್ಲಿ 96, ಕ್ಲಾಸು 3 ರಲ್ಲಿ 93, ಕ್ಲಾಸು 4 ರಲ್ಲಿ 86, ಆವರೇಜ್ 91 ಜನ ಇದ್ದರು, ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಟ್ರೈಬ್ಸ್‌ನವರು ಸೇಕಡ 7 ಮಂದಿ ಇದ್ದರು ಎಂದು ತಿಳಿದಿದೆ. ಈ ಸಂಗತಿ ರಾಜ್ಯ ಸರಕಾರಕ್ಕೆ ಹೆಸರು ಕೆಡಿಸುವಂತಹುದು ಮತ್ತು ನಾಚಿಕೆಗೇಡು, ಈಗ ಸೇಕಡ 2 ಹೆಚ್ಚಾಗಿರಬಹುದು. ಒಂದೊಂದು ಇಲಾಖೆಯಲ್ಲಿ ಪರ್ಸೆಂಟೇಜ್ 2 ಕೂಡ ಆಗಿಲ್ಲ. ಹೀಗಿರುವಾಗ 20 ವರ್ಷಗಳಲ್ಲಿ ಈ ಸಂಬಂಧದಲ್ಲಿ ಕಾಂಗ್ರೆಸ್ ಸರಕಾರ ಮಾಡಿರುವುದಾದರೂ ಏನು ? ಬೀರಪ್ಪ ಸಮಿತಿ ವರದಿಯಲ್ಲಿ ಅನೇಕ ಮಹತ್ವವುಳ್ಳ ವಿಷಯಗಳಿವೆ. 25 ನೆಯ ಪುಟವನ್ನು ನೋಡಬಹುದು. ತೀರ ಕನಿಷ್ಟ ಶೇಕಡ ಇದ್ದದ್ದನ್ನು ಈಗ್ಗೆ ಶೇಕಡ 18ಕ್ಕೆ ಏರಿಸಲು ಅವಕಾಶವಿದೆ. ಬೀರಪ್ಪ ಸಮಿತಿ ವರದಿಯಲ್ಲಿ ಹೀಗೆ ತಿಳಿಸಿದ್ದಾರೆ.

> " For a period of 10 years, the percentage of reservation for Class I posts be raised to 25 per cent ; for Class II posts to 30 per cent ; Class III posts to 40 per cent ; and for Class IV posts to 50 per cent."

ಈ ರೀತಿ ಮುಂದಿನ 10 ವರ್ಷಗಳಲ್ಲಿ ಏರಿಸಿದರೆ ಸೇಕಡ 18 ಆಗಬಹುದು, ಮುಂದೆ ಸರಿಹೋಗುವುದು ಎಂದು ತಿಳಿಸಿದ್ದಾರೆ. ಇದನ್ನೇಕೆ ಸರಕಾರ ಒಪ್ಪಿಲ್ಲ ? ಒರಿಸ್ಸ, ಮಹಾರಾಷ್ಟ್ರ, ಗುಜರಾತ್, ಮುಂತಾದ ಸರಕಾರಗಳವರಿಗೆ ಸ್ಪೆಷಲ್ಲಾಗಿ ರಾಜ್ಯಾಂಗದ ಆರ್ಟಿಕಲ್ 16 (4)ರ ಪ್ರಕಾರ ಅಧಿಕಾರ ಶೇಕಡ 18 ಕೊಟ್ಟಿದ್ದಾರೆ, ಹರಿಜನರ ಉದ್ಧಾರಕ್ಕೆ ಸ್ಪೆಷಲ್ ಕಾನೂನು ಮಾಡಬೇಕೆಂದು ತಿಳಿಸಿದ್ದಾರೆ. ಅದರ ಪ್ರಕಾರ ರಿಯಾಯಿತಿ ಪಡೆಯುವುದಕ್ಕೆ ಸರಕಾರಕ್ಕೆ ಮನಸ್ಸಿಲ್ಲ. ಬೀರಪ್ಪ ಸಮಿತಿಯ ವರದಿಯನ್ನು ಕೈಬಿಟ್ಟಿರುವುದು ಅನ್ಯಾಯ. ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳು ಕ್ಯಾಬಿನೆಟ್ಟಿನಲ್ಲಿ ತಿಳಿಸಿ ಬೀರಪ್ಪ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರಲು ಪ್ರಯತ್ನಮಾಡಬೇಕು. ಹಾಗೆ ಮಾಡಿದರೆ ಮುಂದಿನ 15 ವರ್ಷಗಳಲ್ಲಿ ಹರಿಜನರ ನಿರುದ್ಯೋಗಿಗಳ ಸಮಸ್ಯೆ ನಿವಾರಣೆಯಾಗುವುದು. ಜಾತೀಯತೆಯ ನಿವಾರಣೆಗೆ ಅಸ್ಪೃಶ್ಯತಾ ನಿವಾರಣೆಗೆ ಬೀರಪ್ಪ ಸಮಿತಿಯ ವರದಿಯು ಮಾರ್ಗದರ್ಶಕವಾಗಿದೆ. ಆದುದರಿಂದ ಆ ವರದಿಯನ್ನು ಕೈಬಿಟ್ಟರೆ ಮಹಾ ಅಪರಾಧ ಮಾಡಿದಂತಾಗುತ್ತದೆ, ಹರಿಜನರಿಗೆ ಸರಕಾರ ಅನ್ಯಾಯ ಮಾಡಿದಂತಾಗುತ್ತದೆ. ಹಿಂದೆ ಪ್ರತಿ ವರ್ಷವೂ 1 ಕೋಟಿ ಹರಿಜನರಿಗಾಗಿ ಬಜೆಟ್ ಇತ್ತು. ಶ್ರೀ ನಿಜಲಿಂಗಪ್ಪನವರು ಅಧಿಕಾರಕ್ಕೆ ಬಂದಮೇಲೆ ಈಗ 60 ಲಕ್ಷಕ್ಕೆ ಇಳಿದಿದೆ. ಶ್ರೀಮತಿ ಯಶೋಧರ ದಾಸಪ್ಪನವರು ಸೋಷಿಯಲ್ ವೆಲ್‌ಫೇರ್ ಇಲಾಖೆಯನ್ನು ಹಾಳುಮಾಡಿದ್ದಾರೆ. ಹರಿಜನರ ಸಮಸ್ಯೆ ಪರಿಹಾರವಾಗುವವರೆಗೆ ಸಂಬಂಧಪಟ್ಟವರು ಹೇಳುವುದನ್ನು ಕೇಳಿ ಅವರೊಡನೆ ಚರ್ಚೆಮಾಡಿ ಸರಿಯಾದ ವ್ಯವಸ್ತೆಮಾಡಬೇಕು. ಸೋಷಿಯಲ್ ವೆಲ್‌ಫೇರ್ ಅಫೀಸರುಗಳು ಡೆಪ್ಯುಟಿ ಕಮಿಷನರ ಕೈಕೆಳಗಿರುವುದರಿಂದ ಅವರು ಕೇವಲ ಗುಮಾಸ್ತೆಗಳಂತೆ ಕೆಲಸಮಾಡಬೇಕಾಗಿದೆ. ಮಾರ್ಚಿ 31 ರೊಳಗೆ ಒದಗಿಸಿರುವ ಹಣವನ್ನು ಖರ್ಚುಮಾಡಬೇಕಾಗಿರುತ್ತದೆ. ಆದರೆ ಇಂದೂ ಕೂಡ ಗ್ರಾಂಟಿಗೆ ಸಂಬಂಧಪಟ್ಟ ಬಿಲ್ಲುಗಳು ಮುಂತಾದುವು ಬರುತ್ತಿವೆ. ಮೊದಲೇ ಸಕಾಲದಲ್ಲಿ ಸೂಕ್ತಕ್ರಮ ತೆಗೆದುಕೊಳ್ಳದಿರುವುದರಿಂದ ಲಕ್ಷಾಂತರ ರೂಪಾಯಿ ಒದಗಿಸಿರುವುದು ಲ್ಯಾಪ್ಸ್ ಆಗುತ್ತಿದೆ, ಹೀಗಾಗಿ ಅನೇಕ ಹಾಸ್ಟೆಲುಗಳಿಗೆ ಮತ್ತು ಯೋಜನೆಗಳಿಗೆ ಅನ್ಯಾಯವಾಗಿದೆ. ಏಕೆ ಹೀಗೆ ಆಗಲು ಅವಕಾಶ ಕೊಟ್ಟಿರಿ, ಲ್ಯಾಪ್ಸ್ ಮಾಡಿದ್ದೇಕೆ ಎಂದು ಕೇಳಿ ಸೋಷಿಯಲ್ ವೆಲ್‌ಫೇರ್ ಇಲಾಖೆ ಡೈರೆಕ್ಟರನ್ನು ವಿಚಾರಮಾಡಿ ಸಂಬಂಧಪಟ್ಟವರಮೇಲೆ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು. ಕೊಡುವ ಅಲ್ಪ ಹಣದಲ್ಲೂ ಕೂಡ ಲ್ಯಾಪ್ಸ್ ಮಾಡಿದರೆ ಹೇಗೆ ಅನುಕೂಲವಾದೀತು ? ಹೀಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ಹಣವನ್ನು ಲ್ಯಾಪ್ಸ್ ಆಗಲು ಅವಕಾಶ ಕೊಟ್ಟರೆ ನಿಮ್ನವರ್ಗದವರಿಗೆ ಹೇಗೆ ನ್ಯಾಯ ದೊರೆತೀತು ?

ಬಾವಿಗಳ ವಿಚಾರ ನೋಡಿದರೆ ಹಳ್ಳಿಗಳಲ್ಲಿ ಮೂರು ವರ್ಷಗಳ ಅಂಕಿಅಂಶ ನೋಡಿದರೆ ಒಂದೂವರೆ ಲಕ್ಷ ಖರ್ಚುಮಾಡುವುದಿದೆ, ಅದರಿಂದ 20 ಬಾವಿಗಳು ಆಗಬಹುದು. ಈ ರೀತಿ ಮಾಡಿದರೆ ಎಷ್ಟು ವರ್ಷಗಳಲ್ಲಿ ಎಲ್ಲಾ ಹಳ್ಳಿಗಳಲ್ಲೂ ಹರಿಜನರಿಗೆ ಅಥವಾ ಹಿಂದುಳಿದವರಿಗೆ ಕುಡಿಯುವ ನೀರಿನ ಬಾವಿಗಳನ್ನೊದಗಿಸುವುದಕ್ಕೆ ಸರಕಾರಕ್ಕೆ ಸಾಧ್ಯವಾದೀತು ? ಹೀಗೆ ಉದಾಸೀನ ಮಾಡುವುದು ಸರಿಯಲ್ಲ ಎಂಬುದನ್ನು ಗಮನಕ್ಕೆ ತರುತ್ತೇನೆ.

ಇನ್ನು ಪಂಚಾಯಿತಿ ರಾಜ್ಯದ ವಿಚಾರ ಹೇಳುವುದಾದರೆ ಸ್ವಲ್ಪ ವಿಷಾದದಿಂದ ಹೇಳಬೇಕಾಗುತ್ತದೆ. ಭಾರತದೇಶದಲ್ಲಿ ಪ್ರಜಾರಾಜ್ಯವಿರಬೇಕು, ಪಂಚಾಯಿತಿ ರಾಜ್ಯವಿರಬೇಕು ಎಂದು ಹೇಳುವುದು ತಾತ್ವಿಕದೃಷ್ಟಿಯಿಂದ ನ್ಯಾಯವಾಗಿದೆ. ಆದರೆ ಭಾರತದಲ್ಲಿ ಅದಕ್ಕೆ ಸರಿಯಾದ ವಾತಾವರಣ ನಿರ್ಮಾಣವಾಗಿದೆಯೇ ಎಂದು ನೋಡಿದರೆ ಸುಮಾರು ಪಂಚಾಯಿತಿ ರಾಜ್ಯಬಂದು 10 ವರ್ಷಗಳಲ್ಲಿ ನಮಗಿರುವ ಅನುಭವದಂತೆ ಮತ್ತು ಕೇಂದ್ರ ಸರಕಾರದವರು ಒಂದು ವರದಿಯನ್ನು ಸಂಗ್ರಹಿಸಿದ್ದಾರೆ, ಅದರಲ್ಲಿಕೂಡ ಸ್ಪಷ್ಟವಾಗಿದೆ.

ಪಂಚಾಯ್ತಿ ರಾಜ್ಯದಿಂದ ಗ್ರಾಮಾಂತರಗಳಲ್ಲಿ ಜಾತೀಯತೆಯ ಸಮಸ್ಯೆ ಇನ್ನೂ ಉಗ್ರವಾಗಿ ಆಗುತ್ತಾ ಇದೆ; ಕಡಿಮೆ ಆಗಲಿಲ್ಲ. ಈ ಪಂಚಾಯ್ತಿಗಳಲ್ಲಿ ಮಾಡುವ ಕೆಲಸ ಏನು ? ಯಾವನೋ ಒಬ್ಬ ಹರಿಜನರನ್ನು ಮೆಂಬರ್ ಮಾಡಿಕೊಂಡು, ಅವನಿಗೆ ಪಂಚಾಯಿತಿ ಆಫೀಸಿನಲ್ಲಿ ಕೆಳಗೆ ಕೂರಿಸುತ್ತಿದ್ದಾರೆ. ತಮಗೆ ಏನು ಬೇಕೋ ಅದನ್ನು ಮಾಡಿಕೊಳ್ಳುವುದು. ಹಳ್ಳಿಗಳಲ್ಲಿ ಹರಿಜನರಿಗಾಗಿ ಇನ್ನೂ ಚಹದ ಅಂಗಡಿಗಳಲ್ಲಿ ಪ್ರವೇಶವಿಲ್ಲ ಈ ರೀತಿ ಆದರೆ ಲೋಕಲ್ ಸೆಲ್ಫ್ ಗವರ್ನ್ಮೆಂಟ್ ಅಂತ ಅನ್ನುವಂತಹ ತತ್ವ ಏನಿದೆ ಅದಕ್ಕೆ ಮಾನ್ಯತೆ ಕೊಟ್ಟಂತೆ ಆಗುವುದಿಲ್ಲ. ಹೀಗೆಲ್ಲಾ ಅನ್ಯಾಯಗಳು ನಡೆದರೆ ಇದು ಪ್ರಜಾರಾಜ್ಯಕ್ಕೆ ಹೆಸ್ತ್ ಸ್ಕೈನೇ ? ಇವತ್ತಿನ ದಿವಸಕ್ಕೆ ಪಂಚಾಯಿತಿ ರಾಜ್ಯಪದ್ಧತಿ ಸೋಷಿಯಲ್ ಪವರ್ ಎಲ್ಲಾ ಉಚ್ಛವರ್ಗದವರ ಕೈಗೆಹೋಗಿದೆ. Economic and political power has again rested with Caste Hindus. Whatever the Constitution has guaranteed social and economic rights under the Constitution to Scheduled Castes and Scheduled Tribes has again been taken away by the introduction of Panchayathiraj in the country this is mockery in the name of social justice. ಈ ರೀತಿಯಿಂದ ನಡೆದರೆ ಎಷ್ಟು ದುರ್ದೈವ, ಸರ್ಕಾರ ಏಕೆ ಇದಕ್ಕೆಲ್ಲಾ ಅವಕಾಶ ಕೊಟ್ಟಿದೆ ? ರಾಜಕೀಯ ಕಲಹಗಳು ಇವತ್ತು ಬೇಕಾದಷ್ಟು ಆಗುತ್ತಾ ಇವೆ. ವರ್ಷಕ್ಕೊಮ್ಮೆ ಪಂಚಾಯಿತಿ ರಾಜ್ಯಚುನಾವಣೆಯ ಕಾಲದಲ್ಲಿ ಕೊಲೆ ನಡೆಯುತ್ತಾ ಇರುತ್ತದೆ. ಬಡವರನ್ನು ಕೆಳಗೆ ದಬ್ಬುತ್ತಾ ಇರುತ್ತಾರೆ. ಇದನ್ನು ನೋಡಿದರೆ ನಾವೇನು ಹೊಸ ರಾಜ್ಯಾಂಗದ ಕಾಲದಲ್ಲಿ ಇದ್ದೇವೆಯೋ ಅಥವಾ ಹತ್ತು ಸಾವಿರ ವರ್ಷಗಳಿಗಿಂತಲೂ ಹಿಂದಿನ ಮನುಕಾಲದಲ್ಲಿದ್ದ ಪರಿಸ್ಥಿತಿಯಲ್ಲಿ ಜೀವನ ಮಾಡುತ್ತಾ ಇದ್ದೇವೆಯೋ ಅಂತ ಸಂಶಯ ಬರುತ್ತದೆ. ಗಾಂಧಿಜಿಯವರ ಮನಸ್ಸಿನಲ್ಲಿ ಏನಿತ್ತು ಅದಕ್ಕೆ ತದ್ವಿರುದ್ಧವಾಗಿ ಇವತ್ತಿನ ದಿವಸ ಕಾಂಗ್ರೆಸ್ ಸರಕಾರ ನಡೆಯುತ್ತಾ ಇರುವುದು ನಮ್ಮ ದೇಶದ ದುರ್ದೈವ. ಮೊನ್ನೆ ಕೇಂದ್ರ ಸರ್ಕಾರದ ಮಾನ್ಯ ಮಂತ್ರಿಗಳು ಬಂದಿದ್ದರು ಶ್ರೀಮಾನ್ ಜಗಜೀವನರಾಂ ಅವರು, ಅವರನ್ನು ಕೇಳಿದೆ ಸ್ವಾಮಿ, ಹಳ್ಳಿಗಳಲ್ಲಿ ಹರಿಜನರ ಪರಿಸ್ಥಿತಿ ಬಹಳ ಗಂಭೀರವಾಗಿದೆ, ಅವರ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಾ ಇದೆ ಅವರಿಗೆ ಏನಾದರೂ ಸಹಾಯ ಮಾಡಿ ಆರ್ಥಿಕ ಅಭಿವೃದ್ಧಿಮಾಡಿರಿ ಎಂದು ಹೇಳಿದ್ದಕ್ಕೆ, 50 ಕೋಳಿಗಳನ್ನು ಪ್ರತಿಹರಿಜನ ಕುಟುಂಬಕ್ಕೆ ಕೊಡ್ರಿ ಅಂತ ಹೇಳಿದರು, 50 ಕೋಳಿಗಳನ್ನು ಕೊಟ್ಟರೆ ಒಂದೇ ದಿನದಲ್ಲಿ ಅದನ್ನು ತಿಂದುಹಾಕುತ್ತಾರೆ ಏನು ಮಾಡುತ್ತೀರಿ ? ಕಾಂಗ್ರೆಸ್ ರಾಜ್ಯ ಸರಕಾರಕ್ಕೆ ಹರಿಜನರಿಗಾಗಿ ಜಮೀನು ಕೊಡುವ ವಿಚಾರ ಏನಾದರೂ ಇದೆಯೇ, ಇದ್ದರೆ ಗೋಮಾಳ ಕೊಡಿರಿ ಎಂದು ಕೇಳಿದ್ದಕ್ಕೆ, ಪಂಚಾಯ್ತಿ ರೆಸಲ್ಯೂಷನ್ ತನ್ನಿ ಅಂತ ಅನ್ನುತ್ತಾರೆ. ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಬಹಳ ನ್ಯೂನ್ಯತೆ ಇದೆ ಇವತ್ತಿನ ದಿವಸ ಗ್ರಾಮ ಪಂಚಾಯಿತಿಗಳಿಗೆ ಗೋಮಾಳಗಳನ್ನು ಏಕೆ vest ಮಾಡಬೇಕಾಗಿತ್ತು ? ಇವತ್ತೂ ಕೂಡ ನಾವು ಒಂದು age old customನಲ್ಲೇ ಇದ್ದೇವೆ. ಜಾತೀಯತೆಯ ಭಾವನೆಯಲ್ಲೇ ಇದ್ದೇವೆ. ಹರಿಜನರು ಇದ್ದಾರೆ, ಬಡವರು ಇದ್ದಾರೆ ಅವರೂ ಸಂತೋಷವಾಗಿ ಬಾಳಲಿ ಎನ್ನುವಂತಹ ಮನಸ್ಸು ಸವರ್ಣೀಯ ಜನರಲ್ಲಿ ಇಲ್ಲ. ಹಾಗಿರುವಾಗ ಪಂಚಾಯ್ತಿಯವರಿಗೆ ಆ ಅಧಿಕಾರ ಕೊಟ್ಟದ್ದೇ ಮಹಾಪರಾಧ. ಆದ್ದರಿಂದ ಇವತ್ತಿನ ದಿವಸ ಮಾನ್ಯ ಸಮಾಜಕಲ್ಯಾಣ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಅವರು ರೆವಿನ್ಯೂ ಮಂತ್ರಿಗಳಿಗೆ ಅಥವಾ ಮುಖ್ಯ ಮಂತ್ರಿಗಳಿಗೆ ಹೇಳಿ ಜಮೀನ್‌ಗಳನ್ನು ಗ್ರಾಮ ಪಂಚಾಯತಿಯಿಂದ ತಿರುಗಿ ಸರಕಾರಕ್ಕೆ Divest ಮಾಡಿಕೊಂಡು ಹರಿಜನರಿಗೆ ಜಮೀನನ್ನು ಸರ್ಕಾರದವರು ಕೊಡಿಸಿಕೊಡಬೇಕು. ನಮ್ಮಲ್ಲಿ ಅರಣ್ಯ ಕಡಿಮೆಯಾಗುತ್ತಾ ಇದೆ ಎಂದು

(ಶ್ರೀ ಎಸ್. ಎಸ್. ಅರಕೇರಿ)

ಅನೇಕ ಸದಸ್ಯರು ಹೇಳಿದ್ದಾರೆ, ಇವತ್ತು ನಮ್ಮ ಮೈಸೂರು ರಾಜ್ಯದಲ್ಲಿ 14 ಪರ್ಸೆಂಟ್ ಅರಣ್ಯ ಇದೆ. ಉಳಿದ ಅನೇಕ ರಾಜ್ಯಗಳಲ್ಲಿ 8–9–10 ಪರ್ಸೆಂಟ್ ಇದೆ. ಹಾಗಿರುವಾಗ 4 ಪರ್ಸೆಂಟ್ ಅರಣ್ಯ ಜಮೀನುಗಳನ್ನು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗಕ್ಕೆ ಕೊಟ್ಟರೆ ಏನೂ ಕಡಿಮೆಯಾದಂತೆ ಆಗುವುದಿಲ್ಲ. ಅವರಲ್ಲಿ ಗ್ರ್ಯಾಜುಯೇಟ್ಸ್ ಇದ್ದಾರೆ, ಬಡವರು ಇದ್ದಾರೆ. ನಿರುದ್ಯೋಗಿಗಳು ಇದ್ದಾರೆ. ಅಂತಹವರ ಕಲ್ಯಾಣ ಆಗುವುದಿಲ್ಲವೇ ಎಂದು ನಾನು ಕೇಳುತ್ತಾ ಇದ್ದೇನೆ. ಮೊನ್ನೆ ಕೇರಳ ಕಂದಾಯ ಮಂತ್ರಿಗಳಾದ ಶ್ರೀಮತಿ ಗೌರಿ ಅವರು ಒಂದು ಲಕ್ಷ ಎಕರೆ ಜಮೀನನ್ನು ಹರಿಜನರ ಸಲುವಾಗಿ ಹಂಚುವಂತಹ ವ್ಯವಸ್ಥೆ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಹಾಗಿರುವಾಗ ನಮ್ಮ ಪಕ್ಕದ ರಾಜ್ಯವನ್ನು ನೋಡಿ ನಾಚಿಕೆಯಾದರೂ ಪಟ್ಟುಕೊಳ್ಳಬೇಡವೇ? ತಾವು ಈಗಲಾದರೂ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಒಂದಾನೊಂದು ಕಾಲದಲ್ಲಿ ಇದು ಖಂಡಿತವಾಗಿಯೂ ಕಮ್ಯುನಿಸ್ಟರ ರಾಜ್ಯವಾದೀತು ಎಂಬ ಭಯ ಕೂಡ ತಮ್ಮಲ್ಲಿ ಇಲ್ಲ. ಗಾಂಧಿಜಿಯವರು ಹೇಳಿದಂತಹ ಮಾತನ್ನಾದರೂ ಪರಿಪಾಲಿಸೋಣ ಎಂಬ ವಿಚಾರವು ಕೂಡ ತಮ್ಮಲ್ಲಿ ಇಲ್ಲ. ಅವರು ಒಂದು ಲಕ್ಷ ಎಕರೆ ಜಮೀನು ಹಂಚುತ್ತಾ ಇದ್ದಾರೆ. ನಮ್ಮ ರಾಜ್ಯದೊಡ್ಡದು, ಲಕ್ಷಾಂತರ ಎಕರೆ ಜಮೀನು ಇದೆ. ಆದ್ದರಿಂದ ನಮ್ಮ ಪಕ್ಕದ ರಾಜ್ಯಗಳವರಾದ ಮಹಾರಾಷ್ಟ್ರ, ಕೇರಳ ಮತ್ತು ಆಂಧ್ರದಲ್ಲಿ ಯಾವ ರೀತಿಯಿಂದ ಹರಿಜನರಿಗೆ ಜಮೀನನ್ನು ಹಂಚುತ್ತಾ ಇದ್ದಾರೋ ಅದೇ ರೀತಿಯಿಂದ ಇಲ್ಲೂ ಕೂಡ ಹಂಚಬೇಕೆಂಬುದನ್ನು ಸರ್ಕಾರದವರ ಗಮನಕ್ಕೆ ತರುತ್ತಾ ಇದ್ದೇನೆ.

ಇನ್ನು ಭಂಗಿಗಳ ಪರಿಸ್ಥಿತಿ. ಅದು ಇನ್ನೂ ಗಂಭೀರವಾಗಿಯೇ ಇದೆ. ಅವರು ಆ ಕೀಳು ಉದ್ಯೋಗದಿಂದ ಹೊರ ಬರಲಿಕ್ಕೆ ಆಗದಿದ್ದರೆ ತಾವು ಎಷ್ಟು ದುಡ್ಡು ಖರ್ಚುಮಾಡಿದರೂ ಕೂಡ ವ್ಯರ್ಥ. ಮಾನ್ಯ ಮುನಿಸಿಪಲ್ ಮಂತ್ರಿಗಳು ಅವರ ಮನೆಗಳಿಗೆ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೇವೆ ಎಂದು ಹೇಳಿದರು. ಮದರಾಸ್ ಮತ್ತು ಆಂಧ್ರದಲ್ಲಿ ಅವರು ಗೃಹನಿರ್ಮಾಣ ಯೋಜನೆಯನ್ನು ಹಾಕಿಕೊಂಡಿದ್ದಾರೆ ಏನೆಂದರೆ ಭಂಗಿಜನರಿಗಾಗಿ ಓನರ್‌ಷಿಪ್ ಬೇಸಿಸ್ ಮೇಲೆ 15 ನೂರು ರೂಪಾಯಿ ಖರ್ಚು ಮಾಡಿ ಸಣ್ಣಮನೆಗಳನ್ನು ಕಟ್ಟಿಸಿಕೊಡಬೇಕೆಂದು ಇದ್ದಾರೆ. ಆ ರೀತಿಯಿಂದ ನಮ್ಮ ಸರ್ಕಾರದವರೂ ಕೂಡ ಮಾಡಿದರೆ ಉತ್ತಮವಾದಂತಹ ಯೋಜನೆಯಾಗುತ್ತದೆ ಎಂದು ಹೇಳುತ್ತೇನೆ.

1959ನೇ ಮಾರ್ಚಿ 30ನೇ ತಾರೀಖಿನ ದಿವಸ ಒಂದು ಗವರ್ನ್‌ಮೆಂಟ್ ಆರ್ಡರ್ ಹೊರಡಿಸಿದ್ದಾರೆ. ಅದರ ಸಾರಾಂಶವೇನೆಂದರೆ ಯಾವ ಯಾವ ಜಮೀನಿನಲ್ಲಿ 15 ವರ್ಷಗಳಿಗಿಂತಲೂ ಹೆಚ್ಚು ಕಾಲ ಹರಿಜನರು ವಾಸಮಾಡಿಕೊಂಡಿದ್ದಾರೋ ಅಂತಹವರಿಗೆ ಅಲ್ಲಿ ಸೈಟುಗಳನ್ನು ಸರ್ಕಾರದವರೇ ದುಡ್ಡುಕೊಟ್ಟು ಅಕ್ವೈರ್ ಮಾಡಿಕೊಂಡು ಅವರಿಗೆ ಕೊಡುವುದು ಅಂತ. ಬೆಂಗಳೂರಿನಲ್ಲಿ 98 ಸ್ಲಂಗಳು ಇವೆ, ಇನ್ನೂವರೆಗೂ ಅವುಗಳ ಬಗ್ಗೆ ಕೈ ಎತ್ತಲಿಲ್ಲ. ಎಷ್ಟೋ ಜನ ಗುಡಿಸಲುಗಳಲ್ಲೇ ವಾಸ ಮಾಡಿಕೊಂಡಿದ್ದಾರೆ. ಅವರಿಗೆ ಟ್ರಸ್ಟ್ ಬೋರ್ಡಿನವರಿಂದ ನೂರೆಂಟು ತೊಂದರೆಗಳಾಗುತ್ತಾ ಇವೆ. ಮತ್ತು ಇದರ ಜವಾಬ್ದಾರಿ ಆರ್. ಎಂ. ಪಾಟೀಲರವೇ ಅಥವಾ ಮಾನ್ಯ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರದೇ? ಯಾರದೇ ಆದರೂ ಕೂಡ ಕೇಂದ್ರಸರ್ಕಾರ ಅಥವಾ ರಾಜ್ಯಸರ್ಕಾರದಿಂದ ಹಣ ಪಡೆದುಕೊಂಡು ಅವರು ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ ಎಷ್ಟು ದುಡ್ಡುಬೇಕೋ ಆಯಾ ಹರಿಜನ ಶಾಖೆಗಳಿಗಾಗಿ ಅಷ್ಟು ದುಡ್ಡನ್ನು ನಾವು ಟ್ರಸ್ಟ್‌ಬೋರ್ಡಿನವರಿಗೆ ಕೊಡುತ್ತೇವೆ ಅಂತಾ ಆಶ್ವಾಸನೆಕೊಟ್ಟರೆ ಅವರು ಲೇ ಔಟ್ ಹಾಕಿ ಹರಿಜನರಿಗೆ ಸೈಟುಗಳನ್ನು ಹಂಚುವುದಕ್ಕೆ ತಯಾರು ಆಗುತ್ತಾರೆ. 1959ರ ಮಾರ್ಚಿ ಜಿ. ಓ. ಜಾರಿಗೆ ಬರದೇ ಇರುವುದು ದೊಡ್ಡ ಅನ್ಯಾಯ. 1964ರಲ್ಲಿ ಮೊಟ್ಟಮೊದಲು ಹರಿಜನರು ಟ್ರಸ್ಟ್‌ಬೋರ್ಡ್ ಸಾಲದ ಹಣವನ್ನು 6 ವರ್ಷಗಳಲ್ಲಿ ತೀರಿಸುತ್ತಿದ್ದರು. ಆ ಒಂದು ಆಜ್ಞೆಯ ಪ್ರಕಾರ 6 ವರ್ಷದ ವ್ಯಾಲ್ಯು ಕೊಡಬೇಕು ಎಂದು ನಿಗದಿ ಮಾಡಿದ್ದರು, ಮತ್ತು ಈಗ 1–1–65ರಲ್ಲಿ ಆದ ಹರಿಜನರಿಗೆ 6 ವರ್ಷಗಳ ಸವಲತ್ತು ಇಲ್ಲ ಮತ್ತು ಸವಲತ್ತುಗಳ ಜಿ. ಓ. ಅನ್ವಯವಾಗುವುದಿಲ್ಲ. ಅದನ್ನು ಈಗ ಸರ್ಕಾರದವರು ತೆಗೆದುಹಾಕಿದ್ದಾರೆ. ಈ ರೀತಿ ದಿನೇ ದಿನೇ ಹರಿಜನರ ಏಳಿಗೆ ಮಾಡುವ ಬದಲಾಗಿ ಕೊಲೆ ಮಾಡುತ್ತಾ ಇದ್ದೀರಿ. ಇದರಿಂದ ಕರ್ನಾಟಕದಲ್ಲಿ ಹರಿಜನರ ಮೇಲೆ ಭಯಾನಕವಾದ ಪರಿಸ್ಥಿತಿ ಕಂಡುಬರುತ್ತಾ ಇದೆ.

ಇನ್ನು ಐ.ಎ.ಎಸ್. ಮತ್ತು ಐ.ಪಿ.ಎಸ್. ಟ್ರೈನಿಂಗ್ ಸೆಂಟರ್‌ನ್ನು ಮದರಾಸಿಗೆ ಹೋಗಲು ಬಿಟ್ಟು ಕೊಟ್ಟಿದ್ದೀರಿ. ದಕ್ಷಿಣ ಹಿಂದೂಸ್ಥಾನದಲ್ಲಿ ಈ ಸೆಂಟರ್ ನಮ್ಮ ರಾಜ್ಯದಲ್ಲಿ ಇದ್ದುದು ಈ ರೀತಿ

ಕೈ ಬಿಟ್ಟು ಹೋಗುವುದಕ್ಕೆ ಯಾರು ಜವಾಬ್ದಾರರು ? ಇವರಲ್ಲೂ ಕೂಡ ಅನ್ಯಾಯವಾಗಿದೆ. ಇದನ್ನು ತಿರುಗಿ ಪಡೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕೆಂದು ಸರ್ಕಾರದವರ ಗಮನಕ್ಕೆ ತರುತ್ತಾ ಇದ್ದೇನೆ.

ಇನ್ನು ಡೈರೆಕ್ಟರ್ ಆಫ್ ಗೌರ್ನಮೆಂಟ್ ಪ್ರೆಸ್‌ನ ಬಗ್ಗೆ ಹೇಳುವುದಾದರೆ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ದುಡ್ಡು ಕೊಟ್ಟು ಟ್ರೈನಿಂಗ್ ಕೊಡಿಸುತ್ತಿದ್ದರು ಎಂದರೂ ಕೂಡ ಅವರು ಹಾಕಿರತಕ್ಕ ಯೋಜನೆಯನ್ನು ಇಂಪ್ಲಿಮೆಂಟ್ ಮಾಡಲು ಹಿಂದೇಟುಹಾಕುತ್ತಿರುವರು ಇದಕ್ಕೆ ಅಂದರೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಒತ್ತಾಯ ಮಾಡಲಿಲ್ಲವೇನೋ ಎಂದು ಸಂಶಯ ಬರುತ್ತದೆ. ಗವರ್ನಮೆಂಟ್ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪ್ರತಿ ಒಂದು ಆರು ತಿಂಗಳಿಗೆ 60 ಹರಿಜನ ವಿದ್ಯಾರ್ಥಿಗಳನ್ನು ಟ್ರೈನ್ ಮಾಡಬೇಕೆಂಬ ನಿಯಮ ಇದೆ. ಅದನ್ನು ಡೈರಕ್ಟರ್ ಆಫ್ ಗವರ್ನಮೆಂಟ್ ಪ್ರಿಂಟಿಂಗ್ ಪ್ರೆಸ್‌ನವರು ಕೈಬಿಟ್ಟರೆ ಒಳ್ಳೆಯದು ಎಂದು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರಂತೆ. ಇದು ಬಹಳ ದುರದೃಷ್ಟವದ ಸಂಗತಿ. ಇದನ್ನು ನೋಡಿದರೆ ಈ ಜನಾಂಗದವರು ಹರಿಜನರು ಯಾವ ರೀತಿಯಿಂದ ಮುಂದುವರಿಯಬೇಕೆಂಬ ಸಮಸ್ಯೆ ನಮ್ಮ ಮುಂದೆ ನಿಲ್ಲುತ್ತದೆ. ಇದರ ಸಲುವಾಗಿ ಸರ್ಕಾರದವರು ಮಾಡಿರತಕ್ಕ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್ ಅಂತ ಯಾರಿದ್ದಾರೆ ಅವರನ್ನು ಡೆಪ್ಯೂಟಿಕಮೀಷನರ ಆಡಳಿತದಿಂದ ತೆಗೆದು ಹಾಕಬೇಕು. ಇನ್ನು ತಾಲ್ಲೂಕಿನ ನಿದರ್ಶನ ಎಂದರೆ (1) ಇಂಡಿಟಾಳಿನ್ ಸಬ್ ಇನ್‌ಸ್ಪೆಕ್ಟರು ಕೊನೆವಾರ ಜನವರಿ 1968ರಲ್ಲಿ ಬರಗುಡಿ ಎಂಬ ಗ್ರಾಮಕ್ಕೆ ಹೋಗಿ ಅಲ್ಲಿನ ಹರಿಜನರ ಶಂಕರಪ್ಪ ಎಂಬುವರ ಜಮೀನಿನಲ್ಲಿದ್ದ ಸ್ಟ್ಯಾಂಡಿಂಗ್ ಕ್ರಾಪ್ ಮೇಲೆ ಜೀಪು ಟ್ರಕ್ಕುಗಳನ್ನು ಓಡಿಸಿ ಬೆಳೆಯನ್ನೆಲ್ಲಾ ಹಾಳುಮಾಡಿದ್ದಾರೆ. ಫೆಬ್ರುವರಿ ಕೊನೆವಾರದಲ್ಲಿ ಮಲರಪ್ಪ ಲಚ್ಯಾಣ (ಊರು) ಅನ್ನುವಂತಹವರ ಹೊಲದಿಂದ 20 ಚೀಲ ಜೋಳ 6 ಚೀಲ ಕುಸುಬಿ ಮೊದಲಾದುವುಗಳನ್ನು ಲೂಟಿ ಮಾಡಿಕೊಂಡು ಹೋಗಿದ್ದಾರೆ. ಈ ರೀತಿ ಪೋಲೀಸರ ದಬ್ಬಾಳಿಕೆಯಾದರೆ ಯಾವ ರೀತಿಯಿಂದ ಹರಿಜನರು ಉಳಿಯಬೇಕೋ ಗೊತ್ತಾಗುವುದಿಲ್ಲ.

ಆಂಧ್ರದಲ್ಲಿ ಆದದ್ದು ಘಟನೆ ಎಲ್ಲರಿಗೂ ತಿಳಿದಿದೆ. ಹರಿಜನ ಬಾಲಕನ ಸಜೀವ ದಹನವಾದದ್ದು ಪ್ರಜಾವಾಣಿ ಮಹೋನ್ನತ ನಾಡಿನ ಹಿರಿಯ ಪತ್ರಿಕೆ ಅದರಲ್ಲಿ ಸಂಪಾದಕೀಯದಲ್ಲಿ ಬರೆದಿದ್ದಾರೆ. ಇವತ್ತು ಉಚ್ಚವರ್ಗದವರು 20ನೇ ಶತಮಾನದ ಮೃಗಗಳಿಗಿಂತಲೂ ಕಡೆಯಾಗಿದ್ದಾರಲ್ಲಾ ಅಂತ ಅನಿಸುತ್ತಾ ಇದೆ, ಅಂತ ನಿದರ್ಶನಗಳನ್ನು ನಮ್ಮ ಕರ್ನಾಟಕದಲ್ಲೂ ನೋಡುತ್ತಾ ಇದ್ದೇವೆ. ಗುಲ್ಬರ್ಗದ ಹತ್ತಿರ ಅನೇಕ ಊರುಗಳಲ್ಲಿ ಪೋಲೀಸರ ದಬ್ಬಾಳಿಕೆಗೆ ಹರಿಜನರು ಒಳಗಾಗಿದ್ದಾರೆ. ಈ ರೀತಿಯಾದರೆ ಪೋಲಿಸರನ್ನು ಕೇಳುವವರು ಯಾರು ! ಏನು ಎಂತು ಎಂಬುದು ಗೊತ್ತಾಗುವುದಿಲ್ಲ. ಬಸವಣ್ಣನವರ ಒಂದು ನುಡಿ ಜ್ಞಾಪಕಕ್ಕೆ ಬರುತ್ತದೆ, ಅದೇನೆಂದರೆ :

ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲ್ಲಬಹುದೆ.
ಏರಿ ನೀರುಂಡೊಡೆ --
ಬಿತ್ತಿದ ಬೀಜಗಳ ಬೇಲಿ ಕೆಲಮಿ ಮೇದೊಡೆ
ತಾಯಿ ಮೊಲೆ ಹಾಲುಂಡೊಡೆ ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ ಕೂಡಲ ಸಂಗಮದೇವಾ ?

ಇವತ್ತಿನ ದಿವಸ ಹರಿಜನರ ಪರಿಸ್ಥಿತಿ ಈ ರೀತಿಯಿಂದ ಆಗಿದೆ.

4-00 P.M.

ಈವೊತ್ತಿನ ದಿವಸ ಹರಿಜನರ ಪರಿಸ್ಥಿತಿ ಹೇಗಿದೆ ಎಂದರೆ ಸರ್ಕಾರದವರು ತೆರೆದ ಸೇಂದಿ ಅಂಗಡಿಗಳಲ್ಲಿ ಕುಡಿದು ಅವರ ಹತ್ತಿರ ಇದ್ದ ಹಣವನ್ನೆಲ್ಲಾ ಕಳೆದುಕೊಂಡು ಬಿಟ್ಟಿದ್ದಾರೆ. ಪುನಃ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದರೆ ಹೇಗಾಗುತ್ತದೆ. ಹರಿಜನರ ಅವನತಿಗಳಿಗೆ ಹಲವಾರು ಕಾರಣಗಳು ಇದೆ. ಸಮಾಜಕಲ್ಯಾಣ ಸೆಕ್ರಟರಿಗಳು, ಡೆಪ್ಯೂಟಿ ಸೆಕ್ರಟರಿಗಳು ಅವರು ಸರಿಯಾದ ಅಡ್ವೈಸ್ ಮಾನ್ಯ ಕಲ್ಯಾಣಮಂತ್ರಿಗಳಿಗೆ ಕೊಡುತ್ತಾ ಇಲ್ಲ. ಅದೂ ಅಲ್ಲದೆ ಮಂತ್ರಿಗಳೂ ಕೂಡ ಅವರ ಅಧಿಕಾರವನ್ನು ಉಪಯೋಗಿಸಿ ಯಾವರೀತಿ ಕೆಲಸ ಮಾಡಬೇಕು ಎಂಬುದನ್ನು ನೋಡಿ ಕೆಲಸ

(ಶ್ರೀ ಎಸ್. ಎಸ್. ಅರಕೇರಿ)

ಮಾಡಿಸಬೇಕು. ಈ ರೀತಿ ಮಾಡಿದರೆ ಹರಿಜನ ಉದ್ಧಾರವಾಗುತ್ತದೆ. ಡಾಕ್ಟರ್ ಅಂಬೇಡ್ಕರ್ ರವರು ಹಿಂದೆ ಒಂದು ವಿಷಯವನ್ನು ಹೇಳುತ್ತಾ ಇದ್ದರು, ಅದು ಈ ರೀತಿ ಇದೆ :

> "If Tilak had been born as an untouhable, he would not have said Swaraj is my birth right but alienation of caste system is my birth right"

ಎಂದು. ಬಸವಣ್ಣನವರು 8ನೆಯ ಶತಮಾನದಲ್ಲಿ ಮಾಡಿದ್ದನ್ನು ಅವರು ಹೇಳಿದ ಉದಾತ್ತ ಧ್ಯೇಯ ಗಳು ಏನು ಇವೆ, ಅವರು ಪ್ರಚಾರ ಮಾಡಿದಂಥ ಸುಧಾರಣೆಗಳು ಏನು ಇವೆ ಅದನ್ನು ನೀವು ಅನುಷ್ಠಾನಕ್ಕೆ ತರುವುದಿಲ್ಲ. ಅವರು ಪ್ರಪ್ರಥಮವಾಗಿ ಹೇಳಿದ್ದು ಈ ಅಸ್ಪೃಶ್ಯತೆ ನಿವಾರಣೆಯಾಗ ಬೇಕು ಎಂದು. ಅದು ಇದುವರೆಗೂ ಹೋಗಿಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ಹರಿಜನರ ಕಲ್ಯಾಣಕ್ಕೆ ಏನೇನು ಕೆಲಸಗಳು ಮಾಡಬೇಕು ಅದನ್ನು ಹೆಚ್ಚು ಹೆಚ್ಚಾಗಿ ತ್ವರಿತವಾಗಿ ಕಾರ್ಯಗತ ಮಾಡಬೇಕು ಇಲ್ಲದೇ ಹೋದರೆ ಸಮಾಜಕ್ಕೆ ಮತ್ತು ದೇಶಕ್ಕೆ ಒಂದು ಭಾರಿ ದೊಡ್ಡ ಸಮಸ್ಯೆಯು ಪರಿಣಮಿಸುತ್ತದೆ. ಹರಿಜನರ ಕಲ್ಯಾಣಕ್ಕೆ ಏನು ಆಗಬೇಕು ಅದಕ್ಕೆ ಒಂದು ಯೋಗ್ಯವಾದ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡಬೇಕು ಎಂದು ಹೇಳಿ, ಮಾನ್ಯ ಅಧ್ಯ ಕ್ಷರವರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಮೈಸೂರು ರಾಜ್ಯ ಸರ್ಕಾರ ಬಸವಣ್ಣನವರ 8ನೇ ಶತಮಾನೋತ್ಸವವನ್ನು ಆಚರಿಸುತ್ತಾ ಇದ್ದೀರಿ. ಆದರೆ ಹರಿಜನರ ಏಳಿಗೆಗಾಗಿ ಬಸವಣ್ಣನವರು ಮಾಡಿದ ಪ್ರಯತ್ನದ ನೆನಪಿಗಾಗಿ ಹಣ ವನ್ನು ತೆಗೆದು ಇರಿಸಿದ್ದೀರಾ?

[MR. DEPUTY SPEAKER in the Chair.]

ಶ್ರೀಮತಿ ಚಂಪಾಬಾಯಿ ಭೋಗಲೆ (ಕಾಗವಾಡ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇಟ್ಟಿರುವ ಈ ಡಿಮ್ಯಾಂಡನ್ನು ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಹೇಳಲು ಇಚ್ಛಿಸುತ್ತೇನೆ.

ಮಹಾತ್ಮಾ ಗಾಂಧಿಯವರು ಅವರ ಜೀವನದಲ್ಲಿ ಮೊದಲನೇ ಹೆಜ್ಜೆ ಇಟ್ಟಿದ್ದು ಹರಿಜನರ ಉದ್ಧಾರಕ್ಕೆ ಎಂದು. ಆದರೆ ಗಾಂಧೀಜಿಯವರು ಹೋದಮೇಲೆ ಮತ್ತು ಸ್ವರಾಜ್ಯ ಸಿಕ್ಕಿದ ನಂತರ ದಲ್ಲಿ ಅದಕ್ಕೆ ಅಷ್ಟಾಗಿ ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ ಎಂದು ಕಾಣುತ್ತದೆ. ಏನೇನು ಸ್ಕೀಮು ಗಳನ್ನು ಮಾಡಿದ್ದರೋ ಅವೆಲ್ಲಾ ಬರೀ ನಾಟಕದ ರೂಪದಲ್ಲಿ ಇದೆ ಎಂದು ಕಾಣುತ್ತದೆ. ಈರೀತಿ ಆದರೆ ಹರಿಜನರು ಉದ್ಧಾರವಾಗುವುದಿಲ್ಲ. ಅದಕ್ಕೋಸ್ಕರವಾಗಿ ಈ ಖಾತೆಗೆ ಒಬ್ಬ ಪ್ರತ್ಯೇಕವಾದ ಒಬ್ಬ ಸೆಕ್ರೆಟರಿ ಇರಬೇಕು ಎಂದು ನಾನು ಹಿಂದೆಯೇ ಎಷ್ಟೋ ಸಾರಿ ಹೇಳಿದ್ದೇನೆ. ಅದಕ್ಕೆ ಸರಿ ಯಾದಂಥ ಒಬ್ಬ ಸೆಕ್ರೆಟರಿ ಇಲ್ಲ. ಇದನ್ನು ಮಾನ್ಯ ಮಂತ್ರಿಗಳು ವಿಚಾರಿಸಬೇಕಾಗಿದೆ. ಮಾನ್ಯ ಯಶೋಧರಾ ದಾಸಪ್ಪನವರು ಇದ್ದಾಗ ಹರಿಜನರಿಗೆ ಬೇಕಾದಷ್ಟು ಮಾನ್ಯತೆಗಳನ್ನು ಮಾಡಿದ್ದರು. ಆದರೆ ಅವರು ನಮ್ಮ ದುರ್ದೈವದಿಂದ ರಾಜೀನಾಮೆ ಕೊಟ್ಟು ಹೋದರು. ಈ ವಿಚಾರದಲ್ಲಿ ಸರ್ಕಾ ರದಲ್ಲಿ ಕೆಲವು ನ್ಯೂನ್ಯತೆಗಳು ಇದೆ. ಆದರೆ ಒಂದು ಮಾತನ್ನು ಹೇಳಬೇಕಾಗಿದೆ. ವಿದ್ಯಾಭ್ಯಾಸದ ವಿಚಾರದಲ್ಲಿ ಸಾಕಷ್ಟು ತೃಪ್ತಿಕರವಾಗಿ ನಡೆದಿದೆ, ಅದಕ್ಕಾಗಿ ನಾನು ಸರ್ಕಾರದವರಿಗೆ ಅಭಿನಂದಿಸು ತ್ತೇನೆ. ಅದೂ ಅಲ್ಲದೆ ಈಗ ಸರ್ಕಾರದವರು ಹರಿಜನರ ಹಾಸ್ಟಲುಗಳಿಗೆ 1ನೇ ತರಗತಿಯಿಂದ 4ನೇ ತರಗತಿಯವರೆಗೂ ಗ್ರಾಂಟನ್ನು ಕೊಡುತ್ತಾ ಇಲ್ಲ. ಹಳ್ಳಿಗಳ ಕಡೆಯಿಂದ ಬಂದು ದೊಡ್ಡ ಪಟ್ಟಣಗಳಲ್ಲಿ ವಾಸ ಮಾಡಬೇಕಾಗುತ್ತದೆ. ಹರಿಜನರ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡುವ ದೃಷ್ಟಿಯಿಂದ ಆ ಹಾಸ್ಟಲುಗಳಿಗೆ ಗ್ರಾಂಟನ್ನು ಕೊಡಬೇಕು. ಇದರಿಂದ ಈ ಹರಿಜನರ ವಿದ್ಯಾ ಭ್ಯಾಸಕ್ಕೆ ಒಂದು ಕೊರೆವಾಡಿದ ಹಾಗಾಗುತ್ತದೆ. ಆದುದರಿಂದ ನೀವು ಹಾಸ್ಟಲಿಗೆ ಕೊಡುವ ಗ್ರಾಂಟನ್ನು ಕಟ್ ಮಾಡದೆ ಕೊಡಬೇಕು ಎಂದು ನಾನು ಕೇಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ ಮಾಗಾವಿಯ ಒಂದು ಸರ್ಕಾರಿ ಹಾಸ್ಟಲ್‌ಗೆ ಅಡಿಗೆಯವನ ಸಂಬಳ ಸರ್ಕಾರದವರು ಕೊಡುತ್ತಾ ಇದ್ದರು. ಪ್ರೈವೇಟ್ ಹಾಸ್ಟಲುಗಳಲ್ಲಿ ಅಡಿಗೆಯವನ ಸಂಬಳ ಕೊಡುವುದು ಬಹಳ ಕಷ್ಟವಾಗಿದೆ. ಸರ್ಕಾರದವರು ವಾಚ್‌ಮ್ಯಾನ್ ಸಂಬಳ ಕೊಡುತ್ತಾರೆ.

ಅಡಿಗೆಯವನ ಸಂಬಳ ಏತಕ್ಕಾಗಿ ಕೊಡಬಾರದು ? ಅದಕ್ಕಾಗಿ ತುಂಬಾ ಪಶ್ಚಾತ್ತಾಪ ಮಾಡುತ್ತಿದ್ದಾರೆ. ಹಳೇ ಮೈಸೂರಿನಲ್ಲಿ ತಲೆಗೆ 25 ರೂಪಾಯಿ ಕೊಡುತ್ತಾ ಇದ್ದೀರಿ. ಇದಲ್ಲದೆ ಬಟ್ಟೆ ಪ್ರತಿಯೊಂದನ್ನೂ ಕೊಡುತ್ತಾ ಇದ್ದೀರಿ. ಇದನ್ನು ಹೊಸ ಮೈಸೂರಿನ ಮಕ್ಕಳಿಗೆ ಏತಕ್ಕೆ ಕೊಡಬಾರದು ! ಹಳೇ ಮೈಸೂರು ಮತ್ತು ಹೊಸ ಮೈಸೂರು ಎಂದು ಏತಕ್ಕೆ ವ್ಯತ್ಯಾಸ ಮಾಡುತ್ತಾ ಇದ್ದೀರಿ ! ಸೋಷಿಯಲ್ ವೆಲ್‌ಫೇರ್ ಡೈರೆಕ್ಟರ್ ಕೈಕೆಳಗೆ 10–15 ಜನ ಅಸಿಸ್ಟೆಂಟ್ ಡೈರೆಕ್ಟರುಗಳು ಇದ್ದಾರೆ ಈ ಅಸ್ಪೃಶ್ಯತೆ ನಿವಾರಣೆ ಎನ್ನುವುದು ಸಣ್ಣ ಕೆಲಸವೇನೂ ಅಲ್ಲ. ಆದುದರಿಂದ ಪ್ರತಿಯೊಬ್ಬ ಡಿವಿಷನಲ್ ಕಮೀಷನರ್ ಹತ್ತಿರವೂ ಒಬ್ಬೊಬ್ಬ ಅಸಿಸ್ಟೆಂಟ್ ಡೈರೆಕ್ಟರನ್ನು ಕೊಡಬೇಕು ಎಂದು ನಾನು ಹೋದ ಸಲವೇ ಹೇಳಿದ್ದೆ. ಹರಿಜನ ಉದ್ಧಾರ ಮಾಡಬೇಕು ಎಂದರೆ, ಒಬ್ಬೊಬ್ಬ ಡಿವಿಷನಲ್ ಕಮೀಷನರ್ ಹತ್ತಿರ ಒಬ್ಬೊಬ್ಬ ಅಸಿಸ್ಟೆಂಟ್ ಡೈರೆಕ್ಟರನ್ನು ಕೊಡಬೇಕು ಎಂದು ಈಗಲೂ ಹೇಳುತ್ತಿದ್ದೇನೆ, ಅದನ್ನು ಮಾಡದೇಹೋದರೆ ನಾನು ಸೋಷಿಯಲ್‌ವೆಲ್‌ಫೇರ್ ಕಮಿಟಿಯ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕಾಗುತ್ತದೆ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದೂ ಅಲ್ಲದೆ ಅವರಿಗೆ ಜೀಪುಗಳೂ ಸಹ ಇರುವುದಿಲ್ಲ. ಸೋಷಿಯಲ್ ವೆಲ್‌ಫೇರ್ ಬೋರ್ಡ್ ಮತ್ತು ಸೋಷಿಯಲ್ ವೆಲ್‌ಫೇರ್ ಎಂದು ಎರಡು ಇವೆ. ಸೋಷಿಯಲ್ ವೆಲ್‌ಫೇರ್ ಜೀಪುಗಳನ್ನು ತೆಗೆದುಕೊಂಡು ಓಡಾಡುತ್ತಾರೆ, ಸೋಷಿಯಲ್‌ವೆಲ್‌ಫೇರ್ ಆಫೀಸರಿಗೆ ಒಂದು ಜೀಪು ಸಹ ಸಿಕ್ಕುವುದಿಲ್ಲ. ಅದಕ್ಕೆ ಏರ್ಪಾಡು ಮಾಡಬೇಕು ಎಂದು ನಾನು ಕೇಳುತ್ತೇನೆ.

ಒಂದು ತಾಲ್ಲೂಕಿನಲ್ಲಿ 125 ಹಳ್ಳಿಗಳಿವೆ. ಅಂತಹವು ನಮ್ಮಲ್ಲಿ 10 ತಾಲ್ಲೂಕುಗಳಿವೆ. ಒಂದೊಂದು ತಾಲ್ಲೂಕಿಗೆ ಒಂದು ಜೀಪನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಶಕ್ತಿ ಇಲ್ಲವಾಗಿದೆ. ಅಂದ ಮೇಲೆ ಇವರಿಗೆ ಸಹಾಯ ಯಾವ ರೀತಿ ಮಾಡುವುದಕ್ಕೆ ಸಾಧ್ಯವಿದೆ ? ಆದರೆ ಒಬ್ಬ ಬಿ. ಡಿ. ಒ.ಗೆ ಜೀಪುಗಳು ಇರುತ್ತವೆ. ಹೀಗಾದರೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಮುಂದುವರಿಯುವುದು ಹೇಗೆ ! ಒಂದೊಂದು ಜಿಲ್ಲೆಯಿಂದ ಮೂವರು ಮೂರು ಲಕ್ಷ ಜನಗಳಿಂದ ಆರಿಸಿ ಬಂದಿದ್ದೇವೆ. ಅಂದ ಮೇಲೆ ಒಂದು ಲಕ್ಷಕ್ಕೆ ಒಬ್ಬ ಪ್ರತಿನಿಧಿಯಾಗಿ ಇಲ್ಲಿ ಇದ್ದೇವೆ. ಈ ಮೂರು ಲಕ್ಷ ಜನರ ಉದ್ಧಾರಕ್ಕಾಗಿ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ಜೀಫ್ ಸಿಗುವುದಿಲ್ಲವೆಂಬುದಾಗಿ ಹೇಳಿದರೆ ಇವರಿಗೆ ಇನ್ನೇನು ಸಹಾಯ ಮಾಡಲು ಸಾಧ್ಯವಿದೆ ! ಸೋಷಿಯಲ್ ವೆಲ್‌ಫೇರ್ ಸ್ಕೀಂಗಳನ್ನು ಡೆವಲಪ್‌ಮೆಂಟ್ ಇಲಾಖೆಗೆ ಕೊಡುತ್ತೀರಿ. ಆ ರೀತಿ ಮಾಡಿದರೆ ಅದು ಯಾವ ಯೋಜನೆಯ ಕಾರ್ಯಗಳನ್ನೂ ಸಹ ಮಾಡುವುದಕ್ಕಾಗುವುದಿಲ್ಲ. ಅಲ್ಲದೆ ಅಸಿಸ್ಟೆಂಟ್ ಡೈರೆಕ್ಟರುಗಳಿಗೆ ಸ್ಪೆಷಲ್ ಸ್ಕೀಂಗಳನ್ನು ಕೊಡುವುದಲ್ಲದೆ ಇನ್ನೂ ಹರಿಜನ ಅಭಿವೃದ್ಧಿಗೆ ಬೇಕಾದ ಹೆಚ್ಚಿನ ಕೆಲಸಕಾರ್ಯಗಳನ್ನು ಅವರಿಗೆ ಕೊಡುವಂತೆ ಮಾಡಬಾರದು. ಈ ಬಾಬಿಗೆ ಸಾಕಷ್ಟು ದುಡ್ಡನ್ನು ಖರ್ಚು ಮಾಡುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದು ಪೂರ್ಣವಾಗಿ ಉಪಯೋಗವಾಗದಿದ್ದರೆ ಆ ದುಡ್ಡು ಲ್ಯಾಪ್ಸ್ ಆಗುತ್ತದೆ. ಸೋಷಿಯಲ್ ವೆಲ್‌ಫೇರ್ ಸ್ಕೀಂಗಳನ್ನು ಅಸಿಸ್ಟೆಂಟ್ ಡೈರೆಕ್ಟರುಗಳ ಕೈಗೆ ಹಾಗೂ ಡಿವಿಜನಲ್ ಕಮಿಷನರ್ ಕೈಕೆಳಗೆ ಕೊಡುವುದಕ್ಕಿಂತ ಅದನ್ನು ಡೆವಲಪ್‌ಮೆಂಟ್ ಆಫೀಸರ ಅಧಿಕಾರಕ್ಕೆ ಕೊಡುವುದು ಸೂಕ್ತ. ಆಗ ಅವರ ಕೆಲಸಗಳನ್ನು ಅವರು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿಯ ಅವಕಾಶವನ್ನು ಮಾನ್ಯ ಶ್ರೀ ನಾರಾಯಣಗೌಡರು ಮಾಡಿಕೊಡಬೇಕೆಂದು ನನ್ನ ವಿನಂತಿ. ಅಲ್ಲದೆ ಹರಿಜನರ ಏಳಿಗೆಗೋಸ್ಕರ, ಕೋಣ, ಕುರಿ, ಕೋಳಿ ಕೊಡುವುದನ್ನು ಬಂದ್ ಮಾಡಿ. ಏಕೆಂದರೆ ಅವರು ಅದನ್ನು ತಿಂದುಬಿಡುತ್ತಾರೆ. ಈಗ ಏನಾಗಿದೆಯೆಂದರೆ, ಎಲ್ಲರೂ ಕೋಳಿ ತಿನ್ನುವುದಕ್ಕೆ ಹತ್ತಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ಅದನ್ನು ಬಾಕಿಯವರು ತಿನ್ನುವುದಕ್ಕೆ ಈಗ ಶುರು ಮಾಡಿದ ಮೇಲೆ, ಇವರಿಗೆ ಅದು ಈಗ ತಿನ್ನುವುದಕ್ಕೆ ಸಿಗುವುದೇ ಇಲ್ಲ.

ಶ್ರೀಮತಿ ಚಂಪಾಬಾಯಿ ಭೋಗಲೆ.— ಒಂದೊಂದು ಊರಿಗೆ 40 ಎಕರೆ ಅಥವಾ 50 ಎಕರೆಗಳಂತೆ ಭೂಮಿಯನ್ನು ಸಾಮುದಾಯಿಕ ಅಭಿವೃದ್ಧಿ ಮೇಲೆ ವ್ಯವಸಾಯಕ್ಕೆ ಹರಿಜನರಿಗೆ ಕೊಟ್ಟರೆ ಅನುಕೂಲವಾಗುತ್ತದೆ. ಪ್ರತಿಯೊಂದು ಊರಿಗೆ ನೇಕಡ 50ರಷ್ಟು ಗೋಮಾಳ ಭೂಮಿಯನ್ನು ಅಲ್ಲಿನ ಪಂಚಾಯಿತಿಯವರಿಗೆ ಕೊಟ್ಟು ಇನ್ನುಳಿದ 50 ಎಕರೆಯಷ್ಟನ್ನು ಹರಿಜನರಿಗೆ ಸಾಮುದಾಯಿಕ ಅಭಿವೃದ್ಧಿ ಯೋಜನೆಗಾಗಿ ಅಥವಾ ವ್ಯವಸಾಯಕ್ಕಾಗಿ ಕೊಡಬೇಕು. ಹೀಗೆ ಅವರ ಸಾಂಪತ್ತಿಕ ಶಕ್ತಿಯನ್ನು ಹೆಚ್ಚಿಸಬೇಕು. ಕೋಳಿ, ಕುರಿ ಮುಂತಾದುವನ್ನು ಹರಿಜನರಿಗೆ ಕೊಡುವುದಕ್ಕೆ ಬದಲು ಈ ಯೋಜನೆಗಳನ್ನು ಜಾಗ್ರತೆಯಾಗಿ ಸರ್ಕಾರದವರು ಹರಿಜನರಿಗಾಗಿ ಮಾಡಿಕೊಡುವುದು ಉಚಿತ. ನಮ್ಮಲ್ಲಿ ವತನ್ ಭೂಮಿ ಅಂದರೆ ಗೌರ್ನಮೆಂಟ್ ಲ್ಯಾಂಡ್ಸ್ ಎಂದು ಇರುತ್ತವೆ. ನಮ್ಮ ಪ್ರತಿಯೊಂದು ಕಡೆಗೂ ಆ ಭೂಮಿಯನ್ನು ಹರಿಜನರಿಗಾಗಿ ಕೊಡುವುದಾದರೆ ಅವರಿಗೆ ಒಂದು ಉದ್ಯೋಗ ಕಲ್ಪನೆ ಮಾಡಿದಂತಾಗುತ್ತದೆ. ಅದರಿಂದ ಹರಿಜನರ ಏಳಿಗೆಗೋಸ್ಕರ ಸಾಕಷ್ಟು ಅನುಕೂಲತೆ

(ಶ್ರೀಮತಿ ಚಂಪಾಬಾಯಿ ಭೋಗಲೆ)

ಗಳನ್ನು ಮಾಡಿಕೊಟ್ಟಂತಾಗುತ್ತದೆ. ಇತ್ತೀಚೆಗೆ ನಾನೇ ಡೈರಿ ಫಾರ್ಮಿಂಗ್ ಸೊಸೈಟಿಯನ್ನು ಮಾಡುತ್ತಿದ್ದೇನೆ. ಅದು ವತನ್ ಲ್ಯಾಂಡ್. ವರ್ಷಕ್ಕೆ 45 ಸಾವಿರ ರೂಪಾಯಿಗಳಷ್ಟು ಔಟ್ ಪುಟ್ ಇದೆ. ಎರಡು ಕುಂಟೆ, ಮೂರು ಕುಂಟೆ ಜಮೀನು ಮಾಡಿದರೆ ಅಷ್ಟು ಉತ್ಪನ್ನ ಬರುವುದಿಲ್ಲ. ನಿಮ್ಮ ಸೆಕ್ರಟರಿಯವರಿಗೆ ಹೇಳಿದರೆ ಕೋಳಿ, ಕುರಿ ಸ್ಕೀಂ ಹಾಕುತ್ತಾರೆ. ಆದ್ದರಿಂದ ಮಂತ್ರಿಗಳೇ ಇದರ ಬಗ್ಗೆ ಒಂದು ಸ್ಕೀಂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಒಬ್ಬ ಅಧಿಕಾರಿಗೆ 80 ಎಕರೆಯಷ್ಟು ಜಮೀನು ಕೊಡುತ್ತೀರಿ. ಅದೇ 200 ಜನ ಹರಿಜನರು ಬೇಡಿದಾಗ ಅವರಿಗೆ ಇಲ್ಲ ವೆಂದು ಹೇಳುತ್ತೀರಿ. ಸರ್ವೆ ನಂಬರ್ 667ರಲ್ಲಿ ಗೈರಾನ್ ಲ್ಯಾಂಡ್‌ನಲ್ಲಿ ಒಬ್ಬ ಅಧಿಕಾರಿಗೆ 70-80 ಎಕರೆಗಳಷ್ಟು ಜಮೀನನ್ನು ಕೊಡುತ್ತೀರಿ. ಹರಿಜನರು ಬೇಡಿದರೆ ಕೆಳಗಿನಿಂದ ಮೇಲಿನ ಆಫೀಸರಿಗೆ ಬರದಿದ್ದೇವೆ ಎಂದು ಹೇಳುತ್ತೀರಿ. ಈ ವಿಚಾರದಲ್ಲಿ ಮಾನ್ಯ ಶ್ರೀ ರಾಚಯ್ಯನವರಿಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೂ ಅರ್ಜಿಗಳನ್ನು ಕೊಟ್ಟಿದ್ದೇನೆ. ಆ ರೀತಿಯಾಗಿ ಒಬ್ಬ ಪೋಲೀಸ್ ಅಧಿಕಾರಿಗೆ ಕೊಟ್ಟಿದ್ದಾರೆ. ಹರಿಜನರಿಗೆ ಮುಂದಕ್ಕೂ ಕೊಡುವುದಕ್ಕಾಗುವುದಿಲ್ಲ ವೆಂದು ಬರೆಯುತ್ತಾರೆ. ಇದು ನಮ್ಮ ಸುದೈವವೋ ಅಥವಾ ದುರ್ದೈವವೋ ಎಂದು ನಾನು ಕೇಳುತ್ತೇನೆ. ಅವರನ್ನು ಹೇಳುವವರು, ಕೇಳುವವರು ಯಾರೂ ಇಲ್ಲ. ಮಾನ್ಯ ಸಚಿವರು ತಮ್ಮ ಇಲಾಖೆಯ ಮೂಲಕ ಅವರಿಗೆ ಸಹಾಯ ಮಾಡಬೇಕು. ಸರ್ಕಾರದ ಭೂಮಿಯನ್ನು ಮಾನ್ಯ ಮಂತ್ರಿಗಳು ತಮ್ಮ ಸುಪರ್ದಿನಲ್ಲಿ ತೆಗೆದುಕೊಂಡು ಅರ್ಜಿ ಹಾಕಿದಂಥ ಹರಿಜನರಿಗೆ ಕೊಡಿಸಿ ಕೊಡಬೇಕು. ಆಗ ಅವರು ಎಲ್ಲಾ ಉದ್ಯೋಗಗಳನ್ನು ಮಾಡುವುದಕ್ಕೆ ಸಹಾಯವಾಗುತ್ತದೆ. ಅವರ ಒಂದು ಸಾಂಪತ್ತಿಕ ಶಕ್ತಿಯನ್ನು ಹೆಚ್ಚಿಸಿ. ಅದಕ್ಕಾಗಿ ಜೋಡಿ ಎತ್ತು ಕೊಡಿ, ಡೈರಿ ಫಾರಂ ಮಾಡಿಸಿದರೆ ಪ್ರತಿಯೊಂದು ಊರಿನಲ್ಲಿಯೂ 100ರಿಂದ 200 ಮನೆಗಳವರಿಗೆ ಒಂದು ಉದ್ಯೋಗ ಕಲ್ಪನೆ ಮಾಡಿದಂತಾಗುತ್ತದೆ. ಅವರ ಅಭಿವೃದ್ಧಿಗಾಗಿ ಸಾವಿರಾರು ಸ್ಕೀಂಗಳನ್ನು ಮಾಡುವುದಕ್ಕಿಂತ ಅವರಿಗಾಗಿ ವ್ಯವಸಾಯ ಸ್ಕೀಂಗಳನ್ನು ಕೂಡಲೇ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರಿ ಭೂಮಿ ಇದ್ದರೆ ಮೊದಲು ಅವರಿಗೆ ವಸಾಹತು ಮಾಡಬೇಕು. ಹರಿಜನರ ಏಳಿಗೆಗೋಸ್ಕರ ಸರ್ಕಾರದವರು ಹೆಚ್ಚು ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಶಿಕ್ಷಣ ಶಾಖೆಯಲ್ಲಿ 25 ರೂಪಾಯಿಗಳ ಗ್ರಾಂಟು ಕೊಡುತ್ತಾರೆ. ಇದರಿಂದ ಹರಿಜನ ಮಕ್ಕಳಿಗೆ ಸರಿಯಾಗಿ ಪುಸ್ತಕಗಳು ಸಿಗುವುದಿಲ್ಲ. ಹಲಗೆಗಳು ಸಿಗುವುದಿಲ್ಲ ಈಗಾಗಲೇ ಆ ಕೆಲಸವನ್ನು ಕಸ್ತೂರಿಬಾಯಿ ಬಾಳಗಾ ಪ್ರಿಂಟಿಂಗ್ ಪ್ರೆಸ್ಸಿಗೆ ಬಿಟ್ಟಿದ್ದಾರೆ. ಅದು ಹಳೆಯ ಪ್ರಿಂಟಿಂಗ್ ಪ್ರೆಸ್. ಅಲ್ಲಿಗೆ ಹೋಗಿದ್ದಾರೆ. ಅಷ್ಟರು ಅಲ್ಲಿ ಅವರ ಕಾಲಿನ ಮೇಲೆ ಎದ್ದು ನಿಲ್ಲುವಷ್ಟಿದೆ. ಸರ್ಕಾರ ಇದಕ್ಕಾಗಿ ಹೆಚ್ಚಿಗೆ ಸಹಾಯ ಮಾಡಬೇಕು. ಸರ್ಕಾರದವರು ತಮ್ಮ ಒಂದು ಪ್ರಿಂಟಿಂಗ್ ಪ್ರೆಸ್‌ಗೆ ಆ ಕೆಲಸ ವನ್ನು ಕೊಟ್ಟರೆ ಅವರವರಿಗೆ ಪುಸ್ತಕಗಳು ಚೆನ್ನಾಗಿ ದೊರೆಯಲು ಏರ್ಪಾಡು ಮಾಡಿದಂತಾಗುತ್ತದೆ. ನೀವು ಬಂದನಂತರ ಈ ಸ್ಕೀಂ ಗೌರ್ನಮೆಂಟ್ ಪ್ರಿಂಟಿಂಗ್ ಪ್ರೆಸ್ ಡೈರೆಕ್ಟರ್ ಆಫೀಸಿನೊಳಗೆ ಏನಾಯಿತೋ ಮತ್ತು ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಏನಾದರೂ ಹರಿದು ಕಸದ ಬುಟ್ಟಿಗೆ ಹಾಕಿದರೋ ಏನೋ ಗೊತ್ತಿಲ್ಲ. ಡಿಸ್ಟ್ರಿಕ್ಟ್ ಆಫೀಸರು ಮತ್ತು ಡಿವಿಜನಲ್ ಕಮಿಷನರಿಗೆ ಬರೆದು ಕುರಿ ಮತ್ತು ಕೋಳಿಗಳನ್ನು ಹರಿಜನರಿಗೆ ಕೊಡುವುದಕ್ಕೆ ಖರ್ಚು ಮಾಡುವುದಕ್ಕೆ ಬದಲಾಗಿ ಹರಿಜನ ಮಕ್ಕಳ ವಿದ್ಯಾಭಿವೃದ್ಧಿಗೋಸ್ಕರ ಅದನ್ನು ಖರ್ಚು ಮಾಡಬೇಕು. ಅದಕ್ಕಾಗಿ ಬಜೆಟ್ಟಿನಲ್ಲಿ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ನಾನು ಮಂತ್ರಿಗಳನ್ನು ಕೇಳಿಕೊಂಡು ನಾನು ಈಗ ಏನೇನು ಸಲಹೆಗಳನ್ನು ಕೊಟ್ಟಿದ್ದೇನೋ ಅವನ್ನು ಕೂಡಲೇ ಅಮಲಿನಲ್ಲಿ ತರಬೇಕೆಂದು ಹೇಳಿ, ನಮ್ಮ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು) ಮಾನ್ಯ ಅಧ್ಯಕ್ಷರೇ, ಈ ದಿವಸ ಇಲ್ಲಿ ಇಟ್ಟಿರುವ ಬೇಡಿಕೆಯನ್ನು ನಾನು ವಿರೋಧಿಸುತ್ತಾ ನಾಲ್ಕು ಮಾತುಗಳನ್ನು ಆಡಬೇಕೆಂದು ಇಚ್ಛೆ ಪಡುತ್ತೇನೆ. ಮೊಟ್ಟ ಮೊದಲನೆಯದಾಗಿ, ಹರಿಜನ ಜನಾಂಗದ ವಿದ್ಯಾಭ್ಯಾಸ ಮಟ್ಟವನ್ನು ಯಾವ ರೀತಿಯಲ್ಲಿ ಏರಿಸಿದ್ದಾರೆಂಬುದನ್ನು ನಾವು ಈಗ ಯೋಚನೆ ಮಾಡಿ ನೋಡುವುದಾದರೆ, ಅದು ಯಾವ ರೀತಿ ಇದೆಯೆಂದು ಹೇಳಿದರೆ, ಸಾಯುತಕ್ಕವನಿಗೆ ಒಂದು ಗುಟುಕು ನೀರು ಕೊಟ್ಟಂ ತಾಗಿದೆ. ಕಾಲೇಜುಗಳಲ್ಲಿ ಮತ್ತು ಹೈಸ್ಕೂಲುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಸರಿಯಾದ ಸೌಕರ್ಯಗಳನ್ನು ಕೊಡದೆ ಇರುವುದು, ಮತ್ತು ಈಗ ಏನು ಅಲ್ಲಿ ಸೌಲಭ್ಯಗಳನ್ನು ಕೊಡು ತ್ತಿದ್ದೀರೋ ಅದು ಏನೇನೂ ಸಾಲದು ಎನ್ನುವುದನ್ನು ಅಡ್ವೈಸರಿ ಕಮಿಟಿಯಲ್ಲಿ ನಾವು ಹೇಳಿ

ದ್ದೇವೆ. ಅವರಿಗೆ ಕೊಡತಕ್ಕ ಸ್ಕಾಲರ್‌ಷಿಪ್ಸ್ ಮತ್ತು ಫ್ರೀಷಿಪ್‌ಗಳನ್ನು ಇನ್ನೂ ಹೆಚ್ಚು ಮಾಡಬೇಕು. ಅಲ್ಲಿ ಅವರಿಗೆ ಕೊಡತಕ್ಕಂಥ 27 ಮತ್ತು 40 ರೂಪಾಯಿಗಳನ್ನು 60 ರೂಪಾಯಿಗಳವರೆಗೆ ಏರಿಸಬೇಕೆಂಬ ಬೇಡಿಕೆಯನ್ನು ಕೇಳಿದ್ದೆವು. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಅದನ್ನು ಪರಿಶೀಲಿಸುತ್ತೇವೆಂದು ಹೇಳಿದರು. ಆದರೆ ನಾನು ಇವತ್ತು ಅವರನ್ನು ಅದರ ಬಗ್ಗೆ ಏನಾದರೂ ಕಾರ್ಯಗತ ಮಾಡಿದ್ದೀರಾ ಅಥವಾ ಇಲ್ಲವೇ ಎನ್ನುವುದನ್ನು ಪ್ರಶ್ನಿಸಬೇಕಾಗಿದೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಈ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡು ಇದ್ದಾರೆಂಬುದನ್ನು ತಿಳಿಸಬೇಕೆಂದು ನಾನು ಮನವಿ ಮಾಡುತ್ತೇನೆ.

ಇನ್ನು ಕಾಲೇಜಿನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಒಂದು ಲೈಬ್ರೆರಿಯನ್ನು ತೆರೆಯಬೇಕು. ಆ ಲೈಬ್ರೆರಿಯನ್ನು ಸರ್ಕಾರದ ಹಾಸ್ಟಲುಗಳಿಗೂ ಕೊಡಬೇಕು. ಆದರೆ ಇದಕ್ಕೆ ಕೊಡುವ ಗ್ರಾಂಟನ್ನು ವರ್ಷದ ಕೊನೆಯಲ್ಲಿ ಕೊಡುವುದು ಸರಿಯಿಲ್ಲ. ಆ ಗ್ರಾಂಟನ್ನು ಬೇರೆ ಮಾರ್ಚ್ 31ರೊಳಗೆ ಡ್ರಾ ಮಾಡಬೇಕೆಂದು ಹೇಳುತ್ತೀರಿ ಪುಸ್ತಕ, ವಗೈರೆಗಳನ್ನು ಕೊಂಡುಕೊಳ್ಳಬೇಕು. ಅದಕ್ಕೆ ಸಾಕಷ್ಟು ಕಾಲಾವಕಾಶವೇ ಇರುವುದಿಲ್ಲ. ಮಾರ್ಚ್ 31ನೇ ತಾರೀಖು ಹತ್ತಿರ ಬಂದಾಗ್ಗೆ ಗ್ರಾಂಟನ್ನು ಮಂಜೂರು ಮಾಡುತ್ತಾರೆ. ಇದರಿಂದ ಪುಸ್ತಕಗಳನ್ನು ಮತ್ತು ಇತರೇ ಸಲಕರಣೆಗಳನ್ನು ಈ ವಿದ್ಯಾರ್ಥಿಗಳಿಗೆ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಕಾಲೇಜಿನಲ್ಲಿ ಹೆಚ್ಚಿಗೆ ಪುಸ್ತಕಗಳು ದೊರಕದೇ ಇರುವ ಸಂದರ್ಭಗಳಲ್ಲಿ ಪ್ರತ್ಯೇಕವಾಗಿ ಒಂದು ಲೈಬ್ರೆರಿಯನ್ನು ಹಾಸ್ಟಲ್‌ನಲ್ಲಿ ತೆರೆಯಬೇಕೆಂದು ನಮ್ಮ ಆಶೆ.

ಆದರೆ ಬಾಯಲ್ಲಿ ಬೇಕಾದಷ್ಟು ಹೇಳುತ್ತಾರೆ. ಕಾರ್ಯತಃ ಮಾತ್ರ ಏನೂ ಮಾಡುವುದಿಲ್ಲ. ಅವರು ಹೇಳಿದಂತೆ ಆ ಪುಸ್ತಕ ಭಂಡಾರದ ಗ್ರಾಂಟನ್ನು ವರ್ಷದಾಖೈರಿನಲ್ಲಿ 31ನೇ ತಾರೀಖಿನ ದಿನ ಕೊಟ್ಟರೆ ಅದು ಲ್ಯಾಪ್ಸಾಗದೆ ಇನ್ನೇನಾಗುತ್ತದೆ ಸ್ವಾಮಿ? ಆದ್ದರಿಂದ ಈ ಗ್ರಾಂಟನ್ನು ಜನವರಿ ಒಳಗೆ ಕೊಡಲು ಏರ್ಪಾಡು ಮಾಡಬೇಕು.

ಇನ್ನು ಕ್ಲಾಸ್—ಒಂದು ಮತ್ತು ಎರಡರಲ್ಲಿ ಷೆಡ್ಯೂಲ್ ಕ್ಯಾಸ್ಟಿನವರಿಗೂ ಮತ್ತು ಷೆಡ್ಯೂಲ್ಡ್ ಟ್ರೈಬಿನವರಿಗೂ ಶೇ. 15 ಮತ್ತು ಶೇ. 3ರಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ರಾಜ್ಯಾಂಗದಲ್ಲಿ ಹೇಳಿದ್ದನ್ನೇ ಆ ಬೀರಪ್ಪ ಸಮಿತಿಯವರೂ ಹೇಳಿದ್ದಾರೆ. ಹಾಗೆ ಅವರು ಒತ್ತಾಯ ಮಾಡಿ ಅಷ್ಟು ಹೇಳಿದ್ದರೂ ಮೊನ್ನೆ ನಮ್ಮ ಮುಖ್ಯ ಮಂತ್ರಿಗಳು ಇಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಆ ಶಿಫಾರಸನ್ನು ಕಾರ್ಯಗತ ಮಾಡುವುದಕ್ಕಾಗುವುದಿಲ್ಲ ಎಂದು ಎರಡಾವರ್ತಿ ಅವರು ಒತ್ತಿ ಒತ್ತಿ ಹೇಳಿದರು. ಅವರು ಹಾಗೆ ಏತಕ್ಕೆ ಹೇಳಿದರು? ಅದೇನು ಈಗಿರತಕ್ಕ ಈ ಜನಾಂಗದ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿದೆ ಎನ್ನುವ ಉದ್ದೇಶದಿಂದಲೋ ಅಥವಾ ಬೇರೆ ಇನ್ನಾವ ಉದ್ದೇಶದಿಂದಲೋ ಅದು ಗೊತ್ತಾಗಲಿಲ್ಲ. ಹಾಗೆ ಕೊಡುವುದಕ್ಕಾಗುವುದಿಲ್ಲ ಎಂಬ ಉದ್ದೇಶ ವಿದ್ದಾಗ ಆ ನಿಬಂಧನೆಗಳನ್ನಾದರೂ ಏತಕ್ಕೆ ಮಾಡಿದರು? 1961ಕ್ಕೆ ಇವರು ಆ ಕ್ಲಾಸ್ ಎರಡರಲ್ಲಿ ಶೇ. 3ರನ್ನು ಅಚೀವ್ ಮಾಡಿರಬಹುದು. ಅಲ್ಲಿಂದೀಚೆಗೆ ಇವರು ಈ ಹುದ್ದೆಗಳಲ್ಲಿ ಶೇ. 4-5ಕ್ಕಿಂತ ಮೇಲೆ ಹೋಗಿಲ್ಲ ಎಂದು ನಾನು ಸಾರಿಹೇಳುತ್ತೇನೆ. ಇಷ್ಟು ಕೆಲಸಕ್ಕಾಗಿ ಸರ್ಕಾರದವರೇಕೆ ಆ ಬೀರಪ್ಪ ಕಮಿಟಿಗೆ ಅಷ್ಟೊಂದು ಹಣವನ್ನು ಖರ್ಚುಮಾಡಿದರು? ಹಾಗೆ ಸರ್ಕಾರದವರು ತಮ್ಮಿಂದಲೇ ನೇಮಕವಾದಂಥ ಒಂದು ಕಮಿಟಿಯು ಕೊಟ್ಟ ರಿಪೋರ್ಟನ್ನು ಸರ್ಕಾರದವರು ಗೌರವಿಸದಿದ್ದರೆ ಅದಕ್ಕೆ ಮರ್ಯಾದೆ ಕೊಡದಿದ್ದರೆ ಅದನ್ನೇಕೆ ಮಾಡಿದರು? ಮಾಡಿದ ಮೇಲೆ ಇಲ್ಲಿಯವರೆಗೆ ಅವರೆ ಅದಕ್ಕೆ ಬೆಲೆ ಕೊಟ್ಟಿದ್ದಾರೆ ಎಂಬುದನ್ನು ನಾವೀಗ ಪರಿಶೀಲನೆ ಮಾಡಬೇಕಾಗಿದೆ. ಅಂತೂ ಅವರು ಮಾಡಿದ ಒಂದು ಕಮಿಟಿಯವರದಿಗೆ ಅವರೇ ಬೆಲೆ ಕೊಡದಿರುವುದು ಬಹಳ ಶೋಚನೀಯ.

ಇನ್ನು ಕ್ಲಾಸ್ ಎರಡು ಮತ್ತು ಮೂರರಲ್ಲಿ ಈ ರಿಜರ್ವೇಷನ್ ಬಗ್ಗೆ ಎಷ್ಟು ಜನರಿಗೆ ಸ್ಥಾನಗಳನ್ನು ಕಲ್ಪಿಸಿಕೊಟ್ಟಿದ್ದಾರೆಂಬುದನ್ನು ಪರಿಶೀಲಿಸಿದರೆ ಅವರು ತಂಬಿದ ಜನರಲ್ಲಿ ಅರ್ಧಕ್ಕೆ ಹೆಚ್ಚಾಗಿ ಆ ಕ್ಲಾಸ್ ಮೂರರಲ್ಲಿ ಇರುತ್ತಾರೆ. ಆದರೆ ಸರ್ಕಾರದವರು ಈ ದಿವಸ ಈ ಜನಾಂಗದವರು ನೌಕರಿಯಲ್ಲಿ ಎಷ್ಟು ಜನರಿದ್ದಾರೆಂಬುದನ್ನು ಲೆಕ್ಕಕ್ಕೆ ತೆಗೆದುಕೊಂಡು ಇನ್ನು ಸರ್ಕಾರದವರು ಹುದ್ದೆಗಳನ್ನು ಅಡ್ವರ್‌ಟೈಜ್ ಮಾಡಿದರೆ ಅವರಲ್ಲಿ ಕೆಲಸಕ್ಕೆ ಬರಲು ಜನರೇ ಇರುವುದಿಲ್ಲ ಅನ್ನುವಂಥ ಧಾಟಿಯಲ್ಲಿ ಮಾತನಾಡುತ್ತಿದ್ದಾರೆ. ಆದರೆ ಅದಕ್ಕೆ ನಾನು ಹೇಳುತ್ತೇನೆ, ಸ್ವಾಮಿ, ಈ ದಿವಸ ನೀವು ಅಪಾಯಿಂಟ್‌ಮೆಂಟ್‌ಗಳನ್ನು ಕೊಡುತ್ತೇವೆಂದು ಹೇಳಿ ನಾನು ನಿಮ್ಮ ಮನೆಯ ಮುಂದೆ ಕೆಲಸಕ್ಕೆ ಜನರನ್ನು ಸಾಲಾಗಿ ನಿಲ್ಲಿಸುತ್ತೇನೆ. ಈ ದಿವಸ ನಮ್ಮ ಜನಾಂಗದಲ್ಲಿ ಡಬ್ಬಲ್ ಗ್ರಾಜುಯೇಟ್‌ಗಳಾಗಿರತಕ್ಕ ಯುವಕರು ಕೆಲಸವಿಲ್ಲದೆ ಬೀದಿಗಳಲ್ಲಿ ಅಲೆಯುತ್ತಿದ್ದಾರೆ. ಆ ದಿವಸ ಇಲ್ಲಿ ನಮ್ಮ ಮುಖ್ಯ ಮಂತ್ರಿಗಳು ನೀವೊಂದು ಪತ್ರ ಬರೆಯಿರಿ ಸಾಕು ನಾವು ಎಷ್ಟು ಜನ ಇದ್ದರೂ

(ಶ್ರೀ ಎಸ್. ಎಚ್. ಪುಟ್ಟರಂಗನಾಥ್)

ಅವರಿಗೆ ಅಪಾಯಿಂಟ್‌ಮೆಂಟುಗಳನ್ನು ಕೊಡುತ್ತೇವೆಂದು ಹೇಳಿದ್ದರು. ಅದಕ್ಕನುಸಾರವಾಗಿ ಶ್ರೀ ಜಯಪ್ರಕಾಶನಾರಾಯಣ್ ಅವರು ಮುಖ್ಯಮಂತ್ರಿಗಳಿಗೆ ಪತ್ರ ಸಹಾ ಬರೆದಿದ್ದರು. ಆದರೆ ಅವರು ಹಾಗೆ ಎಷ್ಟು ಜನರಿಗೆ ನೌಕರಿಗಳನ್ನು ಕೊಟ್ಟರು ಎಂಬ ವಿಚಾರ ನನಗೆ ಗೊತ್ತಾಗಲಿಲ್ಲ.

ಇನ್ನು ಅಸ್ಪೃಶ್ಯತೆಯನ್ನು ತೊಡೆದು ಹಾಕತಕ್ಕ ವಿಚಾರದಲ್ಲಿ ಗ್ರಾಮಪಂಚಾಯಿತಿಗಳಿಗೆ ಪ್ರಯಿಜನ್ನು ಕೊಡುವುದರ ಮೂಲಕ ಇದನ್ನು ತೊಡೆದುಹಾಕುತ್ತೇವೆಂದು ಇಲ್ಲಿ ಹೇಳುತ್ತಿರುವುದೆಲ್ಲಾ ಬರಿ ಒಂದು ನಾಟಕ. ಆದರೆ ಕೆಲವು ಗ್ರಾಮಪಂಚಾಯಿತಿಗಳಿಗೇನೋ ಬಹುಮಾನಗಳನ್ನು ಮಾತ್ರ ಕೊಟ್ಟಿದ್ದಾರೆ. ಇದರಿಂದ ಸರ್ಕಾರಕ್ಕೆ ನಷ್ಟವೇ ವಿನಾ ಇದರಿಂದೇನೂ ಕಾರ್ಯಸಾಧನೆ ಮಾತ್ರ ಆಗಿರುವುದಿಲ್ಲ. ನಮ್ಮಲ್ಲಿ ಮಾದಿಹಳ್ಳಿ ಎಂಬ ಒಂದು ಗ್ರಾಮವಿದೆ. ಅಲ್ಲಿನ ಪಂಚಾಯಿತಿಯವರು ಈ ಬಗ್ಗೆ ನಡೆಸಿದ ಕಾರ್ಯಕ್ರಮಗಳ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ಅವರಿಗೆ ಒಂದು ಸಾವಿರ ಮತ್ತು 500 ರೂಪಾಯಿಗಳ ಬಹುಮಾನವನ್ನೇನೊ ಕೊಟ್ಟರು. ಆದರೆ ಸರ್ಕಾರಕ್ಕೆ ಹೀಗೆ ಕೊಡುತ್ತಿರುವುದೆಲ್ಲ ಬರೀ ದಂಡವಾಗಿ ಖರ್ಚಾಗುತ್ತಿದೆ. ಆದರೆ ಪಂಚಾಯಿತಿಗಳಿಂದ ಇದನ್ನು ನೀಗಲು ಸಾಧ್ಯವಿಲ್ಲ. ಇಲ್ಲಿಯವರೆಗೂ ನಡೆಸಿರತಕ್ಕದ್ದು ಎಲ್ಲಾ ಬೋಗಸ್ಸು ಎಂದು ಹೇಳುತ್ತೇನೆ.

ಇನ್ನು ಡ್ರಿಂಕಿಂಗ್‌ವಾಟರ್ ವೆಲ್ಸ್‌ಗಳಿಗೆ ಬಂದರೆ—ಕಳೆದ ಚುನಾವಣೆಗಳ ಕಾಲದಲ್ಲಿ ನಮ್ಮ ಮುಖ್ಯಮಂತ್ರಿಗಳು ನಮ್ಮ ಹಾಸನ ಜಿಲ್ಲೆಗೂ ಬಂದಿದ್ದರು. ಅಲ್ಲಿ ಅವರು ಒಂದು ಪೆಂಡಾಲಿನಲ್ಲಿ ಮಾತನಾಡುತ್ತಿದ್ದಾಗ ಅವರು ಹೇಳಿದರು—ಒಂದೊಂದು ಹಳ್ಳಿಯಲ್ಲಿ ಕೆಲವರು ಬಲಗೈನವರು ಅಂತ ಇದ್ದರೆ ಇಲ್ಲಿ ಇನ್ನು ಕೆಲವರು ಎಡಗೈನವರು ಎಂದು ಇರುತ್ತಾರೆ. ಇಂಥಾ ವ್ಯತ್ಯಾಸಗಳನ್ನೆಲ್ಲಾ ತೊಡೆದುಹಾಕಬೇಕೆಂದರೆ ಅದು ಬಹಳ ಕಷ್ಟ. ಹಾಗೆ ಅದನ್ನು ತಡೆಗಟ್ಟುವುದನ್ನು ಹೇಗೆ ಪ್ರಯತ್ನ ಮಾಡಬೇಕು ಎಂಬುದನ್ನು ಪರಿಶೀಲಿಸದೆ ಅಲ್ಲಿ ಹೊಸದೊಂದು ಭಿನ್ನಭಾವನೆಯನ್ನು ಕ್ರಿಯೇಟ್‌ಮಾಡಿ ಬಂದರು. ಅದೇನು ಎಂದರೆ ಒಂದು ಊರಿನಲ್ಲಿ ಎಡಗೈನವರು ಮತ್ತು ಬಲಗೈನವರು ಎಂದು ಇದ್ದರೆ ಅವರಿಬ್ಬರಿಗೂ ಕುಡಿಯುವ ನೀರಿನ ಬಾವಿಗಳನ್ನು ಪ್ರತ್ಯೇಕವಾಗಿ ಮಾಡಿಸಿ ಕೊಟ್ಟು ಅಲ್ಲಿದ್ದ ಪ್ರಾಬ್ಲಂ ಅನ್ನು ಸಾಲ್ವ್ ಮಾಡಿದೆವು ಎಂದೇನು ಅವರು ಒಂದು ಮಾತನ್ನು ಹೇಳಿದ್ದಾರೋ ಅದು ತೀರಾ ನಾಚಿಗೆಗೇಡಾದ ಮಾತು ಎಂದು ನಾನು ಹೇಳುತ್ತೇನೆ. ಸರ್ಕಾರದವರು ಇಂಥ ಡಿಫರೆನ್ಸ್‌ಗಳನ್ನು ನೀಗುವುದಕ್ಕೆ ಬದಲಾಗಿ ಅವರೇ ಇಂಥ ಡಿಫರೆನ್ಸ್‌ಗಳು ಬೆಳೆದು ಅವರಲ್ಲಿದ್ದ ಆ ಒಂದು ಒಗ್ಗಟ್ಟಿಗೆ ಇವರೇ ಕಳಂಕ ತಂದಿದ್ದಾರೆ. ಈ ಎಂ.ಪಿ.ಆರ್.ಸಿ. ಸ್ಕೀಮು ಏನಿದೆ ಇದನ್ನು ಸರಿಯಾಗಿ ಕಾರ್ಯಗತಮಾಡುವುದಕ್ಕಾಗುವುದಿಲ್ಲ, ಇದು ಸಾಧ್ಯವಿಲ್ಲದ ಮಾತು ಎಂದು ನಾನು ಹೇಳುತ್ತೇನೆ. ಇಲ್ಲಿಯವರೆಗೂ ಸರ್ಕಾರದವರು ಈ ಯೋಜನೆಗಾಗಿ ಖರ್ಚುಮಾಡಿರತಕ್ಕ ಹಣವೆಲ್ಲಾ ಹಾಳಾಗಿಹೋಗಿದೆ. ಇದು ನಿಜವಾಗಿಯೂ ಸದ್ವಿನಿಯೋಗವಾಗಿಲ್ಲ. ಕೆಲವು ಕಡೆಗೆ ಬಾವಿಗಳನ್ನು ತೆಗೆದಿದ್ದಾರೆ ಆದರೆ ಅಲ್ಲಿ ನೀರು ಬಂದಿಲ್ಲ. ಇಲ್ಲಿಯವರೆಗೂ ಈ ಬಾಬಗೆ ಖರ್ಚಾಗಿರತಕ್ಕ ಹಣದಲ್ಲಿ ಶೇ. 50ರಷ್ಟು ಕೆಲಸಗಳು ಕೂಡ ಆಗಿಲ್ಲ. ಸರ್ಕಾರದವರು ಯಾವಾಗಲೂ ತೆರೆಯುವುದು ಇಂಥಾ ಸ್ಕೀಮುಗಳನ್ನೇ. ನಮ್ಮ ಹಾಸನ ತಾಲ್ಲೂಕಿನಲ್ಲಿ ಕಾರೆಹಳ್ಳಿ ಅನ್ನುವ ಒಂದು ಗ್ರಾಮವಿದೆ. ಅಲ್ಲಿ ಈ ಸ್ಕೀಮನ್ನು ತೆರೆದಿದ್ದಾರೆ. ಅಲ್ಲಿ ಒಬ್ಬ ಸೋಷಿಯಲ್ ವೆಲ್‌ಫೇರ್ ಆಫೀಸರು ಇದ್ದಾರೆ. ಅವರು ಡೆಪ್ಯುಟಿಕಮೀಷನರ ಕಚೇರಿಯ ಹೆಡ್‌ಗುಮಾಸ್ತರಾಗಿದ್ದಾರೆ. ಅಲ್ಲಿ ನಡೆದಿರತಕ್ಕ ಅನೇಕ ಕೆಲಸಗಳನ್ನು ನಾನು ನೋಡಿದ್ದೇನೆ. ಅನೇಕ ಬಾವಿಗಳಲ್ಲಿ ಬಾವಿ ತೋಡಿಸಿದ್ದರೂ ನೀರಿಲ್ಲ. ಇನ್ನು ಅಲ್ಲಿ ಕೆಲವು ಹರಿಜನರಿಗೆ ಬೇಸಾಯಕ್ಕೆ ಎತ್ತುಗಳನ್ನು ಕೊಡಿಸಿದ್ದಾರೆ. ಅವು ಈಗಲೋ ಆಗಲೋ ಸಾಯುತ್ತವೆ ಅನ್ನುವ ಹಾಗಿವೆ. ಇನ್ನು ಅವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ ಆ ಮನೆಗಳ ಮೇಲೆ ಹೊದಿಸಿರತಕ್ಕ ತಗಡುಗಳನ್ನು ನೋಡಿದರೆ ಅವರೇನು ಬುಡುಬುಡುಕೆಯವರು ವಾಸಮಾಡತಕ್ಕ ಜೋಪಡಿಗಳೇನೋ ಅನ್ನುವಂತೆ ಕಾಣುತ್ತಿವೆ. ಹೀಗೆ ಅವರಿಗೆ ಅಲ್ಲಿ ನೀರಿಲ್ಲ, ವಸತಿಯಿಲ್ಲ. ಅಲ್ಲಿ ಬೆಳೆಯಿಲ್ಲ. ಆದ್ದರಿಂದ ಸರ್ಕಾರದವರು ಇಲ್ಲಿಯವರೆಗೂ ಏನು ಒಂದು ಹಣವನ್ನು ಖರ್ಚುಮಾಡಿದ್ದಾರೋ ಅದಕ್ಕೆ ತಕ್ಕ ಪ್ರತಿಫಲ ಬಂದಿಲ್ಲ ಎಂಬುದನ್ನು ನಾನು ಸಾರಿ ಸಾರಿ ಹೇಳುತ್ತೇನೆ. ಇದೆಲ್ಲಾ ಒಂದು ಭಾರಿ ಅಭಾಸಕ್ಕೆ ಕಾರಣವಾಗಿದೆಯೇ ವಿನಾ ಇದರಿಂದ ಪ್ರಯೋಜನವಂತೂ ಸುತರಾಂ ಆಗಿಲ್ಲ.

ಇನ್ನು ಅವರಿಗೆ ಕೊಡತಕ್ಕ ಆ ರೂರಲ್ ಹೌಸಿಂಗ್ ಸಾಲಗಳೇನಿವೆ ಅವು ಅವರಿಗೆ ಸಕಾಲಕ್ಕೆ ತಲುಪುತ್ತಿಲ್ಲ. ಅದಕ್ಕಾಗೇ ನಾನು ಆ ಸಂಸ್ಥೆಗಳ ಅಧ್ಯಕ್ಷತೆ ಈಗಿನಂತೆ ಆ ತಾಲ್ಲೂಕ್ ಬೋರ್ಡ್ ಅಧ್ಯಕ್ಷರಿಗಿರಬಾರದು, ಅದನ್ನು ಈ ಜನಾಂಗದವರಿಗೆ ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ. ಎಷ್ಟೋ

ಕಡೆಗಳಲ್ಲಿ ನನಗೆ ಗೊತ್ತಿರುವ ಹಾಗೆ ಅಲ್ಲಿ ಕೆಲವರಿಗೆ ಮೊದಲನೆಯ ಕಂತಿನ ಹಣವನ್ನು ಮನೆ ಕಟ್ಟಿಕೊಳ್ಳಲು ಕೊಟ್ಟಿದ್ದಾರೆ. ಅನಂತರ ಎರಡನೆ ಇನ್‌ಸ್ಟಾಲ್‌ಮೆಂಟ್‌ನ್ನು ಮಂಜೂರು ಮಾಡಿಲ್ಲ. ಹೀಗಾಗಿ ಅಲ್ಲಿ ಮಳೆಬಂದಾಗ ಆ ಗೋಡೆಗಳೆಲ್ಲಾ ಬಿದ್ದುಹೋಗುತ್ತಿವೆ. ಅಲ್ಲಿ ಇವರು ಆ ಮನೆಗಳಿಗೆ ಖರ್ಚು ಮಾಡುತ್ತಿರುವುದೆಲ್ಲಾ 300 ರೂಪಾಯಿಗಳು ಮಾತ್ರ. ಅದರಲ್ಲಿ ಸರಿಯಾಗಿ ಫೌಂಡೇಷನ್ ಕೂಡ ಹಾಕುವುದಕ್ಕಾಗುವುದಿಲ್ಲ. ಹೀಗಾಗಿ ಅಲ್ಲಿ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಅಲ್ಲಿನ ಅಧಿಕಾರಿಗಳು ಈ ಮನೆಗಳ ಆಯ ಎಷ್ಟಿರಬೇಕು ಅಳತೆ ಎಷ್ಟಿರಬೇಕು ಎಂಬುದನ್ನೆಲ್ಲಾ ನಿಗದಿ ಮಾಡಿದ್ದಾರೆ. ಆದರೆ ಆ ಹಳ್ಳೀ ಜನರಿಗೆ ಅದನ್ನು ಖಚಿತವಾಗಿ ಪಾಲಿಸುವುದಕ್ಕಾಗುವುದಿಲ್ಲ. ಅವರು ಅಲ್ಲಿ ಒಂದೆರಡು ಅಡಿಗಳನ್ನು ಜಾಸ್ತಿ ಹಾಕಿದ್ದರೆ ಅಂಥಾದ್ದನ್ನು ಮತ್ತೆ ಕಿತ್ತು ಕಟ್ಟಬೇಕು ಎಂದು ಹೇಳುತ್ತಿದ್ದಾರೆ. ಅಂಥ ನಿದರ್ಶನಗಳು ಬೇಕಾದಷ್ಟಿವೆ. ಆ ಜನರು ಈ ಸೊಸೈಟಿಯಿಂದ ಸಾಲ ಪಡೆಯಲು ಅಂದರೆ –300, 350 ರೂಪಾಯಿಗಳ ಸಾಲಕ್ಕಾಗಿ ಅವರು ತಮ್ಮ ಎರಡು—ಎರಡೂವರೆ ಸಾವಿರ ಮತ್ತು ಮೂರು ಸಾವಿರ ಬೆಲೆ ಬಾಳತಕ್ಕ ನಿವೇಶನಗಳನ್ನು ಆಧಾರ ಮಾಡಿದ್ದಾರೆ. ಹಾಗೆ ಮಾಡಿದ್ದರೂ ಅವರಿಗೆ ಅಗತ್ಯವಾದ ಹಣ ಸಿಕ್ಕದೆ ಅವರು ತುಂಬಾ ತೊಂದರೆಗೊಳಗಾಗಿದ್ದಾರೆ. ಹಾಗೆ ಅವರು ತೊಂದರೆ ಪಡುತ್ತಿರುವುದನ್ನು ಕಣ್ಣಲ್ಲಿ ನೋಡಿಕೊಂಡು ಕುಳಿತಿರುವುದು ಬಹಳ ಆಶ್ಚರ್ಯ. ಆದುದರಿಂದ ಸರ್ಕಾರದವರು ಈ ಕೂಡಲೆ ಇದರ ಬಗ್ಗೆ ಒಂದು ಕಾರ್ಯಕ್ರಮ ಏನು ತೆಗೆದುಕೊಳ್ಳಬೇಕಾಗಿದೆ ಅಂದರೆ ಅವರು ಈ ಜನಾಂಗದಲ್ಲೇ ಯಾರನ್ನಾದರೂ ಒಬ್ಬರನ್ನು ಚುನಾವಣೆ ಮಾಡಿ ಅಲ್ಲಿಗೆ ಅಧ್ಯಕ್ಷರನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂಥಾ ಒಂದು ಪದ್ಧತಿಯನ್ನು ತಾವು ಜಾರಿಗೆ ತರಬೇಕು. ಆದರೆ ಸರ್ಕಾರದವರು ಈ ಜನಾಂಗ ಬದುಕಿದರೇನು – ಕೆಟ್ಟರೇನು ಎಂಬ ಉದ್ದೇಶವಿಟ್ಟುಕೊಂಡು ಕೆಲಸ ಮಾಡಿದರೆ ಅದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

4–30 P.M.

ಶ್ರೀ ಜಿ. ಬಸವಣ್ಣಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಮಾಜ ಕಲ್ಯಾಣ ಶಾಖೆಯ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ 27ನೇ ಡಿಮ್ಯಾಂಡನ್ನು ಸ್ವಾಗತಿಸುತ್ತಾ ಒಂದೆರಡು ಸಲಹೆಗಳನ್ನು ನಾನು ಕೊಡಬಯಸುತ್ತೇನೆ. ಈಗಾಗಲೇ ನನ್ನ ಸ್ನೇಹಿತರಾದ ಮಾನ್ಯ ಸದಸ್ಯರು ಸೂಕ್ತ ಸಲಹೆಗಳನ್ನು ಈ ಇಲಾಖೆಯ ಬಗ್ಗೆ ಕೊಟ್ಟಿದ್ದಾರೆ. ನಾನಾದರೂ ಆ ಸಲಹೆಗಳ ಬಗ್ಗೆ ಪ್ರಸ್ತಾಪಿಸದೆ ಈ ಇಲಾಖೆಯ ಬಗ್ಗೆ ಒಂದೆರಡು ಅಂಶಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಮೊಟ್ಟ ಮೊದಲನೆಯದಾಗಿ ಸಮಾಜ ಕಲ್ಯಾಣ ಇಲಾಖೆಯ ಪ್ರಗತಿಯ ಬಗ್ಗೆ ಒಂದೆರಡು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಪ್ರಪಂಚದಲ್ಲಿ ಯಾವುದೇ ಒಂದು ದೇಶದ ಸಮಾಜದ ಪ್ರಗತಿಯನ್ನು ಗಮನಿಸಿದರೆ ಆ ದೇಶದ ಸಮಾಜದ ಪ್ರಗತಿಗೆ ಅನೇಕ ವರ್ಷಗಳನ್ನು ತೆಗೆದುಕೊಂಡಿದ್ದಾರೆ. ಅದೇ ರೀತಿ ನಮ್ಮ ದೇಶದ ಸಮಾಜದ ಪ್ರಗತಿಯನ್ನು ಗಮನಿಸಿದರೆ ಕೇವಲ 20 ವರ್ಷಗಳ ಅವಧಿಯಲ್ಲಿ ಗಣನೀಯವಾದ ಪ್ರಗತಿಯನ್ನು ಸಾಧಿಸಿದ್ದಾರೆ. ನಮ್ಮ ರಾಜ್ಯ ಸರ್ಕಾರದವರು ಒಂದು ಸಮರ್ಥನೀಯವಾದ ಕೆಲಸಗಳನ್ನು ನಿಮ್ನವರ್ಗದವರ ಪ್ರಗತಿಯ ಬಗ್ಗೆ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈಗ ಕಳೆದ 200 ವರ್ಷಗಳಿಂದ ನಮ್ಮ ದೇಶ ಪರಕೀಯರ ದಾಸ್ಯಶೃಂಖಲೆಯಲ್ಲಿ ಸಿಲುಕಿತ್ತು. ಸಮಾಜ ಕಲ್ಯಾಣದ ಪ್ರಗತಿ ಆಗದೆ ಸಮಾಜದಲ್ಲಿ ಅಂಧಕಾರ ಮತ್ತು ಅಸ್ಪೃಶ್ಯತೆ ತಾಂಡವವಾಡುತ್ತಿತ್ತು. ನಾವು ಸ್ವಾತಂತ್ರ್ಯವನ್ನು ಗಳಿಸಿದ ಮೇಲೆ 20 ವರ್ಷಗಳ ಅವಧಿಯಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಅಳವಡಿಸಿಕೊಂಡು ಸಮಾಜ ಕಲ್ಯಾಣದ ಕೆಲಸಕ್ಕೆ ಸಾಕಷ್ಟು ಹಣವನ್ನು ಒದಗಿಸಿ ರಾಜ್ಯ ಸರ್ಕಾರದವರು ನಿಮ್ನವರ್ಗದವರ ಪ್ರಗತಿಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡಿದ್ದಾರೆ. ಸಮಾಜ ಕಲ್ಯಾಣದ ಪ್ರಗತಿಯ ಇಪ್ಪತ್ತು ವರ್ಷದ ಹಿಂದಿನ ಚಿತ್ರವನ್ನು ಮತ್ತು ಈಗಿನ ಚಿತ್ರವನ್ನೂ ಪರಿಶೀಲನೆ ಮಾಡಿದರೆ ಸಮಾಜದ ಪ್ರಗತಿ ಎಷ್ಟರಮಟ್ಟಿಗೆ ಆಗಿದೆ ಎಂಬುದು ಖಂಡಿತವಾಗಿಯೂ ಅರ್ಥವಾಗುತ್ತದೆ. ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ನಿಮ್ನವರ್ಗದವರ ವಿದ್ಯಾಭ್ಯಾಸಕ್ಕಾಗಿ, ಮಹಿಳೆಯರ ಹಿತರಕ್ಷಣೆಗಾಗಿ, ಅವರ ಆರ್ಥಿಕ ಅಭಿವೃದ್ಧಿಗಾಗಿ, ಕೈಗಾರಿಕೆಗಾಗಿ, ವಿದ್ಯಾರ್ಥಿನಿಲಯಗಳಿಗಾಗಿ ಇತ್ಯಾದಿ ಅನೇಕ ಕೆಲಸಗಳಿಗೆ ಸರ್ಕಾರದವರು ಹಣವನ್ನು ಖರ್ಚು ಮಾಡಿದ್ದಾರೆ, ಈ ರೀತಿ ವಿನಿಯೋಗಿಸಿದ ಹಣ ಸರಿಯಾದ ರೀತಿಯಲ್ಲಿ ಸದುಪಯೋಗವಾಗಿದೆಯೇ ಎಂಬುದನ್ನು ಪರಿಶೀಲಿಸಿದರೆ, ಕೆಲವೊಂದು ಸಂದರ್ಭಗಳಲ್ಲಿ ಅದು ಸರಿಯಾಗಿ ಸದುಪಯೋಗವಾಗಿಲ್ಲ. ಯಾವುದರ ಸಲುವಾಗಿ ಸರ್ಕಾರದವರು ಹಣವನ್ನು ಮಂಜೂರು ಮಾಡುತ್ತಾರೆಯೋ, ಅದನ್ನು ಯಾವ ಕೆಲಸಕ್ಕೆ ಕೊಡುತ್ತಾರೆಯೋ

(ಶ್ರೀ ಜಿ. ಬಸವಣ್ಣಪ್ಪ)

ಅದಕ್ಕೆ ಆ ಹಣವನ್ನು ಉಪಯೋಗಿಸಬೇಕು. ಸರ್ಕಾರದವರು ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ನಿಮ್ನವರ್ಗದವರಿಗೆ ಹಣವನ್ನು ಕೊಟ್ಟರೆ ಅವರು ಅದನ್ನು ಸಾಲವನ್ನು ತೀರಿಸುವುದಕ್ಕೋ ಅಥವಾ ಮತ್ತೆ ಯಾವುದಕ್ಕೋ ಉಪಯೋಗಿಸುವುದು, ಮನೆ ಕಟ್ಟಿಕೊಳ್ಳುವುದಕ್ಕೆ ಹಣವನ್ನು ಕೊಟ್ಟರೆ ಅದನ್ನು ಮದುವೆ ಮಾಡುವುದಕ್ಕೆ ಉಪಯೋಗಿಸುವುದು, ಹೀಗೆ ಕೆಲವೊಂದು ಸಂದರ್ಭಗಳಲ್ಲಿ ಹಣ ದುರುಪಯೋಗವಾಗಿದೆ. ಈ ನಿಮ್ನವರ್ಗದವರ ಪ್ರಗತಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ಸರ್ಕಾರದವರ ಹೊಣೆಗಾರಿಕೆ ಎಷ್ಟಿದೆಯೋ ಅಷ್ಟೆ. ಅದರಲ್ಲಿ ಸದಸ್ಯರದು ಮತ್ತು ಸಾರ್ವಜನಿಕರದು ಹೊಣೆಗಾರಿಕೆ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಇದರ ಬಗ್ಗೆ ಕೆಲಸ ಮಾಡಲು ನಿಷ್ಠಾವಂತರಾದವರು ಇಲ್ಲದೆ ಇರುವುದು ಒಂದು ಕಾರಣ. ಈ ಸಮಾಜದ ಪ್ರಗತಿಯ ವಿಷಯದಲ್ಲಿ ಸರ್ಕಾರದ ಜವಾಬ್ದಾರಿ, ದೃಷ್ಟಿ ಎಷ್ಟು ಇರುತ್ತದೆಯೋ ಅದಕ್ಕಿಂತಲೂ ಹೆಚ್ಚು ನಮ್ಮ ಕರ್ತವ್ಯ ದೃಷ್ಟಿ ಇರಬೇಕು. ಆ ರೀತಿ ಇಲ್ಲದೇ ಹೋದರೆ ಸಮಾಜದ ಪ್ರಗತಿ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಕೆಲವಾರು ವರ್ಷಗಳ ಸಮಾಜದ ಪ್ರಗತಿಯನ್ನು ಗಮನಿಸಿದರೆ, ನಿಮ್ನವರ್ಗದ ಕೆಲವೊಂದು ಕೋಮುಗಳಿಗೆ ಅನ್ಯಾಯವಾಗಿರುವುದು ಕಂಡು ಬರುತ್ತದೆ ಆದರೆ ಈಗಿನ ಒಂದು ವ್ಯವಸ್ಥೆಯಲ್ಲಿ, ಎಲ್ಲಾ ಕೋಮುಗಳಿಗೂ ಸಹ ಸರಿಯಾದ ರಕ್ಷಣೆ ಸಿಕ್ಕುವ ವ್ಯವಸ್ಥೆಯಾಗಿದೆ. ನಮ್ಮ ನಾಯಕರ ಮುಖಂಡತ್ವದಲ್ಲಿ ಎಲ್ಲಾ ಕೋಮಿನವರಿಗೂ ಅನುಕೂಲವಾಗುತ್ತಿದೆ. ಈ ಸೋಷಿಯಲ್ ವೆಲ್‌ಫೇರ್ ಇಲಾಖೆಯ ಮಂತ್ರಿಗಳಾದ ಶ್ರೀಮಾನ್ ನಾರಾಯಣ ಗೌಡರು ಮತ್ತು ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ರಾಚಯ್ಯನವರೂ ನಿಮ್ನ ವರ್ಗದವರ ಪ್ರಗತಿಗಾಗಿ ನಿಷ್‌ಪಕ್ಷಪಾತವಾಗಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ನಾನು ನಿಮ್ನವರ್ಗದವರ ಕೋಮುಗಳ ಪರವಾಗಿ ಅವರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಇನ್ನು ನಿಮ್ನ ವರ್ಗದವರ ವಿದ್ಯಾರ್ಥಿನಿಲಯಗಳು ಏನಿವೆ ಅವುಗಳಲ್ಲಿ ಈಗ್ಯೆ 10—12 ವರ್ಷಗಳ ಹಿಂದೆ ಬೋರ್ಡರುಗಳ ಸ್ಟ್ರೆಂಗ್ತ್ ಎಷ್ಟು ಇತ್ತೋ ಇವೊತ್ತೂ ಅಷ್ಟೇ ಇದೆ. ಮೂರು ವರ್ಷಗಳಿಗೊಮ್ಮೆ ನಿಮ್ನ ವರ್ಗದವರ ವಿದ್ಯಾರ್ಥಿ ನಿಲಯಗಳ ಬೋರ್ಡರುಗಳ ಸ್ಟ್ರೆಂಗ್ತನ್ನು ರಿವೈಜ್ ಮಾಡಬೇಕೆಂದು ನಿಯಮ ಇದ್ದರೂ ಕೂಡ ಅವನ್ನು ರಿವೈಜ್ ಮಾಡದೇ ಇರುವುದು ವಿಷಾದನೀಯ. ಈಗ ನಿಮ್ನ ವರ್ಗದವರ ಹಾಸ್ಟಲುಗಳಲ್ಲಿ ಸ್ಟ್ರೆಂಗ್ತ್ ಒಂದು ಇರುವುದನ್ನು ಒಂದೂವರೆಯಷ್ಟು ಹೆಚ್ಚು ಮಾಡಬೇಕು. ಈ ಬಗ್ಗೆ ಸಮಾಜಕಲ್ಯಾಣ ಇಲಾಖೆಯವರು ಆದಷ್ಟು ಜಾಗ್ರತೆ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಇನ್ನು ನಿಮ್ನ ವರ್ಗದ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುವ ವಿಷಯದಲ್ಲಿ ಒಂದು ವಿಷಯವನ್ನು ಹೇಳಬೇಕಾಗಿದೆ. ನಿಮ್ನವರ್ಗದ ವಿದ್ಯಾರ್ಥಿಗಳು ಒಂದು ಸಾವಿರ ಜನ ಸ್ಕಾಲರ್‌ಷಿಪ್‌ಗೆ ಅರ್ಜಿಯನ್ನು ಸಲ್ಲಿಸಿದರೆ ಅದರಲ್ಲಿ 50—60 ವಿದ್ಯಾರ್ಥಿಗಳಿಗೆ ಮಾತ್ರ ಸ್ಕಾಲರ್‌ಷಿಪ್ ಮಂಜೂರಾಗುತ್ತಿದೆ. ನಿಜವಾಗಿಯೂ ಈ ವಿಚಾರದಲ್ಲಿ ನಾವು ತುಂಬ ವ್ಯಥೆ ಪಡಬೇಕಾಗಿದೆ. ಸರ್ಕಾರದವರು ನಿಮ್ನ ವರ್ಗದವರಲ್ಲಿ ಪ್ರಗತಿಯನ್ನು ನಿರೀಕ್ಷಿಸಬೇಕಾದರೆ ವಿದ್ಯಾಪ್ರಗತಿ ಒಂದರಿಂದಲೇ ಸಾಧ್ಯ, ಮತ್ತೆ ಯಾವುದರಿಂದಲೂ ಸಾಧ್ಯವಿಲ್ಲ ಎಂದು ನಾನು ಗಂಟಾಘೋಷವಾಗಿ ಹೇಳುತ್ತೇನೆ. ಹರಿಜನರಿಗೆ ಮನೆಕಟ್ಟಿಕೊಳ್ಳುವುದಕ್ಕೆ ಮರಗಳನ್ನು ಕೊಡುತ್ತೇವೆ, ನಾಟಾಗಳನ್ನು ಕೊಡುತ್ತೇವೆ, ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಹಣ ಕೊಡುತ್ತೇವೆ ಎಂದು ಹೇಳಿದರೆ ನಿಮ್ನವರ್ಗದವರ ಪ್ರಗತಿಯಾಗುವುದಿಲ್ಲ. ಅದೆಲ್ಲವೂ ಪ್ರಭಾವಶಾಲಿಗಳ ಕೈವಶವಾಗುತ್ತದೆ. ಈ ವ್ಯವಸ್ಥೆಯನ್ನು ಬೇಕಾದರೆ ನಿಲ್ಲಿಸಿ ನಿಮ್ನವರ್ಗದವರ ವಿದ್ಯಾಪ್ರಗತಿಗೆ ಹೆಚ್ಚಿನ ಹಣವನ್ನು ವ್ಯಯ ಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಅನೇಕ ನಿಮ್ನವರ್ಗದವರ ವಿದ್ಯಾರ್ಥಿನಿಲಯಗಳಲ್ಲಿ ಬೋರ್ಡರುಗಳಿಗೆ ಊಟದ ವ್ಯವಸೆಯಲ್ಲಿ ಬಟ್ಟೆಯ ವ್ಯವಸ್ಥೆಯಲ್ಲಿ, ಪುಸ್ತಕಗಳನ್ನು ಕೊಡತಕ್ಕ ವ್ಯವಸ್ಥೆಯಲ್ಲಿ ಇವರ ಪ್ರಗತಿ ಕುಂಠಿತವಾಗಿದೆ. ಆದ್ದರಿಂದ ನಿಮ್ನವರ್ಗದ ವಿದ್ಯಾರ್ಥಿಗಳಿಗೆ ಎಲ್ಲಾ ಸ್ಕೂಲು ಮತ್ತು ಕಾಲೇಜುಗಳಲ್ಲಿಯೂ ಪ್ರತಿಯೊಬ್ಬರಿಗೂ ಸ್ಕಾಲರ್‌ಷಿಪ್ ಸಿಕ್ಕುವ ಹಾಗೆ ವ್ಯವಸ್ಥೆ ಮಾಡಬೇಕು ಮತ್ತು ಊಟದ ವ್ಯವಸ್ಥೆ ಬಟ್ಟೆಯನ್ನು ಕೊಡುವ ವ್ಯವಸ್ಥೆ ಈ ಎಲ್ಲಾ ವ್ಯವಸ್ಥೆಯನ್ನು ಸರಿಪಡಿಪಿ ನಿಮ್ನವರ್ಗದವರ ಪ್ರಗತಿಗೆ ತಳಹದಿಯನ್ನು ಹಾಕುವ ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಿಮ್ನವರ್ಗದ ವಿದ್ಯಾರ್ಥಿನಿಯರಿಗೆ ವಿದ್ಯಾ ಇಲಾಖೆಯಲ್ಲಿ ಬಟ್ಟೆಗೋಸ್ಕರ ಸರ್ಕಾರದವರು 10 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದು ಸಾಕಾಗುವುದಿಲ್ಲ. ಅವರಿಗೆ ಕನಿಷ್ಟಪಕ್ಷ 30—40 ರೂಪಾಯಿಗಳನ್ನಾದರೂ ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಿದರೆ ಅವರಿಗೆ

ಅದರಿಂದ ಒಂದು ಉಪಯೋಗವಾಗುತ್ತದೆ ಎಂದು ನನ್ನ ಸೂಚನೆಯನ್ನು ನಮ್ಮ ಸಮಾಜ ಕಲ್ಯಾಣ ಶಾಖೆಯ ಸಚಿವರ ಗಮನಕ್ಕೆ ನಾನು ತರಬಯಸುತ್ತೇನೆ. ನಿಮ್ನವರ್ಗದವರ ವಿದ್ಯಾರ್ಥಿನಿಲಯಗಳನ್ನು ಕಟ್ಟುವಾಗ ಅವರು ಕಾಲು ಭಾಗ ಹಣವನ್ನು ಸರ್ಕಾರಕ್ಕೆ ಕೊಡಬೇಕೆಂದು ಒಂದು ನಿಯಮವನ್ನು ಹಾಕಿದ್ದಾರೆ, ಈ ಕಾಲು ಭಾಗದ ಹಣವನ್ನು ನಿಮ್ನವರ್ಗದವರು ಒದಗಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಅದನ್ನು 1/10 ಭಾಗಕ್ಕೆ ಇಳಿಸಬೇಕೆಂದು ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಿಮ್ನವರ್ಗದವರಿಗೆ ಕೆಲಸಗಳನ್ನು ಕೊಡತಕ್ಕ ವಿಷಯದಲ್ಲಿ 18 ಪರ್ಸೆಂಟ್ ರಿಜರ್ವೇಷನ್ ಇಟ್ಟಿದ್ದಾರೆ. ಅದನ್ನು ಕಡ್ಡಾಯವಾಗಿ ಅನುಸರಿಸುವಂತಾಗಬೇಕು. ನನಗೆ ಗೊತ್ತಿರುವ ಹಾಗೆ ಅನೇಕ ಜನ ನಿಮ್ನವರ್ಗದ ವಿದ್ಯಾರ್ಥಿಗಳು ಡಿಗ್ರಿಹೋಲ್ಡರುಗಳು, ಡಿಪ್ಲೋಮಾ ಹೋಲ್ಡರುಗಳು ಕೆಲಸ ಇಲ್ಲದೆ ಅಲೆಯುತ್ತಿದ್ದಾರೆ. ಇಂಥ ಒಂದು ಹೃದಯ ವಿದ್ರಾವಕವಾದ ದೃಶ್ಯವನ್ನು ನಾವು ಇವೊತ್ತು ಕಣ್ಣಾರೆ ನೋಡುತ್ತಿದ್ದೇವೆ. ಆದ್ದರಿಂದ ನಿಮ್ನವರ್ಗದವರಿಗೆ ಕಡ್ಡಾಯವಾಗಿ 18 ಪರ್ಸೆಂಟ್ ಕೆಲಸವನ್ನು ಕೊಡತಕ್ಕ ನೀತಿಯನ್ನು ಕಡ್ಡಾಯವಾಗಿ ಸರ್ಕಾರದವರು ಅನುಸರಿಸಬೇಕು ಎಂದು ನಾನು ಹೇಳುತ್ತೇನೆ. ನಿಮ್ನವರ್ಗದವರಲ್ಲಿ ಪ್ರಗತಿಯನ್ನು ನಿರೀಕ್ಷಿಸಬೇಕಾದರೆ ಅವರ ವಿದ್ಯಾಪ್ರಗತಿಗೆ ಸರ್ಕಾರದವರು ಹೆಚ್ಚಿನ ಸಹಾಯವನ್ನು ಮಾಡಬೇಕು. ವಿದ್ಯಾಪ್ರಗತಿಯ ಕಡೆಗೆ ಅವರ ದೃಷ್ಟಿಕೋಣವನ್ನು ಹರಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಸ್ವಾಮಿ! ನಾನು ಈ ಬೇಡಿಕೆಯನ್ನು ವಿರೋಧಿಸುತ್ತೇನೆ. ಮಹಾತ್ಮಗಾಂಧಿಯವರು ಈ ಜನಾಂಗಕ್ಕೆ ಹರಿಜನರು ಎಂದು ಕರೆದರು. ಕಳೆದ 20 ವರ್ಷಗಳ ಈ ಕಾಂಗ್ರೆಸ್ಸಿನವರ ಆಡಳಿತದಲ್ಲಿ ಹರಿಜನರಿಗೆ ಯಾವ ಅನುಕೂಲತೆಗಳೂ, ಸೌಲಭ್ಯಗಳೂ ದೊರೆತಿಲ್ಲ. ಇದು ನಮ್ಮ ಸ್ವಂತ ಸಹೋದರರಿಂದ, ನಮ್ಮ ದೇಶದವರಿಂದಲೇ, ನಮ್ಮ ಸ್ವಂತ ಜನರಿಂದಲೇ ಈ ಜನರಿಗೆ ಅನ್ಯಾಯಗಳು ನಡೆಯುತ್ತಾ ಬಂದಿವೆ. ಬಹು ಪುರಾತನ ಮನೋವೃತ್ತಿ ಇರುವ ಜನರು ಜಾತಿಭೇಧಗಳನ್ನೂ ವರ್ಣಬೇಧಗಳನ್ನೂ ಉಂಟು ಮಾಡಿ ಈ ಜನರನ್ನು ಕೆಳಗೆ ತುಳಿದಿದ್ದಾರೆ. ಮಹಾತ್ಮಗಾಂಧಿಯವರು ನಮ್ಮನ್ನು ಏತಕ್ಕೋಸ್ಕರ ಹರಿಜನರು ಎಂದು ಹೆಸರು ಕೊಟ್ಟರೋ ಎಂದು ಅವರು ಪರಿತಪಿಸುತ್ತಿದ್ದಾರೆ. ಎಂದರೆ ಅವರಿಗೆ ಶಾಪ ಹಾಕಬೇಕೆಂದು ಅಲ್ಲ. ಅವರನ್ನು ಜ್ಞಾಪಿಸಿಕೊಳ್ಳುತ್ತಾರೆ. ಹರಿಜನರಿಗೆ ಎಂದು ತಮ್ಮ ಹೆಸರಿನಲ್ಲಿ ಕೋಟಿ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ! ಅದರಿಂದ ತಮಗೆ ಯಾವ ಪ್ರಯೋಜನವೂ ಸಿಕ್ಕಲಿಲ್ಲ ಎಂದು ಆ ಜನರು ಪರಿತಪಿಸುತ್ತಿದ್ದಾರೆ. ಸ್ವಾರ್ಥಿಗಳು ಬಡ ಹರಿಜನರ ಹೆಸರನ್ನು ಹೇಳಿಕೊಂಡು, ಅವರನ್ನು ಉದ್ಧಾರ ಮಾಡುತ್ತೇವೆಂದು ಹೇಳಿ ಅವರಿಗೆ ಸಿಕ್ಕುವ ಸೌಲಭ್ಯಗಳನ್ನು ಇವರೇ ಪಡೆದುಕೊಳ್ಳುತ್ತಿದ್ದಾರೆ. ಮೇಲು ಜಾತಿ ಕೀಳುಜಾತಿ ಎಂದು ಹೇಳಿಕೊಂಡು ನಾವು ಹರಿಜನರ ಸೇವೆಯನ್ನು ಮಾಡುತ್ತೇವೆಂದು ಇವರು ಹೊರಟಿದ್ದಾರೆ. ನಿಜವಾಗಿಯೂ ಇವರು ಹರಿಜನರ ಪ್ರಗತಿಯ ಬಗ್ಗೆ ಮಾಡುತ್ತಿರುವ ಕೆಲಸ ಕಾರ್ಯಗಳನ್ನು ನೋಡಿದರೆ ಇವರು ಅಧಿಕಾರದಲ್ಲಿರುವುದಕ್ಕೆ ಅರ್ಹರಲ್ಲ. ಈಗ 20 ವರ್ಷಗಳಿಂದಲೂ ಇವರು ಇದೇ ಪರಂಪರೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಹರಿಜನರನ್ನು ಕೆಳಕ್ಕೆ ತುಳಿಯುವ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆಯೇ ಹೊರತು, ಇವರನ್ನು ಮೇಲಕ್ಕೆ ಎತ್ತುವ ಕೆಲಸವನ್ನು ಮಾಡಿಲ್ಲ. ಸಮಾಜ ಸೇವೆಯನ್ನು ಮಾಡುತ್ತೇವೆ, ಹರಿಜನರನ್ನು ಉದ್ಧಾರಮಾಡುತ್ತೇವೆಂದು ಹೇಳಿ ಬರೀ ಬಾಯಲ್ಲಿ ಹೇಳುತ್ತಾರೆಯೇ ಹೊರತು ಕಾರ್ಯತ: ಯಾವ ಕೆಲಸಗಳನ್ನೂ ಹರಿಜನರ ಪ್ರಗತಿಯ ಬಗ್ಗೆ ಮಾಡಿಲ್ಲ. ಮಹಾತ್ಮಾಗಾಂಧಿಯವರು ಹರಿಜನರು ಎನ್ನುವ ಶಬ್ದವನ್ನು ಏತಕ್ಕೆ ಹೇಳಿದರೋ ಎಂದು ನನ್ನ ಮನಸ್ಸಿಗೆ ನೋವಾಗುತ್ತದೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಪಾಪದ ನಗರಗಳು ಎಂದು ಹೇಳುವ ಹಾಗೆ ಇಲ್ಲಿ ಹರಿಜನರ ಕಾಲೋನಿಗಳನ್ನು ಮಾಡಿದ್ದೀರಿ. ಹಿಂದಿನಿಂದಲೂ ಸಮಾಜದ ಗುತ್ತಿಗೆದಾರರು ತಮ್ಮನ್ನು ತಾವು ದೇವರೆಂದು ಮಾಡಿಕೊಂಡು ಉಳಿದವರಿಗೆ ತಿರಸ್ಕರಿಸಿ ಮಾಡಿದ ಅನ್ಯಾಯಗಳ ಗುರುತು ಮುಂದಿನ ಜನಾಂಗದಲ್ಲಿ ಕೂಡ ಇವರೇ ಶೂದ್ರರು. ನಮ್ಮ ಪೂರ್ವ ಜನರು ಇವರನ್ನು ಹಾಗೆ ದೂರ ಇಟ್ಟು ಇವರನ್ನು ಮನುಷ್ಯರೆಂದು ಪರಿಗಣಿಸದೆ ಇದ್ದಾರೆ. ಮುಂದೆ ಬರುವ ಸಮಾಜ ಹೊಸಪೀಳಿಗೆಯು ಇವರನ್ನು ಪ್ರತ್ಯೇಕವಾಗಿ ದೂರ ಇಡಬೇಕೆಂದು Harijan colony ಸ್ಥಾಪಿಸುತ್ತಿದ್ದೀರಿ. It is a shameful memory of the feudal remnent blood are caste superiority, colour superiority, blood superiority, enough of disgrace. Free India cannot tolerate this perpetuation of torture concentration camps given them. Housing facility with other fellow citizens and not in isolation

(ಶ್ರೀ ವಿ. ಎನ್. ಪಾಟೀಲ್)

camps ಮಾಡಿದ್ದಾರೆ. ಆ ಜನರ ಪ್ರಗತಿಗೋಸ್ಕರ ಮಾಡುವುದು ಖಂಡಿತಾ ಅಲ್ಲ. ಇದು ಹಳೆಯ ಕಾಲದ ಭಿನ್ನ ಬೇಧಗಳನ್ನು ಮುಂದುವರಿಸಿಕೊಂಡು ಹೋಗುವ ದುರುದ್ದೇಶದಿಂದ ಮಾಡಿರುವ ಕಾಲೋನಿಗಳು.

ಇವತ್ತಿನ ದಿವಸ ಹರಿಜನರಿಂದ ಸೀಟಿಗಾಗಿ ಅರ್ಜಿ ಬಂದರೆ ಮೂರು ಇಂಚು ಹಿಂದೆ ಹಾಕುತ್ತಾರೆ. ಸೋಷಿಯಲ್ ವೆಲ್‌ಫೇರ್ ಅಫೀಸಿನಲ್ಲಿ ಇರುವಂತಹ ಅಧಿಕಾರಿಗಳು ಹೊಟ್ಟೆ ತುಂಬಿದವರಾಗಿದ್ದಾರೆ. ಅವರಿಗೆ ಹರಿಜನರ ಕಷ್ಟ ಗೊತ್ತಾಗುತ್ತಿಲ್ಲ. ಹರಿಜನರು ಸಹ ನಾಗರೀಕರು ಎಂದು ಇವರು ತಿಳಿದುಕೊಂಡಿಲ್ಲ. ಹರಿಜನರ ಉದ್ಧಾರಕ್ಕಾಗಿ ಶ್ರೀ ನಾರಾಯಣಗೌಡರು 3 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಅದರೆ ಈ ಹಣದಲ್ಲಿ ಮೂರು ಲಕ್ಷ ರೂಪಾಯಿಗಳು ಸಹ ಇವರಿಗೆ ಸಿಗುವುದಿಲ್ಲ. ಹರಿಜನರಿಗೆ ಜಮೀನು ಸಾಗುವಳಿ ಮಾಡಲು ಒಂದೊಂದು ಜೊತೆ ಎತ್ತುಗಳನ್ನು ಕೊಡಲಾಗಿದೆಯೆಂದು ಇಲ್ಲಿ ಸರ್ಕಾರದವರು ಹೇಳುತ್ತಾರೆ, ಅದರೆ ನಿಜವಾಗಿಯೂ ಆ ಎತ್ತುಗಳು ಆ ಊರಿನ ಶ್ರೀಮಂತರ ಮನೆಯಲ್ಲಿ ಇವೆ. ಆ ಶ್ರೀಮಂತರು ಈ ಎತ್ತುಗಳನ್ನು ತಮ್ಮ ಜಮೀನುಗಳಲ್ಲಿ ಕೆಲಸ ಮಾಡಲು ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಚುನಾವಣೆ ಸಮಯದಲ್ಲಿ ಹರಿಜನರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ಹೇಳಿಕೊಂಡು ಗೆದ್ದು ಬಂದು ಅನಂತರ ಅವರನ್ನು ಅಮೇರಿಕಾದಲ್ಲಿ ಅಲ್ಲಿಯ ಜನರು ನಿಗ್ರೋಗಳನ್ನು ಕಾಣುವ ರೀತಿಯಲ್ಲಿ ಇಲ್ಲಿಯ ಹರಿಜನರನ್ನು ಕಾಣುವುದಕ್ಕೆ ಪ್ರಾರಂಭ ಮಾಡುತ್ತೀರಿ. ಇವತ್ತಿನ ದಿವಸ ನಾಯಿಗಳಿಗೆ, ದನಗಳಿಗೆ ಒಂದು ಕಿಮ್ಮತ್ತು ಇದೆ. ಇವುಗಳಿಗೆ ಇರುವ ಒಂದು ಕಿಮ್ಮತ್ತು ಹರಿಜನರಿಗೆ ಇಲ್ಲವಾಗಿದೆ. ಭೂದಾನದ ಅಂಗವಾಗಿ ನೂರಾರು ಎಕರೆಗಳು ದಾನವಾಗಿ ಶ್ರೀಮಂತರಿಂದ ಬಂತು. ಆ ಶ್ರೀಮಂತರು ಒಳ್ಳೆಯ ಜಮೀನುಗಳನ್ನು ತಾವೇ ಇಟ್ಟುಕೊಂಡು ಬಂಜರು ಭೂಮಿಯನ್ನು ದಾನವಾಗಿ ಕೊಟ್ಟರು. ಈ ರೀತಿ ದಾನವಾಗಿ ಕೊಟ್ಟು ದಾನಶೂರಕರ್ಣ ಎಂದು ಹೆಸರು ಪಡೆದುಕೊಂಡರು. ಈ ರೀತಿ ಬಂದ ಜಮೀನುಗಳನ್ನು ಒಂದೆರಡು ಎಕರೆಗಳಂತೆ ಹರಿಜನರಿಗೆ ಸರ್ಕಾರದವರು ಹಂಚಿದರು. ಈ ರೀತಿ ಹಂಚಿದ ಭೂಮಿಯನ್ನು ಸಾಗುವಳಿಕೊಡಲು ಎತ್ತುಗಳನ್ನು ಕೊಟ್ಟಾಗ, ಆ ಎತ್ತುಗಳನ್ನು ಶ್ರೀಮಂತರೇ ಉಪಯೋಗಿಸಿಕೊಂಡರು. ಈ ಪ್ರಕಾರ ಹರಿಜನರ ಉದ್ಧಾರವಾಗುತ್ತಿದೆ. ತಕ್ಕಡಿಯನ್ನು ಸಮವಾಗಿ ಹಿಡಿಯುವುದಕ್ಕೆ ನ್ಯಾಯಾಸ್ಥಾನ ಇದೆ. ಅದರೆ ಆ ನ್ಯಾಯಾಸ್ಥಾನದಿಂದ ಕೂಡ ಈ ಹರಿಜನರ ಉದ್ಧಾರವಾಗುತ್ತಿಲ್ಲ. ಇವತ್ತಿನದಿವಸ ಜನರಲ್ಲಿ ಲಾ ಅಂಡ್ ಅರ್ಡರ ಬಗ್ಗೆ ವಿಶ್ವಾಸ ತಪ್ಪಿಹೋಗುತ್ತಿದೆ. ಪ್ರತಿಯೊಂದು ವಿಚಾರದ ಬಗ್ಗೆಯೂ ಕೂಡ ಮಾನ್ಯ ಗೃಹಮಂತ್ರಿಗಳು ಕೇಸು ಕೋರ್ಟಿನಲ್ಲಿರುವುದರಿಂದ ಸರ್ಕಾರದವರು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ನಮ್ಮ ಕಡೆ ಕೆಲವು ಹರಿಜನರು 50ವರ್ಷಗಳಿಂದ ವಂಶ ಪರಂಪರೆಯಿಂದ ಸಾಗುವಳಿ ಮಾಡಿದ ಕೆಲವು ಭೂಮಿಗಳು ನೂರಾರು ಎಕರೆ ಜಮೀನು ತಮ್ಮದೇ ಎಂಬ ಭಾವನೆಯಿಂದ ಸಾಗುವಳಿ ಮಾಡುತ್ತ ಬಂದು 50 ವರ್ಷದ possession proof ಕೊಟ್ಟು Special Deputy Commissioner ಕಚೇರಿಯಿಂದ ಕೇಸ್ ಗೆದ್ದರು. 1967ರಲ್ಲಿ ಕೂಡ ಅವರ ಹೆಸರಿನಲ್ಲಿ ಭೂಮಿ ಬರೆದಿದ್ದು ಇದ್ದರೂ 68ರ ಕಾಗದಗಳು ಮೋಸದಲ್ಲಿ ತನ್ನ ಹೆಸರಿನಲ್ಲಿ ಮಾಡಿಸಿಕೊಂಡು ಗೂಂಡಾಗಳು ಹಾಗು ಪೋಲೀಸರ ಸಹಾಯ ಪಡೆದುಕೊಂಡು ಕಾಂಗ್ರೆಸ್ ಹಣವಂತರಲ್ಲೂ ಇಡೀ ವರ್ಷವೆಲ್ಲಾ ಶ್ರಮಪಟ್ಟು ಬೆಳೆಸಿಕೊಂಡು ಬಂದ ಬೆಳೆಗಳನ್ನು ಲೂಟಿ ಮಾಡಿಕೊಂಡು ಹೋದರು ಕೇಳುವವರಿಲ್ಲದಂತಾಗಿದೆ. ಪೇಡಂ ತಾಲ್ಲೂಕದಲ್ಲಿ ಈ ಜಮೀನುಗಳು ಇವರ ಹೆಸರಿಗೆ ಆಗಿ, ಸಾಗುವಳಿ ಮಾಡಿ ಬೆಳೆ ಬಂದು ನಿಂತಾಗ, ಅಲ್ಲಿಯ ಕೆಲವು ಶ್ರೀಮಂತರು ನಾಲ್ಕು ಜನ ಪೋಲೀಸರನ್ನು ಕರೆದುಕೊಂಡು ಹೋಗಿ ಬೆಳೆಯನ್ನೆಲ್ಲಾ ಲೂಟಿ ಮಾಡಿಕೊಂಡು ಹೋಗುತ್ತಿದ್ದಾರೆ. ಈ ಬಗ್ಗೆ ಆ ಹರಿಜನರು ಏನು ಕ್ರಮ ತೆಗೆದುಕೊಳ್ಳುವುದಕ್ಕೂ ಸಹ ಸಾಧ್ಯವಾಗುತ್ತಿಲ್ಲ. ಈ ರೀತಿಯಾಗಿ ಹರಿಜನರ ಉದ್ಧಾರವಾಗುತ್ತಿದೆ. ಕೆಳಗೆ ಬಿದ್ದಿರತಕ್ಕಂಥ ಇವರನ್ನು ಮೇಲೆ ತರಲು ಸರ್ಕಾರದವರು ನಿಜವಾಗಿಯೂ ಯಾವ ಕ್ರಮವನ್ನು ಕೈಕೊಳ್ಳುತ್ತಿಲ್ಲ. ಹರಿಜನರ ಅಭಿವೃದ್ಧಿಗಾಗಿಯೇ ಇರತಕ್ಕಂಥ ಅನೇಕ ಲಿಟರೇಚರ್‌ಗಳನ್ನು ನಾನು ಓದಿದ್ದೇನೆ. ಅದು ಎಲ್ಲಾ ಬರೀ ಪ್ರಾಪಗ್ಯಾಂಡವೇ ಹೊರತು ಯಾವ ರೀತಿಯಿಂದಲೂ ಸಹ ಇವರ ಅಭಿವೃದ್ಧಿಯಾಗುತ್ತಿಲ್ಲ. ಅವರೇ, ಬೇರೆ, ನಾವೇ ಬೇರೆ ಎಂಬ ಭಾವನೆ ಇನ್ನೂ ಬೆಳೆದುಕೊಂಡು ಹೋಗುತ್ತಿದೆ. ಕಳೆದ 2 ಸಾವಿರ ವರ್ಷಗಳಿಂದಲೂ ಸಹ ಇವರ ಮೇಲೆ ಆಗುತ್ತಿರುವ ಅನ್ಯಾಯ ಕೊನೆಯಾಗಲಿಲ್ಲ. ಈಗ ಕಾಂಗ್ರೆಸ್ ರಾಜ್ಯದಲ್ಲಿ ಇವರ ಅಭಿವೃದ್ಧಿಯಾಗಿಲ್ಲ. ಆದ್ದರಿಂದ ನಾನು ಶ್ರೀ ನಾರಾಯಣಗೌಡರವರನ್ನು ಕೇಳಿಕೊಳ್ಳುವುದು ಇಷ್ಟೇ, ತಾವು ಈ ಖಾತೆಗೆ ರಾಜೀನಾಮೆಯನ್ನು ಕೊಟ್ಟು ಬೇರೆ ಯಾವುದಾದರೂ ಒಂದು ಖಾತೆಯನ್ನು ತೆಗೆದುಕೊಳ್ಳಿ. ಯಾವ ಒಂದು ಜನಾಂಗದ ಮೇಲೆ ಇಷ್ಟೊಂದು ಅನ್ಯಾಯಗಳು ನಡೆಯುತ್ತಿದೆಯೋ, ಅದನ್ನು ಸರಿಪಡಿಸಲು ಆ ಜನಾಂಗದವರೇ

ಒಬ್ಬರು ಮಂತ್ರಿಗಳಾಗಲಿ. ಅವರಿಗಾದರೆ ಹರಿಜನರ ಕಷ್ಟಗಳು ತಿಳಿದಿರುತ್ತದೆ. ಇವರ ಅಭಿವೃದ್ಧಿಯನ್ನು ಯಾವ ರೀತಿ ಮಾಡಬೇಕು ಎಂಬ ಬಗ್ಗೆ ಒಂದು ಕಮೀಷನ್ ನೇಮಕ ಮಾಡಬಹುದು. ಅವರು ಸಹ ಹರಿಜನರ ಬಗ್ಗೆ ನಡೆಯುತ್ತಿರುವ ಅನ್ಯಾಯಗಳು ಮತ್ತು ಅವರ ಅಭಿವೃದ್ಧಿಯ ಬಗ್ಗೆ ಕೈಕೊಳ್ಳಬೇಕಾದ ಕಾರ್ಯಕ್ರಮಗಳನ್ನು ತಿಳಿಸಬಹುದು. ಆದರೆ ಅದರಿಂದ ಯಾವ ಒಂದು ಪ್ರಯೋಜನವೂ ಸಹ ಆಗುವುದಿಲ್ಲ. ಇದೇ ಉದ್ದೇಶಕ್ಕಾಗಿ ರಚನೆಯಾದಂಥ ಅನೇಕ ಕಮೀಷನ್‌ಗಳು ತಮ್ಮ ತಮ್ಮ ವರದಿಯನ್ನು ಕೊಟ್ಟಿದ್ದರೂ ಸಹ, ಆ ವರದಿಯ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನೂ ಇದುವರೆಗೆ ತೆಗೆದುಕೊಂಡಿಲ್ಲ. ಈ ರೀತಿ ಕಮೀಷನ್ ನೇಮಕ ಮಾಡುವ ಬದಲು ಹಳ್ಳಿಗಳಿಗೇ ಹೋಗಿ ಹರಿಜನರ 5—6 ಮನೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮಂತ್ರಿಗಳು ನೋಡಿದರೆ ಅವರ ಕಷ್ಟ ಏನೆಂಬುದು ಗೊತ್ತಾಗುತ್ತದೆ. ಹಳ್ಳಿಗಳಲ್ಲಿ ಹರಿಜನರನ್ನು ಗುಡಿಗಳಿಗೆ ಹೋಗುವುದಕ್ಕೆ ಬಿಡುತ್ತಿಲ್ಲ, ಸವರ್ಣೀಯ ಹಿಂದುಗಳ ಕ್ಷುಲ್ಲಕ ಮನೋವೃತ್ತಿಯಿಂದ ಮುಕ್ತಿಗೊಳ್ಳುವ ಆಕಾಂಕ್ಷೆಯಿಂದ ಎಷ್ಟು ಹರಿಜನರು ಬೌದ್ಧಧರ್ಮ ಸೇರಿದರು, ಇಸ್ಲಾಂ ಹಾಗು ಕ್ರೈಸ್ತ ಮತವನ್ನು ಅಪ್ಪಿಕೊಂಡರು, ಬಸವೇಶ್ವರರ ಕಾಲದಲ್ಲಿ ಕಾಯಕವೇ ಕೈಲಾಸವೆಂದು ಸಕಲ ಧರ್ಮಗಳೂ ವರ್ಣಗಳೂ ಸುಳ್ಳೆಂದು ಸಾರಿ ಸಮಾನತೆ ತರಲು ಪ್ರಯತ್ನ ಪಟ್ಟರು. ಆದರೆ ವರ್ಗ ರಹಿತ-ತರವೆ ಇದ್ದುದಕ್ಕಾಗಿ ವರ್ಣ ರಹಿತ ಸಮಾಜ ಜನ್ಮತಾಳಲಿಲ್ಲ. ಹರಿಜನರ ಆರ್ಥಿಕ ಅಭಿವೃದ್ಧಿ ಆಗಲೇಬೇಕು. ಬಾವಿಗಳಲ್ಲಿ ನೀರು ಸೇದುವುದಕ್ಕೆ ಬಿಡುತ್ತಿಲ್ಲ. ಈ ರೀತಿ ನಿರ್ಬಂಧ ಹಾಕುವವರನ್ನು ಹಿಡಿದು ಅಂತಹವರ ಮೇಲೆ ಕ್ರಿಮಿನಲ್ ಕೇಸ್ ಹಾಕಬಹುದೆಂದು ಕಾನೂನು ಇದೆ. ಆದರೆ ಆ ಕಾನೂನು ಕೇವಲ ಪುಸ್ತಕದಲ್ಲಿದೆಯೇ ಹೊರತು ಕೃತಿಯಲ್ಲಿ ಇನ್ನೂ ಬಂದಿಲ್ಲ. ಶ್ರೀ ಅರಕೇರಿಯವರು ತಮ್ಮ ಭಾಷಣದಲ್ಲಿ ಹರಿಜನರ ಉದ್ಧಾರದ ಬಗ್ಗೆ ಬಹಳವಾಗಿ ಮುತ್ತಿನಂತಹ ಮಾತನಾಡಿದರು. ಬಸವಣ್ಣನವರ ವಚನಗಳನ್ನು ಸಹ ಹೇಳಿದರು. ಡಾಕ್ಟರ್ ಅಂಬೇಡ್ಕರ್ ಅವರು ಹರಿಜನರ ಬಗ್ಗೆ ಏನು ಹೇಳಿದರು, ಅವರ ಬಗ್ಗೆ ಏನು ಕೆಲಸ ಮಾಡಿದರು ಎಂಬ ಬಗ್ಗೆ ಸಹ ಶ್ರೀ ಅರಕೇರಿಯವರು ಹೇಳಿದರು. ಬಸವಣ್ಣನವರು ಮತ್ತು ಅಂಬೇಡ್ಕರ್ ಅವರು ಹೇಳಿದ ವಿಚಾರಗಳು ಪುಸ್ತಕದಲ್ಲಿ ಇವೆಯೇ ಹೊರತು ಸಮಾಜದಲ್ಲಿ ಅಗ್ರಗಣ್ಯರಾದ ಸ್ವಾರ್ಥಿಗಳು ಇವುಗಳನ್ನು ಕಾರ್ಯರೂಪಕ್ಕೆ ತರಗೊಡಲಿಲ್ಲ ಜಾರಿಗೆ ಬರಲಿಲ್ಲವೆಂದು ಧೈರ್ಯವಾಗಿ ಹೇಳಬಹುದು. ಇವರ ಹೆಸರಿನಲ್ಲಿ ಹರಿಜನರಿಗೆ ಅನ್ಯಾಯ ಮಾಡಬೇಡಿ. ಚುನಾವಣೆಯ ಸಮಯದಲ್ಲಿ ನಮ್ಮ ಬಿದರ್ ಜಿಲ್ಲೆಯಲ್ಲಿ ಕಾಂಗ್ರೆಸ್‌ನೊಳಗೇ ಎರಡು ಪಾರ್ಟಿಗಳಾಗಿ, ಒಂದು ಪಾರ್ಟಿಯವರು ಹರಿಜನರ ಬಗ್ಗೆ ವಿಶ್ವಾಸವಿದ್ದವರು ಎಂದು ತೋರಿಕೆಗಾಗಿ ಅವರಿಗಾಗಿ 50 ಗುಡಿಸಲುಗಳನ್ನು ಹಾಕಿಸಿಕೊಟ್ಟರು. ಬೇರೆ ಗ್ರಾಮದ ಜನತೆ ಇಚ್ಛೆಯ ವಿರೋಧ ಬೇರೆ ಗ್ರಾಮದ ಗ್ರಾಯರಾಣಿ ಜಾಗದಲ್ಲಿ ಮತ್ತೊಂದು ಪಾರ್ಟಿಯವರು ಹೋಗಿ ಆ 50 ಗುಡಿಸಲುಗಳನ್ನು ಸುಟ್ಟು ಹಾಕಿದರು. ಇದರಿಂದ ಹರಿಜನರ ಬಗ್ಗೆ ಈ ಕಾಂಗ್ರೆಸ್‌ನವರಿಗೆ ಎಷ್ಟೊಂದು ಅಭಿಮಾನವಿದೆಯೆಂಬುದು ಗೊತ್ತಾಗುತ್ತದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ—ಗ್ರಾಮಾಂತರ).—ಕೇರಳಾ ರಾಜ್ಯದಲ್ಲಿ ಕಮ್ಯುನಿಸ್ಟ್ ಸರ್ಕಾರವಿದೆ. ಆ ಸರ್ಕಾರದವರು ಹರಿಜನರ ಉದ್ಧಾರದ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಹೇಳುತ್ತೀರಾ?

ಶ್ರೀ ಬಿ. ಎನ್. ಪಾಟೀಲ್.—ನಾನು ಕೇರಳಾ ರಾಜ್ಯದಲ್ಲಿ ಮಂತ್ರಿಯಾಗಿದ್ದರೆ, ನೀವು ಅಲ್ಲಿ ಎಂ. ಎಲ್. ಎ. ಆಗಿದ್ದರೆ ಈ ಬಗ್ಗೆ ಉತ್ತರ ಕೊಡುತ್ತಿದ್ದೆ. ಆದರೆ ಈಗ ನಾನು ಮೈಸೂರು ಜನತೆ ಪ್ರತಿನಿಧಿಯಾಗಿ ಮೈಸೂರಿನಲ್ಲಿ ಹರಿಜನರ ಮೇಲಾಗುವ ಅನ್ಯಾಯ ಒತ್ತಿ ಹೇಳಲು ಮೈಸೂರು ರಾಜ್ಯದಲ್ಲಿದ್ದೇನೆ. ಆದ್ದರಿಂದ ಇಲ್ಲಿರುವ ಹರಿಜನರ ಬಗ್ಗೆ ಮಾತನಾಡುತ್ತಿದ್ದೇನೆ. ಮಾನ್ಯ ಅಗ್ನಿಹೋತ್ರಿಯವರು ನಾನು ಕಮ್ಯುನಿಷ್ಟ ಇರುವದರಿಂದ ಕೇರಳದ ಪ್ರತಿನಿಧಿಯಾಗಿ ತಿಳಿದರೆ ಕಷ್ಟ. ನಮ್ಮ ರಾಜ್ಯದಲ್ಲಿ ಹಗಲು ರಾತ್ರಿ ಇವರ ಬಗ್ಗೆ ಅನ್ಯಾಯಗಳು ನಡೆಯುತ್ತಿವೆ. ಹರಿಜನ ವಿದ್ಯಾರ್ಥಿಗಳು ಇತರೇ ವಿದ್ಯಾರ್ಥಿಗಳ ಜೊತೆಯಲ್ಲಿ ಇರುವುದಕ್ಕೆ ಇವತ್ತಿಗೂ ಅವಕಾಶ ಕೊಡುತ್ತಿಲ್ಲ. ಅವರಿಗಾಗಿ ಬೇರೆ ಹಾಸ್ಟೆಲ್‌ಗಳನ್ನು ಕಟ್ಟಿಸಿ ಬೇರೆ ಕಡೆ ಇಟ್ಟಿದ್ದಾರೆ. ಅವರೇ ಬೇರೆ ಎನ್ನುವ ಭಾವನೆಯನ್ನು ತೋರುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಮೂಲಕ ಇವರ ಉದ್ಧಾರಕ್ಕಾಗಿ ಕೆಲವೊಂದು ಯೋಜನೆಗಳನ್ನು ತಂದುಬಿಟ್ಟ ಮಾತ್ರಕ್ಕೆ ಇವರ ಉದ್ಧಾರವಾಗುವುದಿಲ್ಲ. ಆ ಯೋಜನೆಗಳನ್ನು ಕೃತಿಯಲ್ಲಿ ಮಾಡಿ ತೋರಿಸಬೇಕು. ಹುಮ್ನಾಬಾದ್‌ನಲ್ಲಿ ನಾಲ್ಕು ಜನ ಹರಿಜನರಿಗೆ ಅಲ್ಲಿಯ ಹೈಸ್ಕೂಲ್‌ನಲ್ಲಿ ಸೀಟ್ ಕೊಡದೆ ಅವರು ಬೆಂಗಳೂರಿಗೆ ಬಂದು ಸೇರಿದ್ದಾರೆ. ಇವರಿಗೆ ಹುಮ್ನಾಬಾದಿನಲ್ಲಿಯೇ ಹಾಸ್ಟಲಿನಲ್ಲಿ ಸೀಟ್‌ಗಳನ್ನು ಕೊಡಿಸಬೇಕೆಂದು ಹಿರೇಲಪುರ ಗ್ರಾಮದ ಶ್ರೀ ಕಾಶೀನಾಥ ಎಂಬ ಕುರುಡರಾದಂಥ ಗಾಯನ ಮಾಸ್ತರ ಹಗಲು ರಾತ್ರಿ ತನ್ನ ಕಣ್ಣುಗಳಿಲ್ಲದಿದ್ದರೂ ದಲಿತ ವರ್ಗದವರೇ ನನ್ನ ಕಣ್ಣು ಎಂದು ಹೇಳುವ ಸೋಷಿಯಲ್ ವರ್ಕರ್ ಬೆಂಗಳೂರಿಗೆ ಬಂದು ಸಂಬಂಧ

(ಶ್ರೀ ವಿ. ಎನ್. ಪಾಟೀಲ್)

ಪಟ್ಟವರೊಡನೆ ಮಾತನಾಡಿದರು. ಈ ನಾಲ್ಕು ಜನ ವಿದ್ಯಾರ್ಥಿಗಳು ಚುನಾವಣೆಯ ಸಮಯದಲ್ಲಿ ರಿಪಬ್ಲಿಕನ್ ಪಾರ್ಟಿಯ ಪರವಾಗಿ ಕೆಲಸ ಮಾಡಿದ್ದರಿಂದ ಅವರಿಗೆ ಸೀಟು ಕೊಡಬಾರದೆಂದ ಹವ್ಮೊ ಬಾಧಿತ ತನ್ನನ್ನ ಹರಿಜನರ ನೇತೃ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಮುಖಂಡರುಗಳು ಸರ್ಕಾರಕ್ಕೆ ಈ ಬಡಹರಿಜನ ವಿದ್ಯಾರ್ಥಿಗಳಿಗೆ ಹಾಸ್ಟಲಿನಲ್ಲಿ ಸೀಟು ಕೊಡದೆ ಎರಡು ತಿಂಗಳು ಅವರ ಶಿಕ್ಷಣ ಹಾಳುಮಾಡಿ ಅವರನ್ನು ಅಲ್ಲಿಂದ ತೆಗೆಯುವ ಸಲುವಾಗಿ ಅಲ್ಲಿನ Block Development Officerನ ಮೇಲೆ ಒತ್ತಾಯ ತಂದು ಇನ್ನಿತರ ಅಧಿಕಾರಿಗಳಿಗೆ ತಿಳಿಸಿದ್ದರಿಂದ ಈ 4 ಜನ ವಿದ್ಯಾರ್ಥಿಗಳು ಬೆಂಗಳೂರಿಗೆ ಬಂದು ಸೀಟಿನ ಸಲುವಾಗಿ ಹೋರಾಡ ಬೇಕಾಯಿತು. ಈ ರೀತಿ ಹರಿಜನರ ಉದ್ಧಾರ ನಡೆಯುತ್ತಿದೆ ಇದೇ ರೀತಿ ರಾಜಾಜಿನಗರದ ವಿ.ವಿ. ಹೈಸ್ಕೂಲಿನಲ್ಲಿ ಒಬ್ಬ ಹರಿಜನ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಲು ಫಾರಂ ಭರ್ತಿ ಮಾಡಿಕೊಟ್ಟಿದ್ದ. ಅವರೆ ಅಲ್ಲಿ ಕೆಲಸ ಮಾಡುವ ಕ್ಲಾರ್ಕ್ ಈ ಹುಡುಗನನ್ನು ಒಂದು ವರ್ಷ ಮುಟ್ಟ ಹಾಕಬೇಕೆಂದು ಕೊಂಡು ರಶೀದಿಯನ್ನು ಕೊಡದೆ ಪರೀಕ್ಷೆ ಸಮಯಕ್ಕೆ ಹಾಲ್ ಟಿಕೆಟ್ ಬರದಂತೆ ಮಾಡಿದ. ಆ ಹುಡುಗ ಎಕ್ಸಾಮಿನೇಶನ್ ಹಾಲ್‌ಗೆ ಹೋಗಿ ವಿಚಾರಿಸಿದಾಗ ಅವರು ರಶೀದಿ ಇಲ್ಲದಿರುವುದರಿಂದ ನಾವೇನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆ ಹುಡುಗನು ಮತ್ತು ಆ ಹುಡುಗನ ತಂದೆಯವರು ಪ್ರಮಾಣ ಪತ್ರವನ್ನು ಬರೆದು ಕೊಡುತ್ತೇವೆಂದು ಹೇಳಿದರೂ ಸಹ ಒಪ್ಪಲಿಲ್ಲ. ರೂಲ್ ಬಿಟ್ಟು ಹೇಗೆ ಹೋಗೋಣ ಎನ್ನುತ್ತಾರೆ ಚೀಫ್ Controller of Exam. ಇದು ಯಾವ ಪರಿಣಾಮ ಉಂಟು ಮಾಡುವುದು? ಈ Rule ಪಾಲನೆ ಮಾಡಿ ವಿದ್ಯಾರ್ಥಿಯನ್ನು ತುಳಿಯುವ ಸಮಾಜದ ನಿಯಮಗಳು ಆ ಬಡ ದುರ್ದೈವಿ ಹರಿಜನ ವಿದ್ಯಾರ್ಥಿಯ ಮೇಲೆ ಕಾಯಿದೆಗಳ Rule ಗಳು ಮಾನವತ್ವವನ್ನು ರಾಕ್ಷಸಿ ಮನೋ ವೃತ್ತಿಯುಳ್ಳವರಿಂದ ತುಳಿಯಲ್ಪಡುತ್ತಿರುವವರ ಹಲ್ಲು ಮುರಿದು ಶೋಷಣೆಗೆ ಗುರಿಯಾದವರನ್ನು ರಕ್ಷಣೆ ಮಾಡುವ ಬದಲಿಗೆ ಅವರನ್ನು ತುಳಿಯುವುದು. ಪ್ರಜಾಪ್ರಭುತ್ವದಲ್ಲಿ ಈ ರೀತಿ ನಡೆಯುತ್ತಿದೆ. ಹಳ್ಳಿಗಳ ಕಡೆ ಹರಿಜನರಿಗೆ ರಕ್ಷಣೆ ಎನ್ನುವುದೆ ಇಲ್ಲವಾಗಿದೆ. ಇವರ ಪರ ಮಾತನಾಡುವವರೂ ಸಹ ಯಾರೂ ಕೇಳುವವರಿಲ್ಲವಾಗಿದೆ ಈ ರೀತಿ ಅನ್ಯಾಯಗಳು ಈ ಕಾಂಗ್ರೆಸ್ ಸರ್ಕಾರದಲ್ಲಿ ನಡೆಯುತ್ತಿದೆ. ಪ್ರಜಾಪ್ರಭುತ್ವ ಬಂದ ಮೇಲೆ ತಮಗೆ ಸ್ವಾತಂತ್ರ್ಯ ಬಂದಿತೆಂದು ತಿಳಿದ ಇವರು ಇದುವರೆಗೆ ಶಾಂತಿಯನ್ನು ಕಾಣದಾಗಿದ್ದಾರೆ. ಹಳ್ಳಿಗಳ ಕಡೆ ಇವರನ್ನು ಶ್ಯಾನುಭೋಗರು ಬಹಳ ಕೀಳು ಮಟ್ಟದಲ್ಲಿ ಕಾಣುತ್ತಿದ್ದಾರೆ. ಹರಿಜನರು ಯಾವ ರೀತಿಯಿಂದಲೂ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ನಾನು ಬಿಜಾಪುರ ಗುಲ್ಬರ್ಗಾ ಮತ್ತು ರಾಯಚೂರ್ ಜಿಲ್ಲೆಯ ವಿಚಾರ ಹೇಳಬಹುದಾದರೆ, ಅಲ್ಲಿ 100ಕ್ಕೆ 90 ಭಾಗ ಜನರು 150 ವರ್ಷಗಳಿಂದಲೂ ಅಲ್ಲಿ ಕೆಲವು ಪರಂಪರಾ ಪ್ರೊಕ್ತ ಗೋಮಾಳ, ಬಂಜರು, ಜಮೀನುಗಳನ್ನು ಅನುಭವಿಸುತ್ತಿದ್ದಾರೆ. ಆದರೆ ಲ್ಯಾಂಡ್ ರಿಕಾರ್ಡ್ಸ್ ಅವರ ಹೆಸರಿಗಿಲ್ಲ, ಅದು ದೇಶಮುಖರ ಹೆಸರಿನಲ್ಲಿ, ಗೌಡರ ಹೆಸರಿನಲ್ಲಿ ಇದೆ. ಇದನ್ನು ಮಾನ್ಯ ಮಂತ್ರಿಯವರು ಗಮನಿಸಬೇಕು grant the occupancy rights of those land, which they are cultivating. ಇವತ್ತು ಉಳುವವನೇ ಜಮೀನಿನ ಒಡೆಯನಾಗ ಬೇಕು. ಅವನಿಗೆ ಲ್ಯಾಂಡ್ ಕೊಡಿ. ಅಧಿಕಾರ ಕೊಡಿ. ಸೇಡಂ ತಾಲ್ಲೂಕಿನ ವಿಚಾರದಲ್ಲಿ ಒಂದು ಶಾರ್ಟ್ ನೋಟೀಸ್ ಕೊಟ್ಟರೆ, ಅದಕ್ಕೆ ಹೆಲ್ತ್ ಮಿನಿಸ್ಟರ್ ಏನೋ ಒಂದು ಬರೆದಿಟ್ಟರು. ಅಲ್ಲಿ ಒಬ್ಬ ದೇಶಮುಖ ಲಾ ಅಂಡ್ ಆರ್ಡರ್, ಕಾಯಿದೆಯನ್ನು ಕಾನೂನನ್ನು ಕೈಯೊಳಗೆ ತೆಗೆದು ಕೊಂಡ, ಅದನ್ನು ಕಾಲಿನ ಚಪ್ಪಲಿ ಎಂದು ತಿಳಿದುಕೊಂಡು, ಇವನು ಹಣದ ಪ್ರಭಾವದಿಂದ ಏನೇನು ಮಾಡುತ್ತಿದ್ದಾನೆ; ಅಂಥವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಕ್ರಮ ತೆಗೆದುಕೊಂಡರೆ ಏನೋ ಒಂಥರ ಬಡ ಹರಿಜನರಿಗೆ ಕ್ಷಣಿಕ ಕೊಟ್ಟಂತೆ ಆಗುತ್ತದೆ. ಇವತ್ತು ಸಮಾಜದಲ್ಲಿ ಯಾರು ಹಿಂದುಳಿದಿದ್ದಾರೋ, ಅಂಥವರಿಗೆ ನ್ಯಾಯ ದೊರಕಿಸಿ ಕೊಡುವುದಕ್ಕೆ ಸಮಾನತೆಯನ್ನು ತರುವುದಕ್ಕೆ ನಿಜವಾಗಿಯೂ ಸರ್ಕಾರದವರು ಪ್ರಯತ್ನ ಮಾಡಬೇಕು. ಆದರೆ ಇವತ್ತಿನ ಪರಿಸ್ಥಿತಿ ಏನು, ಹಲವು ರಾಕ್ಷಸ ಜಮೀನುಗಳನ್ನು ದಬ್ಬಾಳಿಕೆಯಿಂದ ಮತ್ತಾಯದಿಂದ ಬಿಡಿಸುತ್ತಿದ್ದಾರೆ. ಇವತ್ತು ಹಳ್ಳಿಗಳಲ್ಲಿನ ರಕೆ 90 ನ ಬಡವರಿದ್ದಾರೆ. ಹರಿಜನರಲ್ಲಿ ಯಾರಾದರೂ ಲಕ್ಷಾಧೀಶ ದ್ದಾರೆ, ಕೋಟ್ಯಾಧಿಶರಿದ್ದರೆ ಅಂಥವರಿಗೆ ಸಲಾಮು ಹಾಕುತ್ತಿದರು. ಇವತ್ತು ಎಕನಾಮಿಕ್ ಡಿಸ್ಪಾರಿಟಿ ಇದೆ, ಅದು ಕೆಳವರ್ಗದವರನ್ನು ತುಳಿಯುತ್ತಿದೆ. ಇಂಥ ಎಕನಾಮಿಕ್ ಡಿಸ್ಪಾರಿಟಿ ಯನ್ನು ತೆಗೆದು ಹಾಕಬೇಕು. ಇಲ್ಲದಿದ್ದರೆ, ಬಡಜನರಿಗೆ ಒಂದು ನಿರಾಶೆ ಬರುತ್ತದೆ. ಆದರೆ ಈ ಕಾಂಗ್ರೆಸ್ಸಿನವರು 20 ವರ್ಷವಾದರೂ ಒಂದು ಸಮಾನತೆಯನ್ನು ತಂದು ಈ ಎಕನಾಮಿಕ್ ಡಿಸ್ಪ್ಯಾರಿಟಿಯನ್ನು ತೆಗೆಯುತ್ತಾರೆಂದು ನನಗೆ ನಂಬಿಕೆ ಇಲ್ಲ. ಇವತ್ತು

ಸೋಶಿಯಲ್ ಸರ್ವಿಸ್ ಇಲಾಖೆ ಇದೆ. ವಿಧಾನಸೌಧದಿಂದ ಆರ್ಡರ್ಸ್ ಹೋಗುತ್ತಿಲ್ಲ. ಅದು ರೇಸ್ ಕೋರ್ಸ್ ಹತ್ತಿರ ಒಂದು ಕಾಂಗ್ರೆಸ್ ಭವನ ಇದೆ, ಅಲ್ಲಿಂದ ಆರ್ಡರ್ ಹೋಗುತ್ತಿದೆ. ನಿಮ್ಮ ಪಾರ್ಟಿಯಲ್ಲಿ ಯಾರು ಯಸ್‌ಮೇನ್ ಆಗುತ್ತಾರೋ, ಅಂಥವರಿಗೆ ಮಾತ್ರ ಈ ಇಲಾಖೆ ಇದೆಯೇ ಹೊರತು, ನಿಜವಾಗಿ ಸಮಾಜದಲ್ಲಿ ಯಾರು ಹಿಂದುಳಿದಿದ್ದಾರೋ, ಯಾರು ನಿಜವಾಗಿ ಬಡವರಿದ್ದಾರೋ, ಅಂಥವರಿಗೆ ಇದರ ಸೌಲಭ್ಯ ಹೋಗುತ್ತಿಲ್ಲ. ನೀವು ಖರ್ಚು ಮಾಡುತ್ತಿರುವ ಹಣ ದೇಶದ ದುಡ್ಡು, ದೇಶ ಸೇವೆಯೇ ಜನಾರ್ಧನ ಸೇವೆಯೆಂದು ಪರಿಗಣಿಸಿ ಈ ಒಂದು ಎಕನಾಮಿಕ್ ಡಿಸ್ಪಾರಿಟಿಯನ್ನು ತೆಗೆದು ಎಲ್ಲರಲ್ಲೂ ಸಮಾನತೆಯನ್ನು ಉಂಟು ಮಾಡಬೇಕು. ಅದು ಇಷ್ಟರವರೆಗೆ ಸಾಧ್ಯವಾಗಲಿಲ್ಲ. 20 ವರ್ಷಗಳಲ್ಲಿ ನೀವು ಅದು ಮಾಡಲಿಲ್ಲ. ಮುಂದೆ ಇನು 50 ವರ್ಷಗಳಾದರೂ ನಿಮ್ಮಿಂದ ಅದು ಮಾಡಲು ಸಾಧ್ಯವಿಲ್ಲ. ನಿಮ್ಮ ನಂಬಿಕೆ ಸಮಾಜದಲ್ಲಿ ಪ್ರಗತಿಶೀಲ ಪರಿವರ್ತನೆ ತರುವುದರಲ್ಲಿಲ್ಲ, ಸಮಾಜದಲ್ಲಿನ ಸ್ವಾರ್ಥಸಾಧಕರ ಸಿರಿವಂತ ವರ್ಗದವರ ಆಶ್ರಯದಲ್ಲಿ ನೀವು ಬೆಳೆದು ಬಂದು 5 ವರ್ಷಗಳ ಕಾಲ ಪ್ರಾಮಾಣಿಕತನದಿಂದ ಸಿರಿವಂತ ಸಾಹುಕಾರರ ಸಲುವಾಗಿ ದುಡಿದು ರೈತ—ಕಾರ್ಮಿಕ ಜನರ ಶ್ರಮಜೀವನದಿಂದ ಬಂದ ರಾಷ್ಟ್ರದ ಸಂಪತ್ತು ನಿಮ್ಮ ಹಾಗು ನಿಮ್ಮನ್ನು ಆರಿಸಿ ಬರಲು ಸಹಾಯ ಮಾಡಿದ ಶ್ರೀಮಂತರ ಬಾಯಿಗೆ ಬೆಣ್ಣೆ ಹಾಕಿ ಬಡವರ ಬಾಯಿಗೆ ಸುಣ್ಣ ಹಾಕುತ್ತಿದ್ದೀರಿ. ನಾನು ಒಂದು ಸಲಹೆ ಮಾಡುವುದೆನೆಂದರೆ, ಸೋಷಿಯಲ್ ಸರ್ವಿಸ್ ಖಾತೆಯೂ ಹಾಗೂ ಸರ್ಕಾರ ಚಾರಿಟಿಯೆಂದು ಉದ್ಧಾರ ಮಾಡುವೆವು ಎಂಬುದು ಮರೆತು ನಾವು ಡ್ಯೂಟಿಯನ್ನು ಮಾಡುವೆನು ಅಂತ ಹೇಳಿ ಮಾಡುವುದೇ ಒಂದು ಹರಿಜನರ ಅಥವಾ ಗಿರಿಜನರ ಅರ್ಜಿಗಳು ಬಂದರೆ, ಅದು ಒಂದು ಮನೆಯ ಸಲುವಾಗಿರಬಹುದು, ಎತ್ತುಗಳ ಸಲುವಾಗಿರಬಹುದು, ಹೊಲದ ಸಲುವಾಗಿರಬಹುದು ಒಂದು ಸಾಲದ ಸಲುವಾಗಿರಬಹುದು, ಅದನ್ನು ಎರಡು ತಿಂಗಳೊಳಗೆ, ಯಾವ ಆಫೀಸರ್ ಅದರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲವೋ, ಅಂಥವನನ್ನು anti national officer ಎಂದು ಮಾಡಿ ಒಂದು ಡಿಸಿಪ್ಲಿನರಿ ಕ್ರಮ ತೆಗೆದುಕೊಳ್ಳಬೇಕು. ಮೊದಲು ಸಸ್‌ಪೆಂಡ್ ಮಾಡಬೇಕು. ಸಮಾಜದಲ್ಲಿ ಅನ್ನ ಉತ್ಪತ್ತಿ ಮಾಡುವಂತಹ ರೈತನನ್ನು ತಿರಸ್ಕಾರ ಮಾಡಿ, ದೇಶದ ಅನ್ನದ ಬೆಳೆವಣಿಗೆಗೆ ತಡೆಹಿಡಿದವನನ್ನು ಸರಿಯಾಗಿ ಶಿಕ್ಷಿಸಬೇಕಾಗಿದೆ. ಇಂಥ ಜನರಿಂದ ಅರ್ಜಿಗಳು ಬಂದು ಎರಡು ತಿಂಗಳುಗಳೊಳಗೆ, ತಹಸೀಲ್ದಾರರಾಗಲಿ, ಬಿ. ಡಿ. ಓ ಆಗಲಿ, ಯಾರೇ ಆಗಲಿ ಆ ಅರ್ಜಿಯಲ್ಲಿರುವ ನ್ಯಾಯುವಾದ ಬೇಡಿಕೆಗಳನ್ನು ಪೂರ್ತಿಗೊಳಿಸದಿದ್ದರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ಒಂದು ಶಿಕ್ಷೆ ಕೊಟ್ಟರೆ ಮಾತ್ರ ದೇಶದಲ್ಲಿ ಒಂದು ಶೇಕಡಾ 5 ರಷ್ಟಾದರೂ ಒಳ್ಳೆಯ ಕೆಲಸ ಮಾಡಿದ್ದೀರಿ ಎಂಬ ಒಂದು ಸಮಾಧಾನ ಎಲ್ಲರಲ್ಲೂ ಉಂಟಾಗುತ್ತದೆ. ಇದನ್ನು ಸರ್ಕಾರದವರು ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲ್ಮಲ).—ಮಾನ್ಯ ಅಧ್ಯಕ್ಷರೇ, ಈ ಸಮಾಜ ಕಲ್ಯಾಣ ಡಿಮ್ಯಾಂಡಿನ ಮೇಲೆ ಮಾತನಾಡಬೇಕಾದರೆ, ನನ್ನ ಮನಸ್ಸು ಸ್ವಲ್ಪ ಹಿಂದು ಮುಂದಾಗುತ್ತದೆ. ಏಕೆಂದರೆ, ನಮಗೆ ಅಷ್ಟು ಸಂತೋಷ ಬರುವುದಿಲ್ಲ. ಇದುವರೆಗೂ ಇವರು ಸಮಾಜ ಕಲ್ಯಾಣ ಏನೂ ಮಾಡಲಿಲ್ಲ. ಅವುಗಳೆಲ್ಲಾ ಮೂಲೆಗೆ ಬಿದ್ದಿವೆ. ಅವುಗಳನ್ನು ಮಾನ್ಯ ಮಂತ್ರಿಯವರು ಶೋಧನೆ ಮಾಡಿಲ್ಲ, ನಮ್ಮ ಡೈರೆಕ್ಟರು ಶೋಧನೆ ಮಾಡಿಲ್ಲ, ಯಾರೂ ಮಾಡಿಲ್ಲ. ಇಂದು ಸೋಶಿಯಲ್ ವೆಲ್‌ಫೇರ್ ಎಂಬುದು ಬರೇ ಕಾಗದಗಳ ಮೇಲೆ ಉಳಿದಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಹರಿಜನರಿಗೆ ಮತ್ತು ಗಿರಿಜನರಿಗೆ ಎಷ್ಟು ಲಕ್ಷ ಖರ್ಚು ಮಾಡಿದ್ದಾರೆ, ಆದರಿಂದ ಯಾರಿಗೆ ಫಾಯಿದೆಯಾಗಿದೆ! ಅದು ಯಾರಿಗೆ ಮುಟ್ಟಿದೆ? ಎಂದರೆ ಯಾರಿಗೂ ಇಲ್ಲ ಏನೋ ಕೊಟ್ಟಿದ್ದೀರಿ, ಯಾವನೋ ತಿಂದುಹೋಗಲಿ ಎಂದು ಕೊಟ್ಟಿದ್ದೀರಿ. ಸಮಾಜ ಕಲ್ಯಾಣ ಮೊದಲಿಂದಲೂ ನಡೆದುಕೊಂಡು ಬಂತು, ಯಾವ ಮಂತ್ರಿಯವರು ಬಂದರೂ ಏನೂ ಮುಂದೆ ಬರಲಿಲ್ಲ. ನೀವು ರಿಪೋರ್ಟು ತರಿಸಿಕೊಂಡು, ಏನೆಲ್ಲಾ ನೋಡಿದ್ದೀರಿ, ಎಷ್ಟು ಇನ್‌ಸ್ಪೆಕ್ಷನ್ ಮಾಡಿದ್ದೀರಿ, ಇಂಥಿಂಥ ಕಡೆ ಮುಟ್ಟಿದೆ ಎಂದು ಏನಾದರೂ ಬಂದಿದೆಯೇ? ಕೆಲವರು ಈ ಇಲಾಖೆಯನ್ನು ಮುಚ್ಚಬೇಕೆಂದು ಹೇಳಿದ್ದಾರೆ. ಏಕೆಂದರೆ ಇದರಲ್ಲಿ ಖರ್ಚಾಗುವ ಹಣದಿಂದ ಏನೂ ಪ್ರಯೋಜನವಿಲ್ಲ, ಯಾರೋ ತಿಂದು ಹಾಕುತ್ತಾರೆ ಎಂದು. ಈಗ ಒಂದು ಬೋರ್ಡ್ ಮಾಡಿದ್ದಾರೆ. ಸೋಶಿಯಲ್ ವೆಲ್‌ಫೇರ್ ಅಧಿಕಾರಿಗೆ ಎಲ್ಲಾ ಅಧಿಕಾರ ಕೊಟ್ಟರೆ ಅವರೇ ಮಾಡುತ್ತಾರೆ. ಇದನ್ನು ಯಾರೂ ಮನಸ್ಸಿಗೆ ತೆಗೆದುಕೊಳ್ಳಲಿಲ್ಲವೆಂದು ಕಾಣುತ್ತದೆ. ಹರಿಜನ ಗಿರಿಜನರಿಗೆ ಕುರಿ ಕೋಣ ಕೊಡುವುದು ಬೇಡ, ಅವರಿಗೆ ಒಂದು ವ್ಯಾಪಾರ ಮಾಡುವುದಕ್ಕೆ, ಒಂದು ಸಣ್ಣ ಕೈಗಾರಿಕೆಯನ್ನು ಸ್ಥಾಪನೆಮಾಡುವುದಕ್ಕೆ, ಒಂದು ಸೈಕಲು ದುಕಾನ್ ತೆರೆಯುವುದಕ್ಕೆ ಎಲ್ಲಾ ಒಂದು ರೀತಿಯ ಸಾಲವನ್ನು ಸರ್ಕಾರದವರು ಕೊಟ್ಟರೆ ಅವರು ಮುಂದೆ ಬರುವ ಹಾಗೆ ಆಗುತ್ತದೆ.

(ಶ್ರೀಮತಿ ನಾಗಮ್ಮ)

ಒಂದು ಸಣ್ಣ ದುಕಾನು ಇಲ್ಲವೇ ಒಂದು ವರ್ಕ್‌ಷಾಪು ಅಥವಾ ವ್ಯಾಪಾರ ಮಾಡಿ ಅವರ ಜೀವನ ನಡೆಸಲು ಅನುಕೂಲವಾಗುವಂತೆ ಸರಕಾರದ ಸಮಾಜ ಕಲ್ಯಾಣ ಇಲಾಖೆಯವರು ಇದಕ್ಕಾಗಿ ಸ್ವಲ್ಪ ದುಡ್ಡು ಕೊಟ್ಟು ಸರಕಾರದವರು ಗ್ಯಾರಂಟಿ ಕೊಟ್ಟು ಏಕೆ ಮಾಡಬಾರದು ಎಂದು ನಾನು ಇಲ್ಲಿ ಕೇಳುತ್ತಿದ್ದೇನೆ. ಕಾನೂನು ರೀತಿಯಾಗಿ ಅವರಿಗೆ ಕೊಟ್ಟು ಅವರಿಂದ ಹಣವನ್ನು ವಾಪಸು ಬರುವಂತೆ ಏರ್ಪಾಡುಗಳನ್ನು ಮಾಡಬಹುದು. ಆದರೆ ಇಂದು ದೊಡ್ಡದಾಗಿ ಎಲ್ಲೆಲ್ಲೂ ಹಾಸ್ಟಲುಗಳನ್ನು ಮಾಡುತ್ತೇವೆ ಮತ್ತು ಹೆಚ್ಚು ಹಣ ಕೊಡುತ್ತೇವೆ ಎಂದು ಹೇಳುತ್ತಾರೆ; ಅಲ್ಲಿಗೆ ಯಾವ ಹೆಣ್ಣು ಮಕ್ಕಳೂ ಬರುತ್ತಿಲ್ಲ ಮತ್ತು ಇದರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಏನೋ ಇವೆಲ್ಲಾ ಬೆಂಗಳೂರು ಹಾಗೂ ಮೈಸೂರು ಮುಂತಾದ ನಗರಗಳಲ್ಲಿ ಹೇಗೋ ನಡೆಯುತ್ತಿದೆ. ಸಮಾಜ ಕಲ್ಯಾಣದ ಇಲಾಖೆಯಿಂದ ಒಳ್ಳೆಯ ಕೆಲಸಗಳಾಗಬೇಕಾದರೆ ಒಂದೊಂದು ತಾಲ್ಲೂಕುಗಳಲ್ಲಿಯೂ ಹಾಗೂ ದೊಡ್ಡ ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ಶಿಶುವಿಹಾರಗಳನ್ನು ಮಾಡುವಂತೆ ಇಲ್ಲಿಗೂ ಒಂದು ರೀತಿಯಾದ ಸ್ಕೀಂಗಳನ್ನು ಹಾಕಿಕೊಂಡು ಮಾಡಬೇಕು ಎಂದು ಇಲ್ಲಿ ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

5-00 P.M.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಹಳ್ಳಿಗಳಲ್ಲಿ ಮಾಡುವುದು ಬೇಡ ಎಂದು ತಾವು ಹೇಳುತ್ತೀರಾ ?

ಶ್ರೀಮತಿ ನಾಗಮ್ಮ.—ಹಳ್ಳಿಗಳಲ್ಲೂ ಮಾಡಬೇಕು. ಆದರೆ ಹರಿಜನರಿಗಾಗಿ ಹಾಗೂ ಗಿರಿಜನರಿಗಾಗಿ ಪಟ್ಟಣಗಳಲ್ಲಿ ಹೈಸ್ಕೂಲುಗಳನ್ನು ತೆರೆಯುವಂತೆ ಹೋಬಳಿ ತಾಲ್ಲೂಕುಗಳಲ್ಲೂ ಸ್ಕೂಲುಗಳನ್ನು ತೆರೆದರೆ ಸ್ವಲ್ಪಮಟ್ಟಿಗಾದರೂ ಹರಿಜನ ಹಾಗೂ ಗಿರಿಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಿ ಸ್ವಲ್ಪಮಟ್ಟಿಗಾದರೂ ಮುಂದೆ ಬರುತ್ತಾರೆ. ಇಂದು ನೀವು ಮಾಡುತ್ತಿರುವ ಕೆಲಸಗಳಿಂದ ಹರಿಜನರು ಮುಂದೆ ಬರಲು ಆಗುತ್ತಿಲ್ಲ. ಇವತ್ತು ನೀವು ಏನೋ ಒಂದು ರೀತಿಯಾಗಿ ದುಡ್ಡು ಕೊಡುತ್ತಿದ್ದೀರಿ ಇದನ್ನು ಲೀಡರುಗಳಾಗಿರುವವರು ತಿಂದು ಹಾಕುತ್ತಾರೆ. ಇದನ್ನು ಸರಿಯಾಗಿ ಮಾನ್ಯ ಮಂತ್ರಿಗಳು ಮನಸ್ಸಿಗೆ ತೆಗೆದುಕೊಂಡು ಸಮಾಜ ಕಲ್ಯಾಣ ಇಲಾಖೆಯಿಂದ ಹರಿಜನರ ಕಲ್ಯಾಣ ಮಾಡಬೇಕೆಂದು ಆಸೆ ಇದ್ದರೆ ಏನೇನು ಇದುವರಿಗೆ ಮಾಡಿದ್ದೀರಿ ಎನ್ನುವುದರ ಒಂದು ರಿಪೋರ್ಟನ್ನಾದರೂ ತರಿಸಿ ನಮಗೆ ಕೊಡಿ, ಆಗ ಗೊತ್ತಾಗುತ್ತದೆ ಏನೇನು ಮಾಡಿದ್ದಾರೆ ಎನ್ನುವುದು. ಇಂದು ಸಮಾಜ ಕಲ್ಯಾಣ ಖಾತೆಯಿಂದ ಏನೋ ಕೆಲವರಿಗೆ ಅನುಕೂಲಗಳಾಗುತ್ತಿವೆ. ಸುಮ್ಮನೆ ಎಳೆಂಟು ಕೋಟಿಯಷ್ಟು ಖರ್ಚು ಮಾಡಿದರೆ ಪ್ರಯೋಜನ ಬರುವುದಿಲ್ಲ. ನೀವು ಕೊಡುವ ದುಡ್ಡು ಬಡಜನರಿಗೆ ಸರಿಯಾಗಿ ಮುಟ್ಟುತ್ತದೆಯೋ ಇಲ್ಲವೇ ಎನ್ನುವುದರ ಕಡೆಗೆ ಯಾರೂ ಗಮನ ಕೊಡುತ್ತಿಲ್ಲ. ಸಮಾಜ ಕಲ್ಯಾಣದ ಇಲಾಖೆಯಲ್ಲಿ ಶಕ್ತಿಯುತವಾಗಿ ಕೆಲಸ ಮಾಡುವವರು ಯಾರೂ ಇಲ್ಲ. ಕೆಲವರು ಇಲ್ಲಿ ಇಂತಹ ಇಲಾಖೆಯನ್ನು ತೆಗೆದುಬಿಡುವುದು ಒಳ್ಳೆಯದು ಎಂದು ಹೇಳಿದರು. ನನಗೂ ಕೂಡ ಒಂದೊಂದು ಸಾರಿ ಹಾಗೆ ಮಾಡುವುದು ಸರಿ ಎಂದು ಕಾಣುತ್ತದೆ. ಇಲಾಖೆಯಿಂದ ನಮ್ಮಂತಹ ಬಡಜನರಿಗೆ ಯಾವ ಪ್ರಯೋಜನಗಳೂ ಸಿಗದೇ ಇದ್ದರೆ ಇಂತಹ ಇಲಾಖೆಗಳಾದರೂ ಏಕೆ ಇರಬೇಕು ಎಂದು ಇಲ್ಲಿ ಕೇಳಬೇಕಾಗಿ ಬಂದಿದೆ. ಸ್ವಾತಂತ್ರ್ಯ ಬಂದು ಇಪ್ಪತ್ತು ವರ್ಷಗಳಾದರೂ ಇನ್ನೂ ಈ ಬಡಜನರಾದ ಹರಿಜನರು ಹಾಗೂ ಗಿರಿಜನರಿಗೆ ಯಾವ ಅನುಕೂಲಗಳೂ ಸಿಗುತ್ತಿಲ್ಲ. ಎಲ್ಲ ಪಟ್ಟಣಗಳ ಕಡೆ ಮಾಡುವುದಕ್ಕೆ ಬದಲಾಗಿ ಹಳ್ಳಿಗಾಡಿನಲ್ಲಿರುವ ಇಂತಹ ಬಡಜನತೆಯ ಬಗ್ಗೆ ಸರಿಯಾದ ಒಂದು ಯೋಜನೆಯನ್ನು ಮಾಡಿಕೊಂಡು ಇಂತಹ ಜನರ ಅಭಿವೃದ್ಧಿಗೆ ಬೇಗನೆ ಪ್ರಯತ್ನ ಮಾಡಬೇಕು ಎಂದು ನಾನು ಇಲ್ಲಿ ಪದೇ ಪದೇ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳೂ ಕೂಡ ಇದನ್ನು ನೋಡಲು ಎಲ್ಲ ಕಡೆಗೂ ಹೋಗಿ ನೋಡಿ ಬರುತ್ತಿಲ್ಲ. ಹೀಗಾದರೆ ಸೋಷಿಯಲ್ ವೆಲ್‌ಫೇರು ಮಾಡುತ್ತೇವೆ ಎಂದರೆ, ಅದು ಹೇಗೆತಾನೇ ಮಾಡಲು ಸಾಧ್ಯ ? ನನಗೆ ಈ ಬಡಜನರ ಬಗ್ಗೆ ಹೇಳಲು ಬಹಳ ದುಃಖವಾಗುತ್ತದೆ. ಏನೋ ಸರಕಾರ ಹರಿಜನರಿಗೆ ಸಹಾಯವಾಗಬೇಕು ಎಂದು ದುಡ್ಡನ್ನು ಕೊಡುತ್ತಿದ್ದಾರೆ. ಆದರೆ ಈಗ ಬರುವ ದುಡ್ಡನ್ನು ಇಲ್ಲಿರುವ ಅಧಿಕಾರಿಗಳೇ ಜೇಬಿಗೆ ಹಾಕಿಕೊಂಡು ಯಾವ ಕೆಲಸಗಳನ್ನೂ ಮಾಡುತ್ತಿಲ್ಲ. ಇದರಲ್ಲಿ ಮಧ್ಯಸ್ಥಗಾರರು ಬೇರೆ ಇರುತ್ತಾರೆ. ಅವರುಗಳು ಲಂಚ ತೆಗೆದು ಕೊಂಡು ಏನೇನೋ ಮಾಡುತ್ತಾರೆ. ಒಂದು ಕೆಲಸಕ್ಕೆ ಒಬ್ಬರು ಹರಿಜನರನ್ನು ಶಿಫಾರಸು ಮಾಡೋಣ ಎಂದು ನಮ್ಮಂತಹ ಎಂ. ಎಲ್. ಎ. ಗಳು ಹೋಗಿ ಹೇಳಿದರೆ ಅವರು ನಮಗೆ ಮೊದಲು ನೀವೇನೂ ಹೇಳಿರಲಿಲ್ಲ, ಈಗ ಎಲ್ಲಾ ಆಗಿ

ಹೋಯಿತು, ಮುಂದೆ ನೋಡೋಣ ಎನ್ನುತ್ತಾರೆ. ಹೀಗಾದರೆ ಬಡವರಾದ ಹರಿಜನರ ಉದ್ಧಾರ ಮಾಡಿದಂತಾಗುತ್ತದೆಯೇ? ಇದರ ಬಗ್ಗೆ ಮಂತ್ರಿಗಳು ನನಗೆ ಸರಿಯಾದ ಉತ್ತರವನ್ನು ಇಲ್ಲಿ ಕೊಡಬೇಕೆಂದು ಹೇಳುತ್ತಿದ್ದೇನೆ. ಇದನ್ನು ಬಹಳ ವ್ಯಥೆಯಿಂದ ಹೇಳಬೇಕಾಗಿ ಬಂದಿದೆ. ಈ ಮಾನ್ಯ ಸಭೆಯ ಎಲ್ಲ ಸದಸ್ಯರಿಗೂ ಕೂಡ ಹರಿಜನರ ಸ್ಥಿತಿ ಹೇಗಿದೆ ಎನ್ನುವುದು ಗೊತ್ತು. ಆದರೆ ಇಲಾಖೆಯಲ್ಲಿರುವ ಜನರಲ್ಲಿ ಯಾವ ಹಿತದೃಷ್ಟಿ ಕೂಡ ಇಲ್ಲ ಮತ್ತು ಸೋಷಿಯಲ್ ವೆಲ್‌ಫೇರು ಇಲಾಖೆಯ ಬಗ್ಗೆ ಇಲ್ಲಿನ ಸದಸ್ಯರಿಗೂ ಆಸಕ್ತಿ ಇಲ್ಲ ಎಂದು ಇಲ್ಲಿ ಹೆಚ್ಚಾಗಿ ಮಾತನಾಡುತ್ತಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನೀವು ಮಾತನಾಡಲಿ ಎಂದು ನಾವು ನಿಮಗೇ ಬಿಟ್ಟಿದ್ದೇವೆ.

ಶ್ರೀಮತಿ ನಾಗಮ್ಮ.—ಮಾನ್ಯ ಸದಸ್ಯರಾದ ಸಿದ್ದವೀರಪ್ಪನವರಿಗೂ ಗೊತ್ತು. ಇಲ್ಲಿ ಹೇಗೆ ಕೆಲಸಗಳು ನಡೆಯುತ್ತಿವೆ ಎನ್ನುವುದು. ನಾನು ಅವರಿಗೆ ಹೊಸದಾಗಿ ಹೇಳಬೇಕಾಗಿಲ್ಲ. ನಾನು ಮಂತ್ರಿಗಳಲ್ಲಿ ಹೇಳುವುದು ನಾನೇನೋ ಹೇಳುತ್ತೇನೆ ಎಂದು ಉದಾಸೀನದಿಂದ ಇರಬಾರದು. ಸ್ವಲ್ಪ ಶಕ್ತಿಯಿಂದ ಇಲಾಖೆಯಲ್ಲಿ ಕೆಲಸ ಮಾಡಬೇಕು ಎಂದು ಇಲ್ಲಿ ಒತ್ತಾಯದಿಂದ ಹೇಳುತ್ತಿದ್ದೇನೆ, ಸಮಾಜ ಕಲ್ಯಾಣ ಇಲಾಖೆ ಚೆನ್ನಾಗಿ ಮುಂದಕ್ಕೆ ಬರಬೇಕಾದರೆ ಸರಿಯಾಗಿ ಗುದ್ದಾಡಲು ಸಾಕಷ್ಟು ಶಕ್ತಿಯುಳ್ಳವರು ಹಾಗೂ ಆಸೆಯಿಂದ ಕೆಲಸ ಮಾಡುವವರು ಇಲ್ಲಿರಬೇಕು ಮತ್ತು ಷೆಡ್ಯೂಲು ಕ್ಯಾಸ್ಟು ಹಾಗೂ ಷೆಡ್ಯೂಲು ಟ್ರೈಬ್ಸ್ ವರ್ಗದವರನ್ನು ಮುಂದೆ ತರಲು ಇನ್ನೂ ಹೆಚ್ಚು ಪ್ರಯತ್ನಗಳನ್ನು ಮಾಡಬೇಕು. ಇಲ್ಲದಿದ್ದರೆ ಏನೂ ಆಗುವುದಿಲ್ಲ. ಈಗ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಷೆಡ್ಯೂಲ್ಡ್ ವರ್ಗದವರಿಗೆ ಕೊಡುತ್ತಿದ್ದಾರೆ. ಇದರಂತೆ ಇಲ್ಲಿರುವ ಬಡ ಜನಕ್ಕೆ ವ್ಯಾಪಾರ ಮಾಡಲು ಒಂದು ದುಕಾನು ಇಟ್ಟುಕೊಳ್ಳಲು ಅಥವಾ ಒಂದು ವರ್ಕ್‌ಷಾಪ್ ಮಾಡಿ ಅಲ್ಲಿ ಜನರಿಗೆ ಕೆಲಸಗಳು ಸಿಗುವಂತೆ ಏರ್ಪಾಡು ಮಾಡಬೇಕು. ಮತ್ತು ಸರ್ವಿಸ್‌ನಲ್ಲಿ ಹಿಂದುಳಿದ ಜನಾಂಗದವರಿಗಾಗಿ ಶೇಕಡಾ 18 ರಷ್ಟು ಇರಬೇಕು ಎಂದು ಸರಕಾರದವರು ನಿಗದಿ ಮಾಡಿದ್ದಾರೆ. ಇದರಂತೆ ಎಲ್ಲೆಲ್ಲಿ ಮಾಡಿದ್ದೀರಿ ಎಂದು ನಾನು ಇಲ್ಲಿ ಕೇಳುತ್ತೇನೆ. ಈಚೆಗೆ ಹರಿಜನರಲ್ಲಿ ಕೆಲವರು ಗ್ರ್ಯಾಜುಯೇಟುಗಳು ಹಾಗೂ ಇಂಜನೀಯರುಗಳು ಆಗಿರುವವರು ಬರುತ್ತಿದ್ದಾರೆ. ಇವರಲ್ಲಿ ಎಷ್ಟು ಜನರನ್ನು ಐ. ಎ. ಎಸ್. ಹಾಗೂ ಐ. ಪಿ. ಎಸ್. ದರ್ಜೆಯಲ್ಲಿ ನೇಮಕ ಮಾಡಿದ್ದೀರಿ? ಎಲ್ಲೂ ಶೇಕಡ 18 ರಷ್ಟು ಜಾಗಗಳನ್ನು ಮೀಸಲಾಗಿ ಇಡುತ್ತಲೇ ಇಲ್ಲ. ಈಚೆಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಗ್ರ್ಯಾಜುಯೇಟುಗಳನ್ನು ಕೆಲಸಗಳಿಗಾಗಿ ಕರೆದಿದ್ದರು. ಇದರಲ್ಲಿ ಶೇಕಡ 18 ರಂತೆ ಮೀಸಲು ಇಡಬೇಕೆಂದು ಇದ್ದರೂ ಎಷ್ಟು ಜನರನ್ನು ಷೆಡ್ಯೂಲು ಕ್ಯಾಸ್ಟು ವರ್ಗದವರಿಗೆ ಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ನಮ್ಮ ಹರಿಜನರಲ್ಲಿ ಎಷ್ಟೋ ಜನ ಅಸಿಸ್ಟೆಂಟು ಕಮಿಷನರುಗಳ ಹುದ್ದೆಯಲ್ಲಿದ್ದಾರೆ. ಹೆಚ್ಚು ಸಂಖ್ಯೆಯಲ್ಲಿ ನಮ್ಮ ಹರಿಜನರ ಪೈಕಿ ಐ. ಎ. ಎಸ್. ಹಾಗೂ ಐ. ಪಿ. ಎಸ್. ವರ್ಗದಲ್ಲಿ ನೇಮಕ ಮಾಡಬೇಕು ಎಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ ಮತ್ತು ಒತ್ತಾಯವನ್ನೂ ಮಾಡುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ರಾಮಚಂದ್ರ (ಸೂಳ್ಯ).—ಸ್ವಾಮೀ, ಸಮಾಜಕಲ್ಯಾಣ ಶಾಖೆಯ ಮಂತ್ರಿಗಳು ಮಂಡಿಸಿರುವ ಬೇಡಿಕೆಯನ್ನು ವಿರೋಧಿಸುತ್ತಾ ಇಲ್ಲಿ ಎರಡು ಮಾತುಗಳನ್ನಾಡಬೇಕೆಂದು ನಾನು ಅಪೇಕ್ಷೆ ಮಾಡುತ್ತೇನೆ. ಈ ಬೇಡಿಕೆ ಕಳೆದ ಸಾರಿಯ ಬಜೆಟ್ಟಿನಲ್ಲಿ ಸುಮಾರು ಎರಡು ಕೋಟಿ ತೊಂಬತ್ತೆಂಟು ಲಕ್ಷದಷ್ಟು ಇತ್ತು. ಇದು ಸಾಲದು ಎಂದು ಹೇಳಿದನು. ಈ ವರ್ಷ ಇದರ ಮೊತ್ತವನ್ನು ಸ್ವಲ್ಪ ಏರಿಸಿಬಿಟ್ಟರು. ಆದರೆ ಈ ಹಣಕ್ಕೆ ತಕ್ಕಂತೆ ಈ ಇಲಾಖೆಯಲ್ಲಿ ಏನಾದರೂ ಸರಿಯಾದ ಕಾರ್ಯಗಳಾಗುತ್ತಿವೆಯೇ ಇಲ್ಲವೇ ಎನ್ನುವುದರ ಕಲ್ಪನೆ ಯಾರಿಗೂ ಇಲ್ಲ. ಸುಮ್ಮನೆ ಹಣವನ್ನು ಇಟ್ಟಿರುವುದು ಕಡಿಮೆ ಎಂದು ಹೇಳಿದರೂ ಕೂಡ ಈ ಸಮಾಜಕ್ಕೆ ಬೇಕಾದಷ್ಟು ಹಣವನ್ನು ಇಟ್ಟುಕೊಂಡಿಲ್ಲ. ನಾವು ಇಲ್ಲಿ ಎಷ್ಟೋ ಬರಿ ಸಮಾಜ ಕಲ್ಯಾಣ ಇಲಾಖೆಯಿಂದ ಏನಾದರೂ ಕೆಲಸಗಳಾಗುತ್ತಿವೆಯೇ ಎಂದು ನೋಡಿದರೆ ಏನೂ ಆಗಿಲ್ಲ ಎನ್ನುವುದು ಕಂಡು ಬರುತ್ತದೆ. ಸ್ವಾತಂತ್ರ್ಯ ಬಂದ ಮೇಲೆ ನಮ್ಮ ರಾಜ್ಯದಲ್ಲಿ ಬಹಳ ದೊಡ್ಡದಾದ ಸಮಾಜ ಕಲ್ಯಾಣ ಇಲಾಖೆ ಎಂದು ಸುಮ್ಮನೆ ಸರಕಾರ ಇಟ್ಟುಕೊಂಡಿದೆ. ಸಮಾಜ ಕಲ್ಯಾಣ ಇಲಾಖೆ ಬಹಳ ಪ್ರಾಮುಖ್ಯವಾದ ಇಲಾಖೆ ಎಂದು ತಿಳಿದುಕೊಂಡು ನಿಜವಾಗಿಯೂ ಹಿಂದುಳಿದ ಸಮಾಜದವರನ್ನು ಉದ್ಧಾರ ಮಾಡಿ ಅವರ ಬಡತನವನ್ನು ನಿವಾರಣೆ ಮಾಡಲು ಹಾಗೂ ಅಸ್ಪೃಶ್ಯತೆಯನ್ನು ತೊಡೆದುಹಾಕಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿ ಯಾವ ಆಸಕ್ತಿಯನ್ನೂ ವಹಿಸುತ್ತಿಲ್ಲ. ನಿಜವಾಗಿಯೂ ಈ ಮೂರು ವಿಧದಲ್ಲಿ ಸಹಾಯ ಮಾಡಿದರೆ ಹಿಂದುಳಿದ ಜನಾಂಗದವರಿಗೆ ಸ್ವಲ್ಪಮಟ್ಟಿಗಾದರೂ ಅನುಕೂಲಗಳಾಗು

(ಶ್ರೀ ಎ. ರಾಮಚಂದ್ರ)

ತ್ತಿತ್ತು. ಮತ್ತು ಸ್ವಾತಂತ್ರ್ಯ ಬಂದ ಮೇಲೆ ಪ್ರಜಾಪ್ರಭುತ್ವ ಇಂದು ಭದ್ರವಾದ ತಳಹದಿಯ ಮೇಲೆ ಉಳಿಯಬೇಕು ಎಂದು ಹಿಂದೆ ಮಹಾತ್ಮಾ ಗಾಂಧಿಯವರೇ ಬಹಳವಾಗಿ ಇದರ ಬಗ್ಗೆ ಹೇಳಿದ್ದಾರೆ. ಅದನ್ನು ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷದವರು ಏಕೆ ಮರೆತು ಬಿಟ್ಟರು ಎನ್ನುವುದನ್ನು ನಾವು ಇಲ್ಲಿ ಆಲೋಚನೆ ಮಾಡಬೇಕಾಗಿ ಬಂದಿದೆ. ಅವರು ಸತ್ಯ ಅಹಿಂಸೆಯ ಹಾದಿಯಲ್ಲಿ ಹೋಗಬೇಕೆಂದು ಹೇಳಿದ್ದನ್ನು ಇಂದಿನ ಸರಕಾರ ಮರೆತಂತೆ ಕಾಣುತ್ತದೆ. ಇದರಲ್ಲಿ ಸ್ವಾರ್ಥ ಬರುತ್ತದೆ. ಸ್ವಾರ್ಥ ಬಂದ ಮೇಲೆ ಎಲ್ಲವೂ ಹೋಗುತ್ತದೆ. ಮದ್ಯಪಾನ ಮಾಡಿದವನಿಗೆ ತನ್ನ ಸಂಸಾರದ ಕಷ್ಟದ ನೆನಪು ಆಗುವುದಿಲ್ಲ. ಗಾಂಧಿ ತತ್ವ ಸಂಪೂರ್ಣವಾಗಿ ಮರೆತು ಬಿಟ್ಟು ಇಂದು ನೀವು ಸ್ವಾರ್ಥಿಗಳಾಗಿದ್ದೀರಿ. ಇದರಿಂದ ನಿಮಗೆ ಮುಂದೆ ಪಶ್ಚಾತ್ತಾಪವಾಗುತ್ತದೆ ಮನಸ್ಸಿಗೆ ನೋವು ಆಗುತ್ತದೆ.

ಇನ್ನೊಂದು ವಿಷಯ ಹೇಳಲು ಬಹಳ ವಿಷಾದ ಪಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಿಂದ ಬರಿ ಹರಿಜನರಿಗೆ ಸಹಾಯವಾಗಬೇಕು. ಆದರೆ ಸರಕಾರದವರು ಎರಡನ್ನೂ ಮಾಡಬೇಕೆಂದು ದೇಶದ ಎಲ್ಲ ಜನರಿಗೆ ಸಹಾಯ ಸಹಕಾರವಾಗಬೇಕು ಎಂದು ಹೇಳತಕ್ಕ ಪ್ರಶ್ನೆ ಮುಂದೆ ಬಂದೇ ಬರುತ್ತದೆ. ಆದರೆ ಬೇರೆ ಜಾತಿಯವರು ಈ ಬಡಜನರಿಗೆ ಸಹಾಯ ಸಹಕಾರ ಮಾಡಿದರೆ ಮಾತ್ರ ಈ ಹರಿಜನರ ಉದ್ಧಾರವಾಗಲು ಸಾಧ್ಯ. ಇಂದು ಸಮಾಜ ಕಲ್ಯಾಣ ಇಲಾಖೆ ಮೇಲಿನ ಡಿಮ್ಯಾಂಡ್ ಮೇಲೆ ಹರಿಜನ ಶಾಸಕರೇ ಮಾತನಾಡಬೇಕು ಎಂಬುದು ಸರಿಯಲ್ಲ ಎಂದು ಹೇಳುತ್ತೇನೆ. ನಾನು ಯಾವ ಬೇಧ ಭಾವದ ದೃಷ್ಟಿಯಿಂದ ಇದನ್ನು ಹೇಳುತ್ತಿಲ್ಲ. ಒಂದು ರೀತಿಯಲ್ಲಿ ಯಾವ ಭೇದ ಭಾವ ಇಲ್ಲದೆ ಎಲ್ಲರೂ ದುಡಿಯಬೇಕು. ಮಂತ್ರಿ ಮಂಡಳದವರು ಸರಕಾರಿ ಅಧಿಕಾರಿಗಳು ಎಲ್ಲರೂ ಒಂದೇ ಭಾವನೆಯಿಂದ ದುಡಿಯುತಿದ್ದರೆ ಹರಿಜನರ ಉದ್ಧಾರ ಈ 20 ವರ್ಷಗಳಲ್ಲಿಯೇ ನಿಜವಾಗಿಯೂ ಆಗುತ್ತಿತ್ತು. ಇದೇ ರೀತಿ ಭಾವನೆ ಇಟ್ಟುಕೊಂಡು ಕೆಲಸ ಮಾಡುವುದಾದರೆ 20 ವರ್ಷಗಳೇಕೆ ಇನ್ನೂ 100 ವರ್ಷಗಳಾದರೂ ಹರಿಜನರ ಉದ್ಧಾರವಾಗುವುದಿಲ್ಲ ಹರಿಜನರ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಕಾಣುತ್ತದೆ. ನಿಜವಾಗಿಯೂ ಹರಿಜನರ ಉದ್ಧಾರವಾಗಬೇಕಾದರೆ ಅವರು ಸಮಾಜದಲ್ಲಿ ಸ್ವತಂತ್ರರಾಗಬೇಕು, ಅವರಿಗೆ ಉಳಿಯಲು ಒಂದು ಮನೆ ಕಟ್ಟಿಸಿಕೊಳ್ಳಲು ಸ್ಥಳ ಬೇಕೇಬೇಕು, ಅವರು ಜೀವನ ಮಾಡುವುದಕ್ಕೆ ಅನುಕೂಲ ಒದಗಿಸಿ ಕೊಡಬೇಕು. ಇಷ್ಟು ಮಾಡಬೇಕು ಎಂದು ಕಳೆದ ಸಲ ಮಾತನಾಡುವಾಗ ಸಹ ನಾನು ಹೇಳಿದ್ದೇನೆ. ಹರಿಜನರಲ್ಲಿ ಎಷ್ಟು ಜನರಿಗೆ ಭೂಮಿ ಇದೆ, ಭೂಮಿ ಎಷ್ಟು ಜನರಿಗೆ ಇಲ್ಲ ಎನ್ನುವುದನ್ನು ನೋಡಬೇಕು. ಅವರು ಎಲ್ಲಿ ಎಂಥ ಪರಿಸ್ಥಿತಿಯಲ್ಲಿ ವಾಸ ಮಾಡುತ್ತಾರೆ ನೋಡಬೇಕು. ಈ ವಿಚಾರದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಏನೂ ಉಪಯೋಗವಾಗುವುದಿಲ್ಲ. ಹರಿಜನರಿಗೆ ಉತ್ತೇಜನ ಕೊಡುವ ರೀತಿಯಲ್ಲಿ ಮಂತ್ರಿಗಳು ಸರಕಾರಿ ಅಧಿಕಾರಿಗಳು ಆತ್ಮಸಾಕ್ಷಿಯಾಗಿ ದುಡಿಯಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನೊಂದು ವಿಷಯ ವಿದ್ಯಾಭ್ಯಾಸ. ಹರಿಜನರಿಗೆ ಅಲ್ಪಸ್ವಲ್ಪ ವಿದ್ಯಾಭ್ಯಾಸದ ಅನುಕೂಲತೆ ಕೊಟ್ಟಿದ್ದರೂ ವಿದ್ಯಾಭ್ಯಾಸ ಪಡೆದವರಿಗೆ ಏನಾದರೂ ಒಂದು ಕೆಲಸ ಬೇಕು. ಆದರೆ ಎಷ್ಟೋ ಹರಿಜನರು ಕಲಿತವರು ಕಳೆದ ಏಳು ವರ್ಷದಿಂದ ಕೆಲಸವಿಲ್ಲದೆ ಸುಮ್ಮನೆ ಇದ್ದಾರೆ. ಹರಿಜನರಿಗೆ ಚಾನ್ಸ್ ಸಿಕ್ಕುವುದಿಲ್ಲ. ಯಾವ ಡಿಪಾರ್ಟ್‌ಮೆಂಟಿನಲ್ಲಿ ನೋಡಿದರೂ 18 ಪರ್ಸೆಂಟ್ ಹರಿಜನರು ಇಲ್ಲ. ಕೆಲವು ಕಡೆ ಒಂದು ಪರ್ಸೆಂಟ್ ಕೂಡ ಇಲ್ಲ. 18 ಪರ್ಸೆಂಟ್ ಆಗುವವರೆಗೆ ಇಂಥ ಸ್ಥಳಗಳನ್ನು ಅವರಿಗಾಗಿ ಕಾಯ್ದಿಡಬೇಕು ಅವುಗಳನ್ನು ತುಂಬಬೇಕು. ಸಮಾಜ ಕಲ್ಯಾಣ ಇಲಾಖೆಯು ಇದರ ಬಗ್ಗೆ ಏತಕ್ಕೆ ಉದಾಸೀನ ಮಾಡಿದ್ದಾರೆ? ಇದರ ಬಗ್ಗೆ ಉದಾಸೀನ ಮಾಡದೆ ಸರಕಾರದವರು ನ್ಯಾಯವಾದ ರೀತಿಯಲ್ಲಿ ಹರಿಜನೋದ್ಧಾರ ಮಾಡಬೇಕು. ಈ ಒಂದು ಉದ್ಯೋಗ ಸರಿಯಾಗಿ ಸಿಗದೇ ಇದ್ದರೆ ಬಡ ಜನರು ಜೀವನ ಮಾಡುವುದೇ ಕಷ್ಟವಾಗುತ್ತದೆ. ಅವರು ಕಲಿಯುವುದು ಏತಕ್ಕೆ? ಎಸ್ಸೆಸ್ಸೆಲ್ಸಿವರೆಗೆ ಕಲಿತರೂ ಕೆಲಸ ಸಿಕ್ಕುವುದಿಲ್ಲವೆಂದಾದರೆ ತುಂಬಾ ಕಷ್ಟವಾಗುತ್ತದೆ. ಬಡ ಹರಿಜನರು ಕಾಲೇಜಕ್ಕೆ ಹೋಗಲು ಅಷ್ಟು ಅವಕಾಶ ಇರುವುದಿಲ್ಲ. ಎಸ್ಸೆಸ್ಸೆಲ್ಸಿವರೆಗೆ ಕಲಿತವರಿಗೆ ಉದ್ಯೋಗ ಕೊಡಲು ಶಕ್ತಿ ಇಲ್ಲದೇ ಹೋದರೆ ಅವರ ಉದ್ಧಾರ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಈ ಪ್ರಶ್ನೆಗೆ ಸರಿಯಾದ ಉತ್ತರ ಮಾನ್ಯ ಮಂತ್ರಿಗಳು ಕೊಡಬೇಕು ಎಂದು ಪ್ರಾರ್ಥಿಸುತ್ತೇನೆ.

ಇನ್ನು ಹಾಸ್ಟೆಲ್ ವಿಚಾರ. ಹಾಸ್ಟೆಲ್ಲಿನಲ್ಲಿ ಇರತಕ್ಕ ಒಬ್ಬನಿಗೆ 25 ರೂಪಾಯಿ ದರ ಇಟ್ಟಿದ್ದೀರಿ. ಈ ಹಣ ಏನೇನೂ ಸಾಕಾಗುವುದಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ನಾಲ್ಕೈದು ಹಾಸ್ಟೆಲನಲ್ಲಿ ನಾನು ನೋಡಿದ್ದೇನೆ. ಅಲ್ಲಿ ಅನ್ನ ಮಾಡಲು ಅಕ್ಕಿ ಇರುವುದಿಲ್ಲ. ಹಣ ಸಾಕಾಗುವುದಿಲ್ಲ

ಎಂದು ಹೇಳುತ್ತಾರೆ. ಹಾಸ್ಟೆಲ್ಲಿನಲ್ಲಿ ಇರುವವರಿಗೆ ಅನ್ನ ಕೊಡದೆ ಗೆಣಸು ಚಪಾತಿ ತಿನ್ನಲು ಕೊಡುತ್ತಾರೆ. ಮನೆ ಏನಾದರೂ ಹತ್ತಿರದಲ್ಲಿ ಇದ್ದರೆ ಅಂಥವರು ಮನೆಗೆ ಹೋಗಿ ಊಟ ಮಾಡಿಕೊಂಡು ಸ್ಕೂಲಿಗೆ ಹೋಗುತ್ತಾರೆ. ಸಂಕರ ನಡೆಸತಕ್ಕಂಥ ಹಾಸ್ಟೆಲ್ಲಿನಲ್ಲಿ ಸರಿಯಾಗಿ ಊಟ ಸಿಕ್ಕುವುದಿಲ್ಲ. ಹಾಸ್ಟೆಲ್ ನಡೆಸಲು ಕೊಡುವ ಹಣ ಸಾಲದು ಎಂದು ನಾವು ಅನೇಕ ಸಲ ಮನವಿ ಮಾಡಿಕೊಂಡರೂ ಕೂಡ ಅದನ್ನು ಸರಕಾರ ಅರ್ಥ ಮಾಡಿಕೊಳ್ಳುವುದಿಲ್ಲ. ನಾವು ವಿರೋಧಪಕ್ಷದವರು ಏನೋ ಹೇಳುತ್ತೇವೆ ಎಂದು ತಿಳಿದುಕೊಳ್ಳಬಾರದು. ನಾವು ಹೇಳುವುದನ್ನು ತಾವು ಗ್ರಹಿಸಬೇಕು. ಹಾಸ್ಟೆಲ್ಲುಗಳಿಗೆ ತಾವು ಸ್ವತಃ ಹೋಗಿ ಅಲ್ಲಿಯ ಪರಿಸ್ಥಿತಿ ನೋಡಬೇಕು.

ಮದ್ಯಪಾನ ವಿಷಯವನ್ನು ನಾನು ಈ ಮೊದಲು ಹೇಳಿದ್ದೇನೆ. ನಿಜವಾಗಿಯೂ ಮದ್ಯಪಾನ ನಿರೋಧದಿಂದ ಹರಿಜನರಿಗೆ ಅಷ್ಟು ಸ್ವಲ್ಪ ಒಳ್ಳೆಯದಾಗಿತ್ತು. ಅಂಥಾದ್ದನ್ನು ಸರಕಾರದವರು ತೆಗೆದು ಹಾಕಿ ಬಿಟ್ಟು ಬಡ ಹರಿಜನರಿಗೆ ದ್ರೋಹ ಮಾಡಿದ ಹಾಗೆ ಆಗಿದೆ. ಆದುದರಿಂದ ಇದರ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಸಮಾಜಕಲ್ಯಾಣ ಇಲಾಖೆಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರತಕ್ಕಂಥ ಬೇಡಿಕೆಯನ್ನು ಸ್ವಾಗತಿಸುತ್ತಾ ಒಂದೆರಡು ವಿಚಾರಗಳನ್ನು ಸರಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಡಿಮ್ಯಾಂಡ್ ವಿಚಾರದಲ್ಲಿ ಅನೇಕರು ಅನೇಕ ರೀತಿಯಿಂದ ಸಲಹೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಈ ಮೊದಲು ಮಾತನಾಡಿದ ನಮ್ಮ ಪಾಟೀಲ್ ಸಾಹೇಬರು ಕಳೆದ 20 ವರ್ಷಗಳಲ್ಲಿ ಕಾಂಗ್ರೆಸ್ ಸರಕಾರ ಏನೂ ಮಾಡಿಲ್ಲ ಎಂದು ವಾದ ಹೂಡಿದ್ದಾರೆ. ಶ್ರೀಮಾನ್ ಪಾಟೀಲರು ಒಂದು ವಿಚಾರ ಮರೆತು ಹೋಗಿರಬಹುದು. ಹಿಂದೆ ಕೇರಳದಲ್ಲಿ ನಂಬೂದ್ರಿಪಾಡರ ಸರ್ಕಾರ ಅಧಿಕಾರಕ್ಕೆ ಬಂದಾಗ ಐದು ಜನ ಇರತಕ್ಕಂಥ ಒಂದು ಹರಿಜನ ಕುಟುಂಬವನ್ನು ಸುಟ್ಟುಹಾಕಿದರು. ನಾವು ಊರಿಗೆ ಹೋಗಿ ಪರಿಸ್ಥಿತಿ ನೋಡಿಕೊಂಡು ಬಂದಿದ್ದೇವೆ. ಇಂಥ ಸನ್ನಿವೇಶದಲ್ಲಿ ಇದು ಯಾವ ರಾಜಕೀಯ ಪಕ್ಷದ್ದು ಎಂದು ತಿಳಿದುಕೊಳ್ಳಬಾರದು. ಹರಿಜನರ ಪ್ರಶ್ನೆ ನೂರಾರು ವರ್ಷಗಳಿಂದ ಬಂದಿದೆ. ನಮ್ಮ ಸರಕಾರ ಬಂದರೆ ಇದನ್ನು ಮಾಡುತ್ತೇವೆ, ಕಾಂಗ್ರೆಸ್ ಸರಕಾರ ಮಾಡುವುದಿಲ್ಲ ಎಂದು ಅವರು ಹೇಳುವುದು ಸರಿಯಲ್ಲ. ದೇಶದಲ್ಲಿ ಇಂದು ಇರತಕ್ಕ ಅಸ್ಪೃಶ್ಯತೆ ನಿವಾರಣೆಯಾಗಬೇಕಾದರೆ ಅದಕ್ಕೆ ಸವರ್ಣೀಯರ ಸಹಕಾರ ಇಲ್ಲದೇ ಹೋದರೆ ಖಂಡಿತವಾಗಿ ಅಸ್ಪೃಶ್ಯತೆ ನಿರ್ಮೂಲನ ಮಾಡುವುದಕ್ಕೆ ಸಾಧ್ಯವಿಲ್ಲ. ಅಸ್ಪೃಶ್ಯತೆ ನಿವಾರಣೆ ಮಾಡುವುದಕ್ಕೆ ಶ್ರೀ ಬಸವಣ್ಣನವರು ಅನುಭವ ಮಂಟಪದಲ್ಲಿ ಹರಳಯ್ಯನನ್ನು ಬರಮಾಡಿಕೊಂಡು ಕ್ರಾಂತಿ ಎಬ್ಬಿಸಿದರು. ಇದಕ್ಕಾಗಿ ರಾಮಾನುಜಾಚಾರ್ಯರು ಕಷ್ಟಪಟ್ಟಿದ್ದಾರೆ, ಶಂಕರಾಚಾರ್ಯರು ಕಷ್ಟಪಟ್ಟಿದ್ದಾರೆ, ಮಹಾತ್ಮ ಗಾಂಧಿಯವರು ಕಷ್ಟಪಟ್ಟಿದ್ದಾರೆ. ಇದೊಂದು ನೂರಾರು ವರ್ಷಗಳಿಂದ ಬಂದಿರತಕ್ಕಂಥ ಜಾಡ್ಯ. ಇದು ನಿವಾರಣೆಯಾಗದಿದ್ದರೆ ಹಿಂದೂ ಧರ್ಮ ಹೋಗುತ್ತದೆ, ದೇಶ ಹಾಳಾಗಿ ಹೋಗುತ್ತದೆ. ಚೀಣಾ ದೇಶದವರು ನಮ್ಮ ಮೇಲೆ ದಂಡೆತ್ತಿ ಬಂದಾಗ ಜಾತಿ ಮತ ಕುಲ ಯಾವುದನ್ನೂ ಎಣಿಸದೆ ಅವರನ್ನು ಹೇಗೆ ಓಡಿಸಿದೆವೋ ಅದೇ ರೀತಿಯಲ್ಲಿ ಎಲ್ಲ ಪಕ್ಷಗಳವರೂ ಸೇರಿ ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕು. ಹಾಗೆ ಮಾಡದೆ ಇದ್ದರೆ ದೇಶಕ್ಕೆ ಒಳ್ಳೆಯದಲ್ಲ. ದೇಶಕ್ಕೆ ಒಳ್ಳೆಯದಲ್ಲದೆ ಇದ್ದರೆ ಅದರಿಂದ ಸುಖೀ ರಾಜ್ಯ ಬರುವುದಿಲ್ಲ.

ಸಮಾಜದಲ್ಲಿ ಏರುಪೇರುಗಳಿರಬಾರದು. ಇದ್ದರೆ ಬಹಳ ಅನಾಹುತಗಳಾಗುತ್ತವೆ. 50 ಲಕ್ಷ ಹರಿಜನರ ಪ್ರಜಾ ಸಂಖ್ಯೆ ಇರತಕ್ಕ ಕರ್ಣಾಟಕದಲ್ಲಿ ಏರುಪೇರಾದರೆ ಖಂಡಿತವಾಗಿಯೂ ಅದು ನಮ್ಮ ರಾಜ್ಯಕ್ಕೆ ಒಂದು ಕಳಂಕ. ಸಮಾಜ ಕಲ್ಯಾಣದ ವಿಚಾರದಲ್ಲಿ ಮಾನ್ಯ ನಾರಾಯಣಗೌಡರಾಗಲೀ, ಶ್ರೀಮತಿ ಯಶೋಧರಮ್ಮನವರಾಗಲೀ ಸರಿಯಾಗಿ ಮಾಡಿಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ಈ ಒಂದು ಖಾತೆಯನ್ನು ವಹಿಸಿರುವವರು ಏನೋ ಒಂದು ನಿರ್ಬಂಧಕ್ಕೆ ಒಳಪಟ್ಟು ಕೆಲಸ ಮಾಡುವಂತೆ ಇರಬಾರದು. ಈ ಸಂಧರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಂದು ಹಳ್ಳಿಯಲ್ಲಿ ಒಬ್ಬ ಮುಸಲ್ಮಾನ್ ಇದ್ದ. ಶ್ರೀರಾಮ ನವಮಿ ಬಂತು. ಊರಿನವರೆಲ್ಲರೂ ರಾಮ ಭಜನೆ ಮಾಡಬೇಕು, ಹಾಗೆ ರಾಮಭಜನೆ ಮಾಡದೆ ಇರುವವರು ಊರು ಬಿಟ್ಟು ಹೋಗಬೇಕು ಎಂದು ಹೇಳಿದರು. ಆಗ ಆ ಮುಸಲ್ಮಾನನು ತನ್ನ ಹೆಂಡತಿಯ ಸಂಗತ ಇದ್ದ ವಿಚಾರವನ್ನು ತಿಳಿಸಿದಾಗ ಆಕೆ ರಾಮಭಜನೆ ಮಾಡಿ, ಏನು ಮಾಡುವುದಕ್ಕಾಗುತ್ತದೆ ಎಂದು ಹೇಳಿದಳಂತೆ. ಆಗ ಆ ಮುಸಲ್ಮಾನನು ಗರುಡಕಂಭವನ್ನು ಹಿಡಿದುಕೊಂಡು ಜುಲುಂಕಿ ರಾಮ್ ರಾಮ್, ಜುಲುಂಕಿ

(ಶ್ರೀ ಎ. ಮುನಿಯಪ್ಪ)

ರಾಮ್ ರಾಮ್ ಎಂದು ಹೇಳುತ್ತಿದ್ದನಂತೆ. ಅವರ ಅರ್ಥ ಹಿಂದುಗಳು ನನ್ನನ್ನು ನಿರ್ಬಂಧ ಮಾಡಿದ್ದರಿಂದ ನಾನು ರಾಮಭಜನೆ ಮಾಡುತ್ತಿದ್ದೇನೆ ಎಂದು. ಈ ರೀತಿಯಾಗಿ ಆಗಬಾರದು ಎಂದು ಹೇಳುತ್ತಿದ್ದೇನೆ.

ಸಮಾಜ ಕಲ್ಯಾಣ ಖಾತೆಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ 50 ಲಕ್ಷ ಜನಗಳಿಗೆ ಏನು ಮಾಡುವುದಕ್ಕೆ ಆಗುತ್ತದೆ, ಅದರಿಂದ ಸಮಾಜದಲ್ಲಿ ಏನು ಮಾಡಿದ ಹಾಗೆ ಆಗುತ್ತದೆ? ಈ ವಿಚಾರವನ್ನು ಗಮನಿಸಿದರೆ ಮಾನ್ಯ ನಾರಾಯಣಗೌಡರಾಗಲೀ, ಶ್ರೀಮತಿ ಯಶೋಧರಮ್ಮನವರಾಗಲೀ ಏನೂ ಮಾಡಲಿಲ್ಲ ಎಂದು ಹೇಳತಕ್ಕದು ಸಾಧುವಲ್ಲ. ಹಿಂದೆ ಶ್ರೀಮಾನ್ ಶಂಕರ ನಾರಾಯಣ ರಾಯರು ಹರಿಜನೋದ್ಧಾರಕ್ಕಾಗಿ ಬಹಳ ಕಷ್ಟಪಟ್ಟಿದ್ದಾರೆ. ಅವರ ಮಕ್ಕಳೇ ಈಗ ಸಮಾಜ ಕಲ್ಯಾಣ ಇಲಾಖೆಯ ಡೈರೆಕ್ಟರಾಗಿದ್ದಾರೆ. ಈ ಸಮಾಜದ ಆರ್ಥಿಕಾಭಿವೃದ್ಧಿಗೆ, ವಿದ್ಯಾಭಿವೃದ್ಧಿಗೆ ಏನೇನು ಕೆಲಸ ಕಾರ್ಯಗಳನ್ನು ಮಾಡಬೇಕು ಎಂಬುದಕ್ಕೆ 10-15 ವರ್ಷಗಳ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಮಾನ್ಯ ಮಂತ್ರಿಗಳು ಈ ವಿಚಾರದ ಕಡೆಗೂ ಗಮನ ಕೊಡಬೇಕು.

ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಹರಿಜನರು ಯಾವ ಸ್ಥಿತಿಯಲ್ಲಿದ್ದರು, ಸ್ವರಾಜ್ಯ ಬಂದ ಮೇಲೆ ಈ ಹೊತ್ತು ಅವರ ಅಂತಸ್ತು ಏನಾಗಿದೆ ಎನ್ನುವುದನ್ನು ಮಾನ್ಯ ಸದಸ್ಯರು ಟೀಕೆ ಮಾಡುವುದಕ್ಕೆ ಮುಂಚೆ ಗಮನದಲ್ಲಿಟ್ಟುಕೊಳ್ಳಬೇಕು. ಹರಿಜನರಿಗೆ ವಿದ್ಯಾಭ್ಯಾಸವನ್ನು ಕೊಟ್ಟಿದ್ದಾರೆ, ಅವರು ಅಧಿಕವಾಗಿ ಮುಂದೆ ಬರುವುದಕ್ಕೆ ಸಹಾಯ ಮಾಡಿದ್ದಾರೆ. ಆದರೂ ಕಾಂಗ್ರೆಸ್ ಸರ್ಕಾರ ಏನೂ ಮಾಡಿಲ್ಲ ಎನ್ನುವ ಮಾತು ಸರಿಯಲ್ಲ. ಮಹಾತ್ಮ ಗಾಂಧೀಜಿ ಅವರು ಎಲ್ಲವನ್ನೂ ವಿಶಾಲ ಹೃದಯದಿಂದ ನೋಡುತ್ತಿದ್ದರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ನಾಲ್ಕು ವರ್ಣಾಶ್ರಮ ಧರ್ಮಗಳಿವೆ. ಬ್ರಾಹ್ಮಣರು ಬರೆದುದನ್ನು ವೈಶ್ಯರು ಒಪ್ಪುವುದಿಲ್ಲ, ಕ್ಷತ್ರಿಯರು ಬರೆದುದನ್ನು ವೈಶ್ಯರು ಒಪ್ಪುವುದಿಲ್ಲ, ವೈಶ್ಯರು ಬರೆದುದನ್ನು ಶೂದ್ರರು ಒಪ್ಪುವುದಿಲ್ಲ. ಆದರೆ ಈ ಎಲ್ಲ ಜನಾಂಗಗಳೂ ನೆಹರೂ ಅವರ ನಾಯಕತ್ವದಲ್ಲಿ ಸೇರಿ, ಡಾಕ್ಟರ್ ಅಂಬೇಡ್ಕರ್ ಅವರು ಬರೆದ ರಾಜ್ಯಾಂಗವನ್ನು ಒಪ್ಪಿದ್ದಾರೆ. ಈ ರಾಜ್ಯಾಂಗಕ್ಕೆ ಏನಾದರೂ ಅನ್ಯಾಯವಾದರೆ ಸುಪ್ರೀಂ ಕೋರ್ಟಿಗೆ ಹೋಗುವುದಕ್ಕೆ ಅವಕಾಶವಿದೆ, ಹೈಕೋರ್ಟಿಗೆ ಹೋಗುವುದಕ್ಕೆ ಅವಕಾಶವಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—ರಾಜ್ಯಾಂಗದಲ್ಲಿರುವ ಪ್ರಕಾರ ಅನುಕೂಲತೆಗಳನ್ನು ಕಾಂಗ್ರೆಸ್ ಸರ್ಕಾರ ಒದಗಿಸದೆ ಹೋದರೆ ಅದನ್ನು ಇಲ್ಲಿ ಕೇಳಬಹುದೇ ಅಥವಾ ಕೋರ್ಟಿಗೇ ಹೋಗಿ ಅವುಗಳನ್ನು ಪಡೆಯಬೇಕೇ ?

ಶ್ರೀ ಎ. ಮುನಿಯಪ್ಪ.— ರಾಜ್ಯಾಂಗದಲ್ಲಿರುವ ಪ್ರಕಾರ ನಡೆಯದೆ ಅದರಿಂದ ಹರಿಜನರ ಹಿತಕ್ಕೆ ಧಕ್ಕೆ ಬಂದರೆ, ಅವರು ಕೋರ್ಟಿಗೆ ಹೋದರೆ ಅದರಿಂದಾಗಿ ತಗಲುವ ಕೋರ್ಟು ವೆಚ್ಚವನ್ನು ಸರ್ಕಾರವೇ ವಹಿಸಿಕೊಂಡು ನ್ಯಾಯವನ್ನು ದೊರಕಿಸಿಕೊಡಲು ಸಿದ್ಧವಾಗಿದೆ ಎಂದು ಸರ್ಕಾರ ಘೋಷಣೆ ಮಾಡಿದೆ.

ವಿದ್ಯಾಭ್ಯಾಸದ ವಿಚಾರವಾಗಿ ಎಲ್ಲರೂ ಹೇಳಿದ್ದಾರೆ. ಹಾಸ್ಟಲುಗಳ ವಿಷಯವನ್ನು ತೆಗೆದುಕೊಂಡರೆ 20 ವರ್ಷಗಳ ಹಿಂದೆ ಎಷ್ಟು ಜನರಿಗೆ ಅವುಗಳಲ್ಲಿ ಅವಕಾಶವಿತ್ತೋ ಅಷ್ಟೇ ಜನರಿಗೆ ಇವೊತ್ತೂ ಅಲ್ಲಿ ಅವಕಾಶವಿದೆ. ಮಾನ್ಯ ಮಂತ್ರಿಯವರನ್ನು ನಾನು ಕೆಲವು ಕಡೆ ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಒಬ್ಬ ಸೂಪರಿಂಡೆಂಟರಿದ್ದಾರೆ ಅವರ ಸಂಸಾರವೂ ಹಾಸ್ಟಲಿನ ಖರ್ಚಿನಲ್ಲಿಯೇ ನಡೆಯಬೇಕು. ಹಾಸ್ಟಲಿಗೆ ಬರುವ ರೇಷನ್‌ನಲ್ಲೇ ಅವರೂ ಊಟ ಮಾಡುತ್ತಾರೆ. ಪ್ರತಿಯೊಂದು ಹಾಸ್ಟಲಿಗೂ ಸಂಬಂಧಪಟ್ಟಂತೆ ಸಲಹಾ ಸಮಿತಿಗಳನ್ನು ನೇಮಕ ಮಾಡಿ ಎಂದು ನಾನು ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಮಾಡುವುದಾಗಿ ಹೇಳಿದ್ದರು. ಅದರೆ ಇವೊತ್ತಿನವರೆಗೂ ಏನೂ ಮಾಡಿಲ್ಲ. ಈ ಸನ್ನಿವೇಶದಲ್ಲಿ ವಿದ್ಯಾಭ್ಯಾಸದ ದೃಷ್ಟಿಯಿಂದ, ತಕ್ಷಣ ಸಲಹಾ ಸಮಿತಿಗಳನ್ನು ಮಾಡಿ, ಅವುಗಳ ಮೇಲ್ವಿಚಾರಣೆಗೆ ಹಾಸ್ಟಲುಗಳನ್ನು ಒಳಪಡಿಸಿ, ಅವರ ರಿಪೋರ್ಟನ್ನು ಆಗಾಗ್ಗೆ ತರಿಸಿಕೊಳ್ಳಬೇಕು.

ಎಡಗೈ, ಬಲಗೈ ಎಂಬ ಭೇದಗಳ ವಿಚಾರವಾಗಿ ಮಾನ್ಯ ಪುಟ್ಟರಂಗನಾಥ ಅವರು ಹೇಳಿದರು. ಈ ವಾದ 1947ಕ್ಕೇ ಹೋಗಿ ಬಿಟ್ಟಿದೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಮಾನ್ಯ ಮುಖ್ಯ ಮಂತ್ರಿಗಳು ಸಾರ್ವಜನಿಕ ಸಭೆಯಲ್ಲಿ ಹೇಳಿದ ಮಾತನ್ನು ನಾನು ಹೇಳಿದೆ. ಹಾಸ್ಯಕ್ಕೆ ನಾನು ಹೇಳಲಿಲ್ಲ.

ಶ್ರೀ ಎ. ಮುನಿಯಪ್ಪ.—ಹಿಂದು ಮುಸಲ್ಮಾನರು ಒಂದಾಗಿ ಬಂದರೆ ಸ್ವರಾಜ್ಯ ಕೊಡುತ್ತೇವೆಂದು ಇಂಗ್ಲೀಷಿನವರು ಹೇಳುತ್ತಿದ್ದರು. ನಮ್ಮ ದೇಶವನ್ನು ನಮಗೆ ಕೊಡಿ, ಏನಾದರೂ ಮಾಡಿಕೊಳ್ಳುತ್ತೇವೆಂದು ಆಗ ಎಲ್ಲರೂ ಹೇಳಿದೆವು. ಒಂದು ವೇಳೆ ಈಗ ಯಾರಾದರೂ ಎಡಗೈ, ಬಲಗೈ ಎಂಬ ಭೇದಗಳಿಲ್ಲದೆ ಎಲ್ಲರೂ ಒಂದಾಗಿ ಬನ್ನಿ ಎಂದು ಹೇಳಿದರೆ ಇಂಗ್ಲೀಷಿನವರಿಗೆ ಹಿಂದೆ ಏನು ಹೇಳಿದೆವೋ ಅದೇ ರೀತಿ ಹೇಳೋಣ. ಆದುದರಿಂದ ಎಡಗೈ, ಬಲಗೈ ಎಂದು ಹೇಳುವುದು ಅಸ್ಪೃಶ್ಯತೆಯನ್ನು ಇನ್ನೂ ಕೆಲವು ದಿನ ಮುಂದಕ್ಕೆ ತಳ್ಳುವುದಕ್ಕೆ ಹೇಳುವಂಥ ಮಾತುಗಳು. ಆದುದರಿಂದ ಈ ವಿಚಾರದಲ್ಲಿ ಸರ್ಕಾರದವರು ಗಮನ ಕೊಡಬೇಕು.

ಸೊಸೈಟಿಗಳು ಎಂದು ಮಾಡಿದ್ದಾರೆ. ಹರಿಜನರು ಯಾರಾದರೂ ಚುನಾವಣೆಗಳಲ್ಲಿ ಆರಿಸಿ ಬರುವುದಕ್ಕೆ ಸಾಧ್ಯವಾಗುತ್ತದೆಯೇ ? ವಿಧಾನ ಸಭೆಗೆ ಹರಿಜನರಿಗೆ ಮೀಸಲು ಸ್ಥಾನಗಳನ್ನು ಇಡಲಾಗಿದೆ. ಎಲ್ಲ ವಿಚಾರಗಳಲ್ಲಿಯೂ ಹರಿಜನರಿಗೆ 18 ಪರ್ಸೆಂಟ್ ಕೊಡಬೇಕು ಎಂದು ಹೇಳುತ್ತಾರೆ. ಆದರೆ ಸೊಸೈಟಿಗಳಲ್ಲಿ ಇಲ್ಲದೆ ಹರಿಜನರು ಆರಿಸಿ ಬರುವುದಕ್ಕೆ ಆಗುವುದಿಲ್ಲ. ಆದುದರಿಂದ ಹರಿಜನರಿಗೆ ಸೂಕ್ತ ಪ್ರಾತಿನಿಧ್ಯವನ್ನು ಸೊಸೈಟಿಗಳಲ್ಲಿ ದೊರಕಿಸಿಕೊಡಬೇಕು ಎಂದು ಮಾನ್ಯ ಸಹಕಾರ ಸಚಿವರಲ್ಲಿ ನಾನು ಕೇಳಿದಾಗ ಯೋಚನೆ ಮಾಡುತ್ತೇನೆಂದು ಹೇಳಿದರು. ಆ ವಿಚಾರದಲ್ಲಿ ಮಾನ್ಯ ಸಮಾಜಕಲ್ಯಾಣ ಇಲಾಖೆಯ ಮಂತ್ರಿಗಳೂ ಸ್ವಲ್ಪ ಸಹಾಯ ಮಾಡಬೇಕು ಮತ್ತು ಈ ವ್ಯವಸ್ಥೆ ಆಗುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಹರಿಜನ ಗಿರಿಜನ ಸೊಸೈಟಿಗಳಿವೆ. ಅದಕ್ಕೆ ಸಹಕಾರ ಸಂಘಗಳ ಇನ್‌ಸ್ಪೆಕ್ಟರೇ ಕಾರ್ಯದರ್ಶಿಯಾಗಿದ್ದಾರೆ. ಈ ಎರಡು ಸೊಸೈಟಿಗಳಲ್ಲಿ ಬಾಗೇಪಲ್ಲಿ ಸೊಸೈಟಿಯ ಷೇರು ದುಡ್ಡು ತಿಂದು ಹಾಕಿದ್ದಾರೆ. ಇನ್ನೊಂದು ಕಡೆ ಗುಡಿ ಬಂಡ ತಾಲ್ಲೋಕಿನಲ್ಲಿ ಮನೆಗಳಿಗೆ ಕೊಡುವ ದುಡ್ಡನ್ನು ತಿಂದು ಹಾಕಿದ್ದಾರೆ. ಆದುದರಿಂದ ಅಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕಾಗಿದೆ. ಸುಮ್ಮನೆ ಒಂದು ಸೊಸೈಟಿಯನ್ನು ಮಾಡಿದ್ದೇವೆ, ಅದು ಕಾರ್ಪೊರೇಷನ್ನಿಗೆ ಸಂಬಂಧಪಟ್ಟದು, ನಮಗೂ ಅದಕ್ಕೂ ಸಂಬಂಧವಿಲ್ಲ ಎನ್ನುವ ನಿಲುವು ತೆಗೆದುಕೊಂಡು ಕುಳಿತುಕೊಳ್ಳಬಾರದು.

5-30 P.M.

ಇನ್ನೊಂದು ವಿಚಾರ. ಸಮಾಜವಾದ ಈಗ ಎಲ್ಲಿದೆ ? ಒಬ್ಬ ರಾಚಯ್ಯನವರು, ಒಬ್ಬ ನಾರಾಯಣಗೌಡರು ಮಾಡಿದರೆ ಆಗುವುದಿಲ್ಲ, ಎರಡೂವರೆ ಕೋಟಿ ಜನರೆಲ್ಲರೂ ಪ್ರಯತ್ನ ಮಾಡಿದರೆ ಸಮಾಜವಾದ ಸರಿಯಾಗಿ ಜಾರಿಗೆ ಬರಬಹುದು, ಅದು ಕಾರ್ಯಗತವಾಗಬೇಕು, ಸುಮ್ಮನೆ ಇಲ್ಲಿ ಭಾಷಣಮಾಡಿದರೆ ಪ್ರಯೋಜನವಾಗುವುದಿಲ್ಲ. ಇವತ್ತಲ್ಲ ನಾಳೆ ಸಮಾಜವಾದವನ್ನು ಜಾರಿಗೆ ತರುವುದಾಗಿ ನೀವು ಹೇಳಬಹುದು. ಆದರೆ ಶ್ರೀ ನಾರಾಯಣಗೌಡರು ಬಂದಮೇಲೂ ಕೂಡ ಅವರ ಬಂಧುಗಳು ಫುಟ್‌ಪಾತಿನಮೇಲೆ ಮಲಗಿಕೊಳ್ಳುತ್ತಿದ್ದಾರೆ. ಬಂಧುಗಳು ಎಂದರೆ ಅವರ ಸ್ವಂತ ಬಂಧುಗಳಲ್ಲ, ಅವರ ಖಾತೆಗೆ ಸಂಬಂಧಪಟ್ಟ ಎಡಗೈನವರು, ಬಲಗೈನವರು, ಕೊರಚ, ಕೊರಮ, ಲಂಬಾಣಿ, ಸುಡಗಾಡಸಿದ್ಧ, ಹಕ್ಕಿ ಬಿಕ್ಕಿ ಮುಂತಾದವರು. ಅವರು ಕೊಳಚೆ ಪ್ರದೇಶವಿರುವ ಕಡೆ ಗುಡಿಸಲುಗಳನ್ನು ಕಟ್ಟಿಕೊಂಡಿರುತ್ತಾರೆ, ದೇವಸ್ಥಾನವಿರುವ ಕಡೆ ಊರಬಾಗಿಲನಲ್ಲಿರುತ್ತಾರೆ. ಇಂಥವರನ್ನು ಅಲೆಮಾರಿಗಳನ್ನು ಹೀಗೆಯೇ ಬಿಟ್ಟರೆ ವಿದ್ಯಾ ಬುದ್ಧಿ ಇಲ್ಲದೆ ಇದ್ದರೆ ಮುಂದೆ ಅವರು ಪುಂಡುಪೋಕರಿಗಳಾಗುವುದರಿಂದ ಸಮಾಜದ ಸ್ಥಿತಿಗತಿ ಯೇನಾಗುವುದು ಎಂಬುದನ್ನು ಯೋಚನೆಮಾಡಿ. ಅವರನ್ನು ಸುಧಾರಿಸದಿದ್ದರೆ ಮುಂದೆ ಅವರ ಹಾವಳಿಯನ್ನು ತಡೆಯಲು ಮಿಲಿಟರಿಯನ್ನು ಎಲ್ಲಿಂದ ತರುವುದು ? ಅವರಿಗೂ ಪೋಲೀಸ್ ಮಂತ್ರಿಗಳಾದ ಶ್ರೀ ಆರ್. ಎಂ. ಪಾಟೀಲರಿಗೂ ಸಂಪರ್ಕ ಬಹಳ ಜಾಸ್ತಿ. ಯಾವಾಗ ಕೆಲಸವಿಲ್ಲ, ಯಾವಾಗ ತಿಂಡಿಯಿಲ್ಲ ಆಗ ಇವರ ಹಾವಳಿ ಹೆಚ್ಚುವುದು. ಒಂದು ದಿವಸ ಊಟವಿಲ್ಲದಿದ್ದರೆ ಸುಳ್ಳು ಹೇಳುತ್ತಾರೆ, ಎರಡನೆ ದಿವಸ ಊಟವಿಲ್ಲದಿದ್ದರೆ ಕಳ್ಳತನಮಾಡುತ್ತಾರೆ, ಮೂರನೆಯ ದಿವಸ ಊಟವಿಲ್ಲದಿದ್ದರೆ ಲೂಟಿಮಾಡುತ್ತಾರೆ, ನಾಲ್ಕನೆ ದಿವಸ ಊಟವಿಲ್ಲದಿದ್ದರೆ ಹೊಡೆದು ಅಟ್ಟುತ್ತಾರೆ, ಐದನೆ ದಿವಸ ಊಟವಿಲ್ಲದಿದ್ದರೆ ಖೂನಿ ಮಾಡುತ್ತಾರೆ ಎಂದು ಹಿಂದೆ ಹೇಳುತ್ತಿದ್ದರು. ಹಾಗಿರುವಾಗ ಈ ಜನಾಂಗವನ್ನು ಹೀಗಿಯೋ ಬೆಳೆಸಿಕೊಂಡುಹೋದರೆ ಹೇಗೆ ? ಹರಿಜನರು ಹಕ್ಕಿಬಿಕ್ಕಿ, ಸುಡುಗಾಡಸಿದ್ಧ, ಕೊರಚ, ಲಂಬಾಣಿ ಮುಂತಾದ ಜಂಗಡಗಳ ಸುಧಾರಣೆ ಇಂದು ಆಗಬೇಕಾಗಿದೆ. ಸಮಾಜ ಕಲ್ಯಾಣ ಖಾತೆ ಸಚಿವರ ಖಾತೆಯಲ್ಲಿರುವವರೆಲ್ಲಾ ಇಂಥವರೇ. ನಾರಾಯಣಗೌಡರ ಫ್ಯಾಕ್ಟರಿಯಲ್ಲಿ ಅವರ ಕೆಲಸವೇನೆಂದರೆ ರಸ್ತೆ ಗುಡಿಸುವುದು, ಕಕ್ಕಸು ಎತ್ತುವುದು, ಕನ್ನ ಹಾಕುವುದು ಮುಂತಾದ್ದು. ಹೀಗೆಯೇ ಅವರನ್ನು ಬಿಟ್ಟರೆ ಮುಂದೆ ಗತಿಯೇನು ? ಶ್ರೀ ಶಂಕರೇಗೌಡರು ಅವರ ಫ್ಯಾಕ್ಟರಿಯಲ್ಲಿ ಐ. ಎ. ಎಸ್., ಐ. ಪಿ. ಎಸ್. ಆಫೀಸರು

(ಶ್ರೀ ಎ. ಮುನಿಯಪ್ಪ)

ಗಳು, ಜಿಲ್ಲಾಧಿಕಾರಿಗಳು, ಮಂತ್ರಿಗಳು, ಏರೋಪ್ಲೇನ್ ನಡೆಸುವವರು, ರಾಜಕೀಯ ಮುಖಂಡರು ಮುಂತಾದವರನ್ನು ತಯಾರುಮಾಡುವರು. ಅದೇ ನಮ್ಮ ಶ್ರೀ ನಾರಾಯಣಗೌಡರ ಖಾತೆಯಲ್ಲಿ, ಕಾರ್ಖಾನೆಯಲ್ಲಿ ಅಂಥವರು ತಯಾರಿಸಲಿಲ್ಲ. ಮಾನ್ಯ ಸಚಿವರ ಕೈಗೆ ಕೇವಲ 50 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಈ ಜನರ ಸುಧಾರಣೆ ಅವರು ಹೇಗೆ ಮಾಡಲು ಸಾಧ್ಯ? ಅಡ್ವೈಜರಿ ಬೋರ್ಡಿನಲ್ಲಿ ನಾವು ಅನೇಕ ಸಲಹೆಗಳನ್ನು ಮಾಡಿದ್ದೇವೆ. ಹರಿಜನರ ಉದ್ಧಾರವಾಗಬೇಕಾದರೆ ಅಸ್ಪೃಶ್ಯತೆಯ ಬಗ್ಗೆ ಚೆನ್ನಾಗಿ ಪ್ರಚಾರವಾಗಬೇಕು, ರೇಡಿಯೋದಲ್ಲಿ ಹೇಳಬೇಕು, ಶಾಲೆಗಳಿಗಿರುವ ಪಠ್ಯ ಪುಸ್ತಕಗಳಲ್ಲಿ ಅಸ್ಪೃಶ್ಯತೆ ನಿವಾರಣೆಯಾಗುವವರೆಗೆ ಮೋಕ್ಷವಿಲ್ಲ ಎಂದು ತಿಳಿಯುವಹಾಗೆ ಹೇಳಲು ತಕ್ಕ ಪಾಠಗಳನ್ನು ಸೇರಿಸಿ ಬೋಧೆಮಾಡಬೇಕು. ಅಸ್ಪೃಶ್ಯತೆ ವಿಚಾರದಲ್ಲಿ ಪ್ರಕಟಣೆಗಳನ್ನು ಹೊರಡಿಸಬೇಕು. ಇದೆಲ್ಲಾ ಆದಮೇಲೆ ಪ್ರಾಕ್ಟಿಕಲ್ಲಾಗಿ ಕೆಲಸಕಾರ್ಯವಾಗಿದೆಯೋ ಇಲ್ಲವೇ ಎಂಬುದನ್ನು ಮಂತ್ರಿಗಳು ನೋಡಬೇಕು. ನೋಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಯಾವ ಯಾವ ಇಲಾಖೆಯಲ್ಲಿ ಸೇಕಡ 18 ಹುದ್ದೆಗಳನ್ನು ಮೀಸಲಾಗಿಟ್ಟಿರುವುದನ್ನು ಕೊಟ್ಟಿಲ್ಲವೆಂಬುದನ್ನು ವೆರಿಫೈ ಮಾಡುವುದಾಗಿ ಹೇಳಿದ್ದಾರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ, ಸಂತೋಷ. ಈ ಕೆಲಸವನ್ನು ಮಂತ್ರಿಗಳು ಮಾಡಿ ಸುಖೀ ರಾಜ್ಯವನ್ನು ಕಟ್ಟಬೇಕು, ಸತ್ಪ್ರಜೆಗಳಾಗುವಂತೆ ಮಾಡಬೇಕು. ಹಾಗಿಲ್ಲದೆ ಸುಮ್ಮನೆ ನಾವೊಂದು ಹೇಳುವುದು ನೀವೊಂದು ಹೇಳುತ್ತಾ ಹೋಗುವುದು ಇದರಿಂದೇನೂ ಪ್ರಯೋಜನವಾಗುವುದಿಲ್ಲ. ಒಂದು ವರ್ಷದಿಂದ ಹೇಳುತ್ತಿರುವುದನ್ನು ನಾವು ಕೇಳಿದ್ದೇವೆ. ಆದರೆ ಪರಿಣಾಮವೇನಾಗಿದೆ? ಹೋದ ವರ್ಷ ಮತ್ತು ಈ ವರ್ಷ ಅಸ್ಪೃಶ್ಯತೆಯ ಬಗ್ಗೆ ತಕ್ರೀರುಗಳೆಷ್ಟಾಗಿವೆಯೆಂಬುದನ್ನು ನೋಡಿ. ವಿದ್ಯಾರ್ಹತೆಯನ್ನು ಗಮನಕ್ಕೆ ತೆಗೆದುಕೊಂಡು ಜಾತಿಯ ಆಧಾರವಿಟ್ಟುಕೊಂಡು ಹರಿಜನರ ಬಾಳನ್ನು ಹಾಳುಮಾಡಿದರೆ ದೇಶ ಉದ್ಧಾರವಾಗುವುದಿಲ್ಲ, ಸುಮ್ಮನೆ ವಾದಮಾಡಿದರೆ ಪ್ರಯೋಜನವಾಗುವುದಿಲ್ಲ. ನಾವು ಕೇಳುವುದಿಷ್ಟೆ ಇರುವುದಕ್ಕೊಂದು ಮನೆ, ಹೊದೆಯುವುದಕ್ಕೆ ಬಟ್ಟೆ, ತಿನ್ನುವುದಕ್ಕೆ ಆಹಾರ. ಇದಕ್ಕೆ ತಕ್ಕ ವ್ಯವಸ್ಥೆಮಾಡದೆ ಸುಮ್ಮನೆ ಸಮಾಜ ಕಲ್ಯಾಣ ಮಾಡಿರುವುದಾಗಿ ಹೇಳಿದರೆ ಸಹಾಯವಾಗುವುದಿಲ್ಲ. ಸೆಂಟ್ರಲ್ ಸಮಾಜ ಕಲ್ಯಾಣ ಕೇಂದ್ರಗಳಿವೆ. ಆದರೆ ಅಲ್ಲಿ ಒಂದಾದರೂ ಹರಿಜನರ ಮಗುವಿದೆಯೋ ಎಂಬುದನ್ನು ನೋಡಬೇಕು. ಚೆನ್ನಾಗಿ ಊಟ ಮಾಡಿದವರಿಗೆ ಮಿಠಾಯಿ ಕೊಟ್ಟಹಾಗೆ, ಮಿಠಾಯಿ ತಿಂದವರಿಗೆ ಜಿಲೇಬಿ ಕೊಟ್ಟಹಾಗೆ ಈಗ ಆಗಿದೆ. ತಕ್ರೀರಿನ ವಿಚಾರದಲ್ಲಿ ಒಂದು ಮಾತು. ಈಗ ಜನನ ಮರಣದ ಲೆಕ್ಕವನ್ನು ತಿಂಗಳಿಗೊಂದು ಸಲ ತರಿಸುತ್ತಿದ್ದಾರೆ, ಹೋಂ ಸೆಕ್ರೆಟರಿಗಳು ಇಲ್ಲಿದ್ದಾರೆ, ಜನನ ಮರಣದ ಲೆಕ್ಕ ಕಳಿಸುವಾಗ ಪ್ರತಿಯೊಂದು ಗ್ರಾಮದಲ್ಲೂ ಅಸ್ಪೃಶ್ಯತೆಯ ಬಗ್ಗೆ ತಕ್ರೀರುಗಳೆಷ್ಟಾಗಿವೆ ಎಂಬುದನ್ನೂ ತಿಳಿಸಬೇಕು ಎಂದು ಆಜ್ಞೆ ಮಾಡಬೇಕು. ಹಿಂದೆ ದಿವಾನ್ ಮಾಧವರಾಯರು ಬಿಗಿಯಾಗಿದ್ದರು, ಇವರ ಮಕ್ಕಳು ಎನ್. ಲಕ್ಷ್ಮಣರಾಯರು ನಮ್ಮ ಜಿಲ್ಲಾಧಿಕಾರಿಗಳಾಗಿದ್ದಾಗ ಯಾರೋ ಒಬ್ಬ ಹರಿಜನರಿಗೆ ಅರ್ಧ ಕ್ಷೌರ ಮಾಡಿದ್ದಕ್ಕೆ ಆತನನ್ನು ಜೈಲಿಗೆ ಕಳುಹಿಸಿದರು. ಈಗ ದಕ್ಷರಾದ ಹೋಂ ಸೆಕ್ರೆಟರಿಗಳಿದ್ದಾರೆ, ಶ್ರೀ ನಾರಾಯಣಗೌಡರಿದ್ದಾರೆ. ಇವರೆಲ್ಲಾ ಹರಿಜನರ ಮತ್ತು ಹಿಂದುಳಿದವರ ಉದ್ಧಾರಕ್ಕೆ ಸರಿಯಾದ ವ್ಯವಸ್ಥೆಮಾಡಿ, ತಮ್ಮ ಸಹಕಾರ ಕೊಟ್ಟು ಸಮಾಜ ಕಲ್ಯಾಣವನ್ನು ಸಾಧಿಸಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಸನ್ಮಾನ್ಯ ಉಪಾಧ್ಯಕ್ಷರೇ, ಈ ಡಿಮ್ಯಾಂಡ್ ನಮ್ಮ ಮಾನ್ಯ ಸ್ನೇಹಿತರು ಹೇಳಿದಹಾಗೆ ಬಹಳ ಪ್ರಾಮುಖ್ಯವಾದುದು. ಇದರ ವಿಚಾರದಲ್ಲಿ ನಮ್ಮ ಹರಿಜನ ಬಂಧುಗಳು ಕೆಲವರು ಒಂದು ಶಂಕೆಯನ್ನು ವ್ಯಕ್ತಪಡಿಸಿದರು. ಹರಿಜನರಲ್ಲದ ಯಾರೂ ಈ ವಿಷಯದಲ್ಲಿ ಆಸಕ್ತಿ ವಹಿಸಿದಹಾಗೆ ಕಾಣುವುದಿಲ್ಲ ಎಂದು ಹೇಳಿದರು. ನಾನಾದರೂ ಹೇಳುತ್ತೇನೆ, ಯಾರೂ ಆಸಕ್ತಿ ತೋರಿಸದಿದ್ದರೆ ಈ ಪ್ರಶ್ನೆ ನಮ್ಮ ಹಿಂದೂಸ್ಥಾನವನ್ನು ಎಲ್ಲಿಗೆ ತೆಗೆದುಕೊಂಡುಹೋಗಿ ಬಿಡುವುದು ಎಂಬುದನ್ನು ಬೇರೆ ಕಡೆಯ ಉಪಮಾನಗಳಿಂದ ತಿಳಿಯಬಹುದಾಗಿದೆ. ಇಂದು ಅಮೇರಿಕಾ ನೋಡಬಹುದು, ಅಲ್ಲಿ ನೀಗ್ರೋಗಳ ಪ್ರಶ್ನೆ ದೊಡ್ಡ ಪ್ರಶ್ನೆಯಾಗಿ ಅಲ್ಲಿನ ಬಿಳಿಯ ಜನರು ಅದನ್ನು ಬಿಡಿಸಲೇಬೇಕು, ಇಲ್ಲದಿದ್ದರೆ ಉಳಿಗಾಲವಿಲ್ಲ ಎಂಬುದನ್ನು ಮನಗಂಡಿದ್ದಾರೆ. ಅದೇ ಪರಿಸ್ಥಿತಿ ಇಲ್ಲಿ ನಮ್ಮ ದೇಶದಲ್ಲೂ ಒಂದಲ್ಲ, ಒಂದು ದಿವಸ ಬರಬಹುದು. ಆದುದರಿಂದ ಸವರ್ಣೀಯರ ಉಳಿಗಾಲಕ್ಕಾದರೂ ಅದಷ್ಟು ಜಾಗ್ರತೆ ಈ ಪ್ರಶ್ನೆಯನ್ನು ಬಿಡಿಸುವುದಕ್ಕೆ ಎಲ್ಲರೂ ಪ್ರಯತ್ನ ಮಾಡೇತೀರಬೇಕು. ಹಾಗೆ ಮಾಡದಿದ್ದರೆ ಈ ಪ್ರಶ್ನೆ ಬಗೆಹರಿಯುವುದಿಲ್ಲ. ಕೆಲವರು ಏನೂ ಆಗಿಲ್ಲವೆಂದು ಹೇಳಿದರು. ಆದರೆ ನಿಷ್ಪಕ್ಷಪಾತ

ವಾಗಿ ಹೇಳುತ್ತೇನೆ, 1918ನೆಯ ಇಸವಿಯಲ್ಲಿ ಇಂಗ್ಲೀಷ್ ಒಂದನೆಯ ಕ್ಲಾಸಿನಲ್ಲಿ ನಾನು ಓದುತ್ತಿದ್ದೆ, 50 ವರ್ಷವಾಯ್ತು, ಆಗ ಡಾ॥ ಸಿ. ಆರ್. ರೆಡ್ಡಿಯವರು ಮೊದಲು ನಮ್ಮಲ್ಲಿ ಹರಿಜನರು ಶಾಲೆಗಳಲ್ಲಿ ಸವರ್ಣೀಯರ ಜೊತೆ ಸೇರಬಹುದು ಎಂದು ಒಳ್ಳೆಯ ಅವಕಾಶವನ್ನು ಕಲ್ಪಿಸಿದರು. ಈಗ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಎಂದು ಹೇಳುವಹಾಗೆ ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜುಕೇಷನ್ ಎಂದು ಆಗ ಹೇಳುತ್ತಿದ್ದರು. ಮಾನ್ಯಶ್ರೀ ರಂಗನಾಥ್ ಅವರ ಪೂಜ್ಯ ತಂದೆಯವರು ನನ್ನ ಜೊತೆಯಲ್ಲಿ ಓದುತ್ತಿದ್ದರು, ನನಗೆ ಜ್ಞಾಪಕವಿದೆ. ಮೊದಲು ಹರಿಜನರು ಶಾಲೆಗಳಿಗೆ ಬಂದಾಗ ಅವರು ಒಂದು ಬಾಗಿಲಿನಲ್ಲಿ ಬಂದರೆ ಸವರ್ಣೀಯ ಹಿಂದುಗಳು ಇನ್ನೊಂದು ಬಾಗಿಲಿನಲ್ಲಿ ಹೊರಗೆ ಹೋದರು. ಹರಿಜನರ ಜೊತೆಯಲ್ಲಿ ಓದುವುದು ಎಲ್ಲಾದರೂ ಉಂಟೇ ಎಂದು ಅವರು ಹೊರಟುಹೋದರು.

ತಾವು ಸರ್ಕಾರ ಮಾಡಿದರೆ ಒಳ್ಳೆಯದಲ್ಲ. ಇದನ್ನು ಮುಂದುವರಿಸಿಕೊಂಡು ಹೋಗದೆ, ಬರಬರುತ್ತಾ ಸ್ಕೂಲುಗಳಿಗೆ ಬರುವುದಕ್ಕೆ ಬೇರೆ ಬಟ್ಟೆ, ಮನೆಗೆ ಹೋದಾಗ ಬೇರೆ ಬಟ್ಟೆ ಅಂತ ಶುರು ಮಾಡಿಕೊಂಡು ಈಗ ಅದೆಲ್ಲಾ ಹೋಗಿವೆ ಒಂದು ಮಟ್ಟವನ್ನು ನೋಡುತ್ತಾ ಇದ್ದೇವೆ. ಎಲ್ಲಿ ನೋಡಿದರೂ ಕೂಡ ಜನಗಳಲ್ಲಿ ಮಾನಸಿಕ ಪರಿವರ್ತನೆಯಾಗಿದೆ ಎಂಬುದನ್ನು ನಾವು ನಿಷ್ಪಕ್ಷಪಾತವಾಗಿ ಎಲ್ಲಿ ಬೇಕಾದರೂ ಹೇಳಬಹುದು. ಆದರೆ ಒಂದು ಏನಾಗಿದೆ ಎಂದರೆ, ಹರಿಜನರ ಜೊತೆಗೆ ಕುಳಿತುಕೊಂಡು ಊಟ ಮಾಡುತ್ತೇವೆ, ಅವರನ್ನು ಮುಟ್ಟುತ್ತೇವೆ, ಅವರ ಜೊತೆಯಲ್ಲಿ ಇರುತ್ತೇವೆ. ಆದರೆ ಕೊಡುವುದು, ಕೂಡಿ ಊಟಮಾಡುವುದು, ಕುಲ ಎಣಿಸುವುದು ಇದು ಮಟ್ಟಿಗೆ ಹೋಗಿಲ್ಲ. ಎಲ್ಲಿ ನೋಡಿದರೂ ನಾವು ಅಂತಹವರು ನೀವು ಇಂತಹವರು, ಈ ಜಾತಿ ಆ ಜಾತಿ ಎಂಬುದು ಮನಸ್ಸಿನಲ್ಲಿ ಇದೆ. ನಾವೆಲ್ಲರೂ ಒಂದಾಗಿ ಮುಂದುವರಿಯಬೇಕೆಂಬ ಭಾವನೆಯನ್ನು ನಾವು ಇನ್ನೂ ಕಾಣದೆ ಇರತಕ್ಕ ಸನ್ನಿವೇಶದಲ್ಲಿ ಇದ್ದೇವೆ. ಅದು ಆದಷ್ಟು ಜಾಗ್ರತೆಯಾಗಿ ಹೋಗಿಯೇ ತೀರಬೇಕು. ಒಂದು ಅಂಶವನ್ನು ಮಾತ್ರ ಈಗ ನಾನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ನಮ್ಮ ರಾಜ್ಯಾಂಗವನ್ನು ಬರೆದಂತಹ ಡಾಕ್ಟರ್ ಅಂಬೇಡ್ಕರ್‌ರವರು ಬಹಳ ಗಣ್ಯವಕ್ತಿಗಳು, ನಾನು ಕೆಲವು ವರ್ಷಗಳ ಕಾಲ ಅವರ ಜೊತೆಯಲ್ಲಿ ಇದ್ದು ಅವರ ನಿಕಟ ಸಂಪರ್ಕದಿಂದ ಅವರು ಯಾವ ರೀತಿ ಈ ಪ್ರಶ್ನೆಯನ್ನು ಬಿಡಿಸಬೇಕೆಂದು ಯೋಚನೆ ಮಾಡಿದ್ದರು, ಅವರು ಏನು ಹೇಳುತ್ತಾ ಇದ್ದರು ಎಂದರೆ ಸವರ್ಣ ಹಿಂದೂಗಳ ಮನಸ್ಸಿನಲ್ಲಿ ಈ ಭಾವನೆ ಬಂದಾಗ ಮಟ್ಟಿಗೆ ಈ ಪ್ರಶ್ನೆ ಬಗೆ ಹರಿಯುತ್ತದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರು, ಕೊನೆ ಕೊನೆಗೆ ಅವರು ನಿರುತ್ಸಾಹಿಗಳಾಗಿ, ಅವರು ತಮ್ಮ ಅಸುವನ್ನು ನೀಗುವುದಕ್ಕೆ ಕೆಲವು ವರ್ಷಗಳ ಮುಂಚೆ ನಮಗೆ ಮೋಕ್ಷ ಇಲ್ಲ ಎಂದು ತಿಳಿದುಕೊಂಡು ಬೌದ್ಧಮತಕ್ಕೆ ಬಹಳ ಜಿಗುಪ್ಸೆಯಿಂದ ತಮ್ಮ ಜೊತೆಯಲ್ಲಿ ಇನ್ನೂ ಕೆಲವು ಜನರನ್ನು ಕರೆದುಕೊಂಡು ಹೊರಟು ಹೋದರು. ಅದನ್ನು ನಾನು ನೋಡಿದ್ದೇನೆ. ಅವರ ಆಶೆಮಾತ್ರ ಈ ಜನ ಮುಂದೆ ಬರಬೇಕೆಂಬುದನ್ನು ಅವರು ಬರೆದಿರತಕ್ಕ ಪುಸ್ತಗಳನ್ನು ನೋಡಿದರೆ ಎಷ್ಟು ಕಳಕಳಿಯಿಂದ ಯೋಚನೆ ಮಾಡುತ್ತಾ ಇದ್ದರು ಎಂಬುದನ್ನು ನೋಡಬಹುದಾಗಿದೆ. ರಾಜ್ಯಾಂಗ ಬರೆಯುವಾಗ ಸ್ಪಷ್ಟವಾಗಿ ಹೇಳಿದರು, ಕೆಲವರು ಹತ್ತು ವರ್ಷದ ರಿಸರ್ವೇಷನ್ ಇರಬಾರದು, ಏಕೆ ಇರಬೇಕು ಎಂದು ವಾದ ಮಾಡಿದರು, ಆಗ ಅವರು ಬಹಳ ದಿಟ್ಟತನದಿಂದ ಹತ್ತು ವರ್ಷ ಹರಿಜನರು ಮತ್ತು ಗಿರಿಜನರಿಗೆ ರಿಸರ್ವೇಷನ್ ಇರಬೇಕು ಎಂದು ವಾದಿಸಿದರು. ಏಕೆಂದರೆ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಮತ್ತು ವಿದ್ಯಾಭ್ಯಾಸದ ದೃಷ್ಟಿಯಿಂದಲೂ ಅವರು ಎಲ್ಲರ ಜೊತೆಯಲ್ಲೂ ಸರಿಸಮಾನತೆಗೆ ಬರುವವರೆಗೂ ಇದು ಇರಬೇಕಾದ್ದು ಅತ್ಯವಶ್ಯಕ ಎಂದು ಹೇಳಿದರು. ಅದರಂತೆ ಆರ್ಟಿಕಲ್ 334 ಈ ದಿವಸ ನಮ್ಮ ರಾಜ್ಯಾಂಗದ ಕಡತದಲ್ಲಿ ಉಳಿದಿದೆ, ಆದರೆ ಪರಿಸ್ಥಿತಿ ಏನಾಯಿತು? ಹತ್ತು ವರ್ಷದಲ್ಲಿ ಈ ಸಮಸ್ಯೆ ಬಗೆಹರಿಯಲಿಲ್ಲ. ಆಮೇಲೆ ಮತ್ತೆ ಪುನಃ 8ನೇ ಅಮೆಂಡ್‌ಮೆಂಟ್ ಪ್ರಕಾರ 1959ರಲ್ಲಿ ಇನ್ನೂ ಹತ್ತು ವರ್ಷಗಳ ಕಾಲ ಹೆಚ್ಚು ಮಾಡಿಕೊಂಡು ಬಂದೆವು. ಈಗ ನಾಲ್ಕನೆ ಚುನಾವಣೆಯಲ್ಲಿ ಇದು ಹೊರಟು ಹೋಯಿತು. 20 ವರ್ಷದಲ್ಲಿ ಈ ರಿಸರ್ವೇಷನ್ ಆರ್ಟಿಕಲ್ ಹೊರಟು ಹೋಯಿತು, ಬಹಳ ದೀರ್ಘವಾಗಿ ಯೋಚನೆ ಮಾಡಬೇಕು, ನಾನು ಕೇಳುತ್ತೇನೆ. ಈಗ 20 ವರ್ಷಗಳಾದ ಮೇಲೆ ನಮ್ಮ ಹರಿಜನ ಬಂಧುಗಳು ಮತ್ತು ಗಿರಿಜನ ಬಂಧುಗಳು ಯಾರು ಸಮಾಜದಲ್ಲಿ ಆರ್ಥಿಕವಾಗಿ ಮತ್ತು ವಿದ್ಯಾಭ್ಯಾಸದಲ್ಲಿ ಮುಂದೆ ಇದ್ದಾರೆ ಅವರ ಜೊತೆಯಲ್ಲಿ ನಿಂತುಕೊಂಡು ಚುನಾವಣೆಯಲ್ಲಿ ಸ್ಪರ್ಧಿಸತಕ್ಕ ಶಕ್ತಿಯನ್ನು ಗಳಿಸಿದ್ದಾರೆಯೇ? ನಾವು ಬಹಳ ದೀರ್ಘವಾಗಿ ನಿಷ್ಪಕ್ಷಪಾತವಾದ ಮನಸ್ಸಿನಿಂದ ಯೋಚನೆ ಮಾಡಬೇಕು. ನನಗಾದರೂ ಅನಿಸುತ್ತದೆ, ಈ ಸರ್ಕಾರ ಈಗ ಹೋಗತಕ್ಕ ರೀತಿಯಲ್ಲಿ ಹೋದರೆ ಒಂದು ನೂರುವರ್ಷಗಳಾದರೂ ಖಾಯಂ ಆಗಿ ಶಾಸನ ಕಡತದಲ್ಲಿ ಇದು ಇರಬೇಕಾದ ಪರಿಸ್ಥಿತಿ ಬಂದರೂ ಬರಬಹುದು. ಆರ್ಟಿಕಲ್ 17ರ ಪ್ರಕಾರ ಅನ್‌ಟಚಬಲಿಟಿ ಹೋಗಬೇಕೆಂಬ ಒಂದು ನಿಬಂಧನೆಯನ್ನು ಹಾಕಿದ್ದೇವೆ. ಅದನ್ನು

(ಶ್ರೀ ಎಚ್. ಸಿದ್ದವೀರಪ್ಪ)

ಏಕೆ ಮುಂದುವರಿಸಲಿಲ್ಲ? ಕಾರಣವೇನು! ಅದಕ್ಕೆ ಕಾರಣ ಇಷ್ಟೆ. ನೀವು ಈ ಕಡಿತದಲ್ಲಿ ತೋರಿಸಿದ್ದೀರಲ್ಲಾ ಈ ಮಿಸಲೇನಿಯಸ್—ಚೌ ಚೌ—ನಾವೇನಾದರೂ ಹೊಟೇಲಿಗೆ ಹೋದರೆ ಚೌ ಚೌ ಕೊಡು ಅನ್ನುವ ಹಾಗೆ—3 ಕೋಟಿ 10 ಲಕ್ಷ ರೂಪಾಯಿ ತೋರಿಸಿದ್ದೀರಿ, ಅದರಲ್ಲಿ ಇಂಗ್ಲೆಂಡ್ ಎಕ್ಸ್‌ಪೆನ್ಸಸ್ ಸೇರಿದೆ, ಫಿಲಂಸ್ ಸೇರಿದೆ, ಟೂರಿಸಂ ಸೇರಿದೆ ಇದೆಲ್ಲಾ ಸೇರಿ ಅದರ ಜೊತೆಗೆ ಎರೋಮೂಲೆಯಲ್ಲಿ 90 ಲಕ್ಷ ರೂಪಾಯಿ ತೋರಿಸಿದ್ದೀರಿ, ನಾಚಿಕೆಯಾಗುವುದಿಲ್ಲವೇ? 90 ಲಕ್ಷ ರೂಪಾಯಿಗಳಿಂದ ಈ ಸಮಸ್ಯೆ ಬಗೆಹರಿಯುತ್ತದೆಯೇ? ಎಂ. ಎಸ್. ಕೆ. ಮಿಲ್‌ನ್ನು ಬರಿದುಮಾಡಿ, ಜನಗಳ ದುಡ್ಡು ಎರಡು ಕೋಟಿ ರೂಪಾಯಿಗಳನ್ನು ಅದರಲ್ಲಿ ಹಾಕಿದರಲ್ಲಾ ಅದನ್ನು ಹರಿಜನರಿಗೆ ಕೊಟ್ಟಿದ್ದರೆ ನಿಜವಾಗಿಯೂ ಮುಂದ ವರಿಯುತ್ತಾ ಇದ್ದರು. ಇಂತಹ ಅನ್ಯಾಯ, ಅಸಡ್ಡೆಗೆ ನಿಮ್ಮ ಸರ್ಕಾರ ಕೋಟಿ ಕೋಟಿ ರೂಪಾಯಿಗಳನ್ನು ಕೊಟ್ಟು ದುಡು ಹಾಳುಮಾಡಿದ್ದೀರಿ, ಅದರ ಬದಲು ಕನಿಷ್ಠ ನಿಮಗೇನಾದರೂ ಅವರ ವಿಚಾರದಲ್ಲಿ ಒಂದು ಕಲ್ಪನೆ ಇದ್ದರೆ 5 ಕೋಟಿ ರೂಪಾಯಿಗಳನ್ನಾದರೂ ಇದಕ್ಕೆ ಇಡಬೇಕಾಗಿತ್ತು. ಅದಕ್ಕಿಂತ ಕಡಿಮೆ ಇಟ್ಟರೆ ಆಡುವ ಹುಡುಗರಿಗೆ ಮಂಡಕ್ಕಿ ಕೊಡಿಸುತ್ತೇವೆಯಲ್ಲಾ, 3 ಕಾಸಿನ ಪುರಿ ಕೊಡಿಸುತ್ತೇವೆಯಲ್ಲಾ ಹಾಗೆ ಕೊಟ್ಟರೆ ಅದರಿಂದ ಏನಾಗುತ್ತದೆ! ನಾವು ಏನೇ ಮಾತನಾಡಲಿ ಮುಖ್ಯವಾಗಿ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಿಲ್ಲ. ಸಮಾಜ ಕಾರ್ಯಾಣದ ಮಂತ್ರಿಗಳನ್ನು ಒಂದು ವಿಷಯ ಕೇಳುತ್ತೇನೆ. ಒಂದು ವರ್ಷದ ರಿಕಾರ್ಡ್ ಕೊಡಲಿ—ಏನೂ ಬೇಕಾಗಿಲ್ಲ—ಅವರು ಸಾಮಾನ್ಯವಾಗಿ ಕಾಡಿನಲ್ಲಿ ಕೆಲಸ ಮಾಡತಕ್ಕ ಜನರು, ತಂಗಡಿ ಬಾರ್ಕ್ ಹರಾಜಿಗೆ ಬರುತ್ತದೆ—ಈ ತಂಗಡಿ ಚಕ್ಕೆ ಇದೆಯಲ್ಲಾ ಇದು ಚರ್ಮ ಹದಮಾಡುವುದಕ್ಕೆ ಬಹಳವಾಗಿ ಬೇಕು—ನಾನು ಮಂತ್ರಿಯಾಗಿದ್ದಾಗ ಸುಮಾರು ಒಂದು ಲಕ್ಷ ರೂಪಾಯಿ ಕೊಟ್ಟು ಒಂದು ಸಹಕಾರ ಸಂಘವನ್ನು ಸ್ಥಾಪನೆ ಮಾಡಿಸಿದ್ದೆ, ಯಾರೋ ಕಾಂಗ್ರೆಸ್ ಪುಡಾರಿಗಳೇ ಈಗ ದೊಡ್ಡವರಾಗಿದ್ದಾರೆ—ಬಡ ಜನರಿಗೆ ಸಿಕ್ಕದ ಹಾಗೆ ಮಾಡಿದ್ದಾರೆ. ಆದ್ದರಿಂದ ಈ ತಂಗಡಿ ಬಾರ್ಕ್‌ನ್ನು ಹರಾಜಿಗೆ ಹಾಕಬೇಡಿ; ಮತ್ತು ಕಾಡಿನಲ್ಲಿ ಸಿಕ್ಕತಕ್ಕ ಇನ್ನೂ ಅನೇಕ ಪದಾರ್ಥಗಳು ಇವೆ. ಅಂಟು ಇದೆ, ಮತ್ತು ಇತರ ಪದಾರ್ಥಗಳನ್ನು ಹರಿಜನರ ಉಪಯೋಗಕ್ಕಾಗಿ ಇಡಿ ಅವರು ಅವನ್ನು ಉಪಯೋಗಿಸಿಕೊಂಡು ಜೀವನ ಮಾಡಲಿ. ಅದನ್ನೆಲ್ಲಾ ಬಿಟ್ಟುಬಿಟ್ಟು ಅರ್ಥಿಕ ಸಮಾನತೆ ಬರಬೇಕು, ವಿದ್ಯಾಭ್ಯಾಸ ಕೊಡಿಸಬೇಕು ಎಂದು ಹೇಳುವುದನ್ನೆಲ್ಲಾ ಒಪ್ಪಿಕೊಳ್ಳೋಣ ಆದರೆ ಮುಖ್ಯವಾಗಿ ಈಗ ಅವರಿಗೆ ಬೇಕಾಗಿರುವುದು ಇಷ್ಟೆ, ಅವರ ಆರ್ಥಿಕ ಪ್ರಗತಿ ಆಗಬೇಕು. ವಿದ್ಯಾಭ್ಯಾಸದಲ್ಲಿ ಅವರು ಮುಂದೆ ಬರಬೇಕು—ನೌಕರಿ ಸಿಕ್ಕಲಿ ಬಿಡಲಿ ಆ ಮಾತು ಬೇರೆ—ಕೊನೇ ಪಕ್ಷ ಎಸ್. ಎಸ್. ಎಲ್. ಸಿ. ವರೆಗಾದರೂ ಕಡ್ಡಾಯವಾಗಿ ಅವರಿಗೆ ವಿದ್ಯಾಭ್ಯಾಸ ಮಾಡಿಸಿದರೆ ಅವರ ಸ್ಥಿತಿ ಉತ್ತಮವಾದೀತು. ನೀವೇನೂ ಸುಧಾರಿಸಲಿಕ್ಕೆ ಹೋಗಬೇಡಿ, ಅದು ತಪ್ಪು ತಿಳಿವಳಿಕೆ, ನಾವು ಸುಧಾರಿಸುತ್ತೇವೆ ಎನ್ನುವುದು. ಯಾರನ್ನು ಯಾರೂ ಸುಧಾರಿಸುವ ಸ್ಥಿತಿಯಲ್ಲಿ ಇಲ್ಲ. ಅವರನ್ನು ಅವರೇ ಸುಧಾರಿಸಿಕೊಳುತ್ತಾ ಇದ್ದಾರೆ ಅದೂ ತೆವಳಿಕೊಂಡು ದಬ್ಬಿಸಿಕೊಂಡು, ಅನ್ನಿಸಿಕೊಂಡು, ಗುದ್ದಿಸಿಕೊಂಡು ಎಲ್ಲಾ ಕಷ್ಟಗಳನ್ನೂ ಅನುಭವಿಸಿ. ಅಂತಹವರನ್ನು ಸುಧಾರಿಸುವುದಕ್ಕೆ ಉಳಿದವರು ತಲೆಹಾಕುತ್ತಾರೆ ಅಂದರೆ ಅದು ತಪ್ಪಾಗುತ್ತದೆ. 1936ರಲ್ಲಿ ಒಂದು ಕಾನ್‌ಫರೆನ್ಸ್ ಆಗುತ್ತಾ ಇತ್ತು ಶ್ರೀಮಾನ್ ಅನಂತರಾಮನ್‌ರವರು ಇದ್ದರು. ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರ್ ಆಗಿದ್ದಾಗ ಈ ಹರಿಜನರ ಉದ್ಧಾರ ಮಾಡಬೇಕಾದರೆ ಹೇಗೆ ಮಾಡಬೇಕು ಅನ್ನುವ ಪ್ರಶ್ನೆ ಬಂದಾಗ ಅವರಿಗೆ ಭೂಮಿ ಕೊಡಿ, ಒಂದು ಜೊತೆ ಎತ್ತು ಕೊಡಿ ಅಂದಾಗ ನಮ್ಮಲ್ಲಿ ಒಬ್ಬ ಗೌಡರು ಇದ್ದರು ಒಳ್ಳೆಯ ವರ್ಚಸ್ವಿಗಳು, ಅವರು ಹೇಳಿದರು ಇದೆಲ್ಲಾ ಮಾಡುವುದಕ್ಕೆ ಸಾಧ್ಯವಾದರೆ ಹೊಲ ಹೊಡೆಯುವುದಕ್ಕೆ ಒಂದು ಆಳನ್ನು ಕೊಡಬೇಕೆಂಬುದು ನನ್ನ ವಾದ ಎಂದು ಹೇಳಿದರು. ಅವರಿಗೆ ಎಲ್ಲಾ ಅನುಕೂಲಗಳನ್ನೂ ಮಾಡಿ ಕೊಟ್ಟು ಅವರಾಗಿ ಅವರೇ ಮುಂದೆ ಬರುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು, ಅದು ಮಾಡುತ್ತೇವೆ, ಇದು ಮಾಡುತ್ತೇವೆ ಎಂದರೆ ಅದೆಲ್ಲಾ ಆಗದ ಮಾತು, ಸುಳ್ಳು, ಎಂದು ನಾನಾದರೂ ಹೇಳುತ್ತೇನೆ. ಎತ್ತಿಕಟ್ಟುವುದಕ್ಕೆ ಈ ರೀತಿ ಹೇಳುತ್ತೇನೆ ಎಂದು ಯಾರೂ ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು. ಹರಿಜನರು ನಮ್ಮ ಸ್ನೇಹಿತರು ಇವತ್ತಿನದಿವಸ ಆರಿಸಿ ಬಂದಿದ್ದಾರಲ್ಲಾ—ನನಗಿಂತಲೂ ಎರಡರಷ್ಟು ಅವರಿಗೆ ಜವಾಬ್ದಾರಿ ಜಾಸ್ತಿ ಇದೆ, ಆಡಳಿತ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ತಾವೆಲ್ಲಾ ತಿಳಿದಿರತಕ್ಕವರು. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಹಿತರಕ್ಷಣೆಯನ್ನು ಕೊಟ್ಟಿಲ್ಲ ಎಂದರೆ ಅದರ ಅರ್ಥ ಅವರವರ ಹಿತರಕ್ಷಣೆಯನ್ನು ಅವರವರೇ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಲಿಕ್ಕೇ ಬೇಕು, ಪ್ರಯತ್ನ ಮಾಡಬೇಕು. ರೆವಿನ್ಯೂ ಮಂತ್ರಿಗಳಿಗೆ ಒಂದು ಮಾತು ಹೇಳುತ್ತೇನೆ. ಏನೆಂದರೆ, ಇವತ್ತು ಅವರು ಒಂದು ಲೆಕ್ಕ ತರಿಸಲಿ. ಹರಿಜನರಿಗೆ ಕೊಟ್ಟ ಹೊಲ ಎಷ್ಟು? ಎಷ್ಟು ಜನರಿಗೆ ಜಮೀನನ್ನು ಕೊಟ್ಟಿದ್ದೀರೋ ಅವರು ಇವತ್ತು ಅಷ್ಟನ್ನೂ ಇಟ್ಟುಕೊಂಡಿದ್ದಾರೆಯೇ?

ಸ್ಟ್ಯಾಟಿಸ್‌ಟಿಕ್ಸ್ ಡಿಪಾರ್ಟ್‌ಮೆಂಟ್ ಇದೆ ಎಂದು ಹೇಳುತ್ತೀರಿ $3 \times 3 = 9$ ಅಂತ ಅವರು ಏನೋ ಒಂದು ಲೆಕ್ಕವನ್ನು ಅವರು ತೋರಿಸುತ್ತಾರೆ. ಎಷ್ಟು ಜನ ಹರಿಜನರಿಗೆ ದರಖಾಸ್ತು ಮೂಲಕ ಜಮೀನು ಕೊಟ್ಟಿದ್ದೀರಿ. ಈ 20 ವರ್ಷಗಳಲ್ಲಿ ಮತ್ತು ಎಷ್ಟು ಜನರು ವ್ಯವಸಾಯ ಮಾಡುತ್ತಾ ಇದ್ದಾರೆ, ಎಷ್ಟು ಜಮೀನು ಬೇರೆಯವರ ಕೈಗೆ ಸೇರಿದೆ ಅನ್ನುವಂತಹ ಒಂದು ಲೆಕ್ಕವನ್ನು ಕೊಟ್ಟರೆ ಆಗ ಗೊತ್ತಾಗುತ್ತದೆ, ನಿಮ್ಮ ನೀತಿ ಸರಿಹೋಗಿಲ್ಲ, ಇದಕ್ಕೆ ಏನೋ ಬೇರೆ ದಾರಿ ಇರಬೇಕು ಎಂಬುದು. ನಮಗೆಲ್ಲಾ ಗೊತ್ತು, ಶ್ರೀಮಾನ್ ಟಿ. ಮರಿಯಪ್ಪನವರು ಇದ್ದಾಗ ಒಂದು ರಿಪೋರ್ಟ್ ಕೊಟ್ಟಿದ್ದರು, ದುರ್‌ದೈವವಶಾತ್ ಆ ರಿಪೋರ್ಟ್ ಜಾರಿಗೆ ಬರಲಿಲ್ಲ, ಅದು ಏನಾಯಿತೋ ಗೊತ್ತಿಲ್ಲ. ಆದ್ದರಿಂದ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಅವರೂ ಕೂಡ ನಮ್ಮ ಅಣ್ಣತಮ್ಮಂದಿರು ಶೇಕಡ 20 ಭಾಗ ಇದ್ದಾರೆ, ಇವತ್ತಿನ ದಿವಸ ಅವರನ್ನು ಬಿಟ್ಟರೆ ನಮ್ಮ ಕೆಲಸ ಏನೂ ಆಗುವುದಿಲ್ಲ, ಹೊಲ ಹೊಡೆಯುತಕ್ಕ ಜನರಿಗೆ ಅದು ಚೆನ್ನಾಗಿ ಗೊತ್ತು, ಅವನು ಬಾರುಕೋಲು ಮಾಡಿಕೊಡಬೇಕು ಅದನ್ನು ನಾವು ಹೆಗಲ ಮೇಲೆ ಹಾಕಿಕೊಳ್ಳಬೇಕು. ರಾಮಾನುಜಾಚಾರ್ಯರು, ಬಸವಣ್ಣನವರು ಹೇಳಿರುವಂತಹ ಮಾನವ ಜೀವನದಲ್ಲಿ ಎಲ್ಲರೂ ಒಂದೇ, ಅನೇಕ ಕಡಕುಗಳನ್ನು ಅನುಭವಿಸಿಕೊಂಡು, ಅನೇಕ ತೊಂದರೆಗಳನ್ನು ಅನುಭವಿಸುತ್ತಾ ಇದ್ದರೂ ಕೂಡ ಬರೀ ತತ್ವಗಳನ್ನು ಪ್ರಚಾರ ಮಾಡಿದರೆ ಆಗುವುದಿಲ್ಲ, ಹೇಳಿದ ತತ್ವವನ್ನು ಒಂದು ರೂಪಾಯಿನಲ್ಲಿ ಒಂದಾಣೆಯಷ್ಟನ್ನಾದರೂ ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಈ ಸರ್ಕಾರ ಇದನ್ನು ಬೇರೆ ರೀತಿಯಿಂದ ನೋಡಬೇಕು, reorientation of the policy, as it were. ಶ್ರೀಮಾನ್ ನಾರಾಯಣಗೌಡರನ್ನು ಟೀಕೆ ಮಾಡುತ್ತಾ ಇದ್ದೇನೆ ಅಂತ ತಿಳಿದುಕೊಳ್ಳಬಾರದು. ಅವರು ಯಾರಿಗೂ ಕಡಿಮೆ ಇಲ್ಲ, ಯಾರಿದ್ದರೂ ಕೂಡ ಪರಿಸ್ಥಿತಿಯೇ ಹೀಗೆ ಇದೆ. ಸರ್ಕಾರ, ಮಂತ್ರಿಗಳು ಯಾರೇ ಇರಲಿ ಇದು ಒಂದು ದೊಡ್ಡ ನ್ಯಾಷನಲ್ ಪ್ರಾಬ್ಲಂ, ಸ್ಟೇಟ್ ಪ್ರಾಬ್ಲಂ. ಇದನ್ನು ಹೇಗೆ ಬಗೆಹರಿಸಬೇಕು ಎಂಬುದನ್ನು ನಮ್ಮ ಮಾನ್ಯ ಸ್ನೇಹಿತರು ಹೇಳಿದರು.

ನಮ್ಮ ಸ್ನೇಹಿತರು ಹೇಳಿದರು ಅದು ಸೋಷಿಯಾಲಿಸಮ್ ಎಂದು. ಒಬ್ಬ ಕುರುಡ ಕತ್ತಲೆ ಕೋಣೆಯಲ್ಲಿ ಒಂದು ಕರಿ ಬೆಕ್ಕನ್ನು ಹುಡುಕಿದಹಾಗೆ. ಸೋಷಿಯಾಲಿಸಮ್ ಹೀಗೆ ಹೋಗುತ್ತಾ ಇದ್ದರೆ ಹೇಗೆ ಇದನ್ನು ಆಚರಣೆಗೆ ತರಬೇಕು? ಇದನ್ನು ಹೀಗೆ ಮಾಡಬಾರದು. ಶ್ರೀಮಾನ್ ರಾಚಯ್ಯನವರ ಮೇಲೆ ಒಂದು ದೊಡ್ಡ ಜವಾಬ್ದಾರಿ ಇದೆ. ಅವರಿಗೆ ಇನ್ನೂ ಹೆಚ್ಚು ಜವಾಬ್ದಾರಿಯನ್ನು ಕೊಡೋಣ. ಯಾವುದು ಏನೇ ಇರಲಿ. ಇದನ್ನು ಮರೆಯಕೂಡದು. ಶ್ರೀಮಾನ್ ರಾಚಯ್ಯನವರಿಗೆ ಎರಡು ಜವಾಬ್ದಾರಿ ಸೇರಿದೆ. ಒಂದು ವ್ಯಕ್ತಿಗತವಾಗಿ ಕೆಲಸ ಮಾಡತಕ್ಕಂಥಾದ್ದು. ಇನ್ನೊಂದು ದಾರಿದ್ರ್ಯ ಸಮಾಜದ ಪ್ರತಿನಿಧಿಯಾಗಿ ಕೆಲಸ ಮಾಡಬೇಕು ಎನ್ನುವುದನ್ನು ಮರೆಯಬಾರದು. ಅವರ ಕಣ್ಣ ಎದುರಿಗೆ ಎಷ್ಟೊಂದು ನೌಕರಿಗಳಿಗೆ ಅನ್ಯಾಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಸುಮ್ಮನೆ ಇದ್ದಾರೆ. ನಮ್ಮ ಸರ್ಕಾರ ಇದ್ದಾಗ್ಗೆ ಪ್ರಮೋಷನ್ ಮತ್ತು ಡೈರೆಕ್ಟ್ ರೆಕ್ರೂಟ್‌ಮೆಂಟ್ ಯಾವರೀತಿ ಕೊಟ್ಟಿದ್ದೇವೆ ಎನ್ನುವುದನ್ನು ನೋಡಬೇಕು. ಯಾವ ಇಲಾಖೆಯಲ್ಲೇ ಆಗಲಿ 18 ಪರ್ಸೆಂಟು ಹರಿಜನರು ಕಡಿಮೆ ಇದ್ದರೆ ಬೇರೆಯವರಿಗೆ ನೌಕರಿಯನ್ನು ಕೊಡುವುದನ್ನು ನಿಲ್ಲಿಸಿ, ಹರಿಜನರಿಗೆ ಕೊಡಬೇಕು ಎಂದು ಒಂದು ಸರ್ಕಾರಿ ಆಜ್ಞೆ ಮಾಡಿದ್ದೆವು. ನೀವು ಕರ್ತವ್ಯಪಾಲನೆ ಸರಿಯಾಗಿ ಮಾಡಬೇಕಾದರೆ, ಅಂದರೆ, ಬರೀ ಶ್ರೀಮಾನ್ ರಾಚಯ್ಯನವರು, ಸೋಷಿಯಲ್ ವೆಲ್‌ಫೇರ್ ಮಂತ್ರಿಗಳು ಇವರುಗಳೇ ಅಲ್ಲ ಬಾಕಿ ಮಂತ್ರಿಗಳು ಎಲ್ಲರೂ ಸೇರಿ ಈ ಪ್ರಶ್ನೆಯನ್ನು ಒಂದು ಮಾನವೀಯತೆಯ ದೃಷ್ಟಿಯಿಂದ ನೋಡಿ ಸರಿಪಡಿಸಬೇಕು ಎಂದು ತಮ್ಮಲ್ಲಿ ಅರಿಕೆ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

[MR. CHAIRMAN (SRI S. D. KOTHAVALE) in the Chair]

† ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸನ್ಮಾನ್ಯ ಸಭಾಪತಿಗಳೇ, ಯಾವ ಒಂದು ಭಾರತೀಯ ಸಮಾಜಧರ್ಮ ಹಾಗೂ ಬಡತನ ಇವೆರಡರ ನಿಕಟ ಸಂಪರ್ಕದಮೇಲೆ ನಿಂತಿದೆಯೋ ಅಂತಹ ಒಂದು ಸಮಾಜದ ವ್ಯವಸ್ಥೆಯಲ್ಲಿ ಈ ಒಂದು ಜಾತೀಯತೆಯ ಒಂದು ಮನೋಭಾವ ಸಿಕ್ಕಿ ಸಾವಿರಾರು ವರ್ಷಗಳಿಂದ ಇರತಕ್ಕಂಥ ಹರಿಜನ ಬಂಧುಗಳ ಉದ್ಧಾರಕ್ಕಾಗಿ ಅವರ ಏಳಿಗೆಗಾಗಿ ಯಾವ ಒಂದು ಸಮಾಜಕಲ್ಯಾಣ ಎಂಬ ಒಂದು ಭವ್ಯವಾದ ಹೆಸರನ್ನು ಇಟ್ಟುಕೊಂಡು ಕಳೆದ 20 ವರ್ಷಗಳಿಂದ ಈ ಹರಿಜನ ಬಂಧುಗಳ ಕಲ್ಯಾಣಕ್ಕಾಗಿ ಏನು ಕೆಲಸಮಾಡುತ್ತಾ ಇದೆಯೋ ಅದನ್ನು ಪರಿಶೀಲನೆ ಮಾಡಿದಾಗ ನನಗೆ ಒಂದು ಭಾವನೆ ಬರುತ್ತದೆ, ಈ ಮಹತ್ತರವಾದ ಕಾರ್ಯಸಾಧನೆ

(ಶ್ರೀ ಎಂ. ಬಸವರಾಜು)

ಗಾಗಿ ಸರ್ಕಾರದವರು ಒದಗಿಸಿರತಕ್ಕಂಥ ಹಣ ಬಹಳ ಕಡಿಮೆ ಎಂದು. ಈ ಎರಡು ದೃಷ್ಟಿಯಿಂದ ಈ ಡಿಮ್ಯಾಂಡನ್ನು ವಿರೋಧಿಸಿ ನನ್ನ ನಾಲ್ಕು ಮಾತುಗಳನ್ನು ಈ ಸಭೆಯ ಮುಂದೆ ಇಡಲು ಬಯಸುತ್ತೇನೆ.

ಈವೊತ್ತು ನಮ್ಮ ಸರ್ಕಾರ ಪೂರ್ಣವಾಗಿ ಹರಿಜನರ ಉದ್ಧಾರಕ್ಕಾಗಿ ಏನೂ ಕೆಲಸ ಮಾಡಿಲ್ಲ ಎಂದು ಹೇಳಲು ತಯಾರಾಗಿಲ್ಲ, ಅದಕ್ಕಾಗಿ ಅವರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಯಾವ ದಿಕ್ಕಿನಲ್ಲಿ, ಯಾವ ರೀತಿಯಲ್ಲಿ ಕೆಲಸ ಮಾಡಬೇಕಾಗಿತ್ತೋ ಆ ದಿಕ್ಕಿನಲ್ಲಿ ಕೆಲಸ ಮಾಡಿಲ್ಲ. ಏತಕ್ಕೆಂದರೆ, ಪ್ರಥಮವಾಗಿ ನಮ್ಮ ಭಾರತೀಯ ಸಮಾಜ ವರ್ಣಾಶ್ರಮದ ಮೇಲೆ ನಿಂತಿರುವ ಸಮಾಜ. ಈ ವರ್ಣಾಶ್ರಮದ ಪೂರ್ವ ಚರಿತ್ರೆಯನ್ನು ಅವಲೋಕಿಸಿದ್ದೇ ಆದರೆ ಅದು ರಾಜರುಗಳು ಪೋಷಣೆ ಮಾಡಿಕೊಂಡು ಬಂದಂಥಾದ್ದು. ಈ ಅಸ್ಪೃಶ್ಯ ಎನ್ನತಕ್ಕಂಥಾದ್ದನ್ನು ಸಾವಿರಾರು ವರ್ಷಗಳಿಂದ ಧರ್ಮದ ಒಂದು ಹೆಸರಿನಲ್ಲಿ ರಾಜರುಗಳು, ರಾಜಮಹಾರಾಜರುಗಳು, ಚಕ್ರವರ್ತಿಗಳೂ ಸಹ ಈ ಅಸ್ಪೃಶ್ಯತೆಯನ್ನು ಈ ಸಮಾಜದಲ್ಲಿ ಪಾಲಿಸಿಕೊಂಡು ಬಂದಿದ್ದಾರೆ. ಸರ್ಕಾರದವರು ಏನು ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡು ಕೆಲಸ ಮಾಡುತ್ತಾ ಇದ್ದಾರೆ ಇದರಿಂದ ಈ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯ ಇಲ್ಲ ಎನ್ನುವುದನ್ನು ಧೃಡಪಡಿಸುತ್ತೇನೆ. ಹರಿಜನರ ಉದ್ಧಾರಕ್ಕಾಗಿ ಈ ಸಮಾಜ ಕಲ್ಯಾಣ ಇಲಾಖೆ ಇದೆ ಎಂದು ಹೇಳುತ್ತಾರೆ. ಜನ ಏನು ಹೇಳುತ್ತಾರೆ ಎಂದರೆ, ಈ ಸರ್ಕಾರದಲ್ಲಿ ಹರಿಜನರ ಓಟು ತೆಗೆದುಕೊಳ್ಳಲಿಕ್ಕೆ ಈ ಸಮಾಜ ಕಲ್ಯಾಣ ಇದೆ, ನೀವು ಹರಿಜನರ ಉದ್ಧಾರಕ್ಕಾಗಿ ತಾಳಿರುವ ಧೋರಣೆ ಇದೆಯಲ್ಲಾ ಅದು ಪೂರ್ಣವಾಗಿ ಬದಲಾವಣೆಯಾಗಬೇಕು ಇಲ್ಲದೇ ಹೋದರೆ ಹೀಗೆ ಮಾಡುತ್ತಾ ಇದ್ದರೆ ನೀವು ಅನುಸರಿಸುತ್ತಿರುವ ನೀತಿಯಂತೆ ಹರಿಜನರ ಉದ್ಧಾರಕ್ಕಾಗಿ ಏನು ಮಾಡುತ್ತಾ ಇದ್ದೀರೋ ಅದಕ್ಕೆ ಕೊಡಲಿ ಪೆಟ್ಟು ಬಿದ್ದಂತಾಗುತ್ತದೆ; ಅದು ಒಂದೇ ಅಲ್ಲ ಇಡೀ ಸಮಾಜದ ಏಳಿಗೆಗೆ ಒಂದು ಪೆಟ್ಟು ಬಿದ್ದಂತಾಗುತ್ತದೆ. ಮಹಾತ್ಮಾ ಗಾಂಧಿಯವರು ಹೇಳಿದಂತೆ ಒಂದು ಏಕೀಕೃತವಾದ ಸಮಾಜವಾಗಿರಬೇಕು. ಹರಿಜನರು ಕಾಂಗ್ರೆಸ್ಸಿಗೆ ಓಟು ಕೊಡುವುದಕ್ಕೆ ಇರತಕ್ಕಂಥ ಒಂದು ಜನತೆ ಎನ್ನುವ ಮನೋಭಾವನೆ ಹೋಗಬೇಕು, ಸವರ್ಣೀಯರು, ಅವರ್ಣೀಯರು ಎನ್ನುವ ವ್ಯತ್ಯಾಸ ಹೋಗಬೇಕು. 20 ವರ್ಷಗಳಿಂದ ಹರಿಜನರು ಹೇಗೆ ನಡೆಯುತ್ತಾ ಇದ್ದರೋ ಈಗಲೂ ಹಾಗೆ ನಡೆಯುತ್ತಾ ಇದ್ದಾರೆ. ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮದಲ್ಲಿ ಸ್ವಲ್ಪವೂ ಬದಲಾವಣೆ ಆಗಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಉದಾಹರಣೆಗೆ ಮೊನ್ನೆ ದಿವಸ ಪತ್ರಿಕೆಯಲ್ಲಿ ಓದಿದೆ. ಅಗ್ರಿಕಲ್‌ಚರಲ್‌ನಲ್ಲಿ ಲೇಬರ್ ಕ್ಲಾಸಿನವರಿಗೆ, ದಿನವೂ ಕೆಲಸ ಮಾಡುವ ಕೂಲಿಗಾರರಿಗೆ ಇವರಿಗೆಲ್ಲಾ ಒಂದು ಮಿನಿಮಮ್ ವೇಜಸ್ ಕೊಡಬೇಕು ಎಂದು ಕಾನೂನು ಮಾಡಿದ್ದೀರಿ. ಅದು ಮಾಡಿದರೆ ಉಪಯೋಗವಾದಂತೆ ಆಗುವುದಿಲ್ಲ. ಏತಕ್ಕೆಂದರೆ, ಇಂಡಸ್ಟ್ರಿಯಲ್ ಲೇಬರ್ ಕ್ಲಾಸಿನವರಿಗೆ ಏನಾದರೂ ಕೂಲಿ ಸರಿಯಾಗಿ ಕೊಡದೇ ಇದ್ದರೆ ಅವರು ಕೋರ್ಟಿಗೆ ಹೋಗಲು ಅವಕಾಶ ಇದೆ ಮತ್ತು ಅವರ ಹಕ್ಕುಗಳನ್ನು ಸಂರಕ್ಷಣೆ ಮಾಡಲು ಅವಕಾಶ ಇದೆ. ಆದರೆ ಅಗ್ರಿಕಲ್‌ಚರಲ್ ಲೇಬರ್ ಕ್ಲಾಸ್‌ನಲ್ಲಿ ಇವೊತ್ತು ಅಸ್ಪೃಶ್ಯತೆ ಇರತಕ್ಕಂಥ ಷೆಡ್ಯೂಲ್ ಕ್ಯಾಸ್ಟ್ಸ್ 75 ಪರ್ಸೆಂಟು ಇದ್ದಾರೆ. ಆದುದರಿಂದ ಇವರ ಹಕ್ಕುಗಳನ್ನು ಕಾಪಾಡಿಕೊಳ್ಳಲು ಒಂದು ಅನುಕೂಲ ಮಾಡಿಕೊಡಬೇಕು ಎಂದು ಕೇಳುತ್ತೇನೆ, ಇಲ್ಲದಿದ್ದರೆ ಹರಿಜನರು ಉದ್ಧಾರವಾಗುವುದಿಲ್ಲ. ಬಹುಪಾಲು ಜನ ಇದರಲ್ಲಿ ಇರುವುದರಿಂದ ಅನಾನುಕೂಲವಾಗಿದೆಯೇ ವಿನಾ ಅನುಕೂಲವೇನೂ ಆಗಿಲ್ಲ. ಇದನ್ನು ನಿವಾರಣೆ ಮಾಡಲು ಒಂದು ದೃಢವಾದ ನಿಲುವನ್ನು ತಾಳಬೇಕು ಇಲ್ಲದಿದ್ದರೆ ಹಳ್ಳಿಗಾಡಿನ ಜನತೆ ಸುಖಸಂತೋಷದಿಂದ ಇರಲು ಸಾಧ್ಯ ಇಲ್ಲ. ನೀವು ಸರ್ಕಾರದ ವತಿಯಿಂದ ಅಂತಹ ಅಂಶಗಳನ್ನು ಹೇಳುತ್ತೀರಿ, 10 ಜನಕ್ಕೆ ಕಮೀಷನರ್‌ಗೆ, ಡೆಪ್ಯೂಟಿ ಕಮೀಷನರ್ ಆಗಿ ನೌಕರಿ ಕೊಟ್ಟಿದ್ದೇವೆ ಮತ್ತು ಒಬ್ಬ ಮಿನಿಸ್ಟರ್‌ಗೆ ನೌಕರಿ ಕೊಟ್ಟಿದ್ದೇವೆ ಎಂದು. ಹೀಗೆ ಮಾಡುವುದರಿಂದ ಹರಿಜನರಿಗೆ ಒಂದು ಜಾತೀಯತೆಯ ಮನೋಭಾವ ತೋರುತ್ತದೆ. ಸವರ್ಣೀಯರು, ಹರಿಜನರು ಎನ್ನುವ ಅಂತರ ಹೋಗುವುದಿಲ್ಲ. ಅದು ಜಾಸ್ತಿಯಾಗುತ್ತದೆ. ಆದುದರಿಂದ ಸವರ್ಣೀಯರು ಮತ್ತು ಬೇರೆ ಹಿಂದೂಗಳು ಎನ್ನುವ ಭಾವನೆ ಏನು ಇದೆಯೋ ಅದನ್ನು ಹೋಗಲಾಡಿಸಲು ನಾವೆಲ್ಲರೂ ಒಂದೇ ಎನ್ನುವ ದೃಷ್ಟಿಯನ್ನಿಟ್ಟುಕೊಂಡು ಒಂದು ಕಾರ್ಯಕ್ರಮ ಹಾಕಿಕೊಂಡು ಮಾಡಬೇಕು. ಇಂತಹ ಒಂದು ಮನೋಭಾವ ಹೋಗಿ ಈ ಸಮಾಜ ಉದ್ಧಾರವಾಗಬೇಕಾಗಿದೆ ಎನ್ನುವುದಕ್ಕಾಗಿ ಒಂದೆರಡು ವಿಷಯಗಳನ್ನು

ಸಭೆಯ ಮುಂದೆ ಇಡಲು ಬಯಸುತ್ತೇನೆ. ಮೊದಲನೆಯದಾಗಿ ಯಾವುದೋ ಒಂದು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಕೆಲಸಕ್ಕಾಗಿ ಹರಿಜನರಿಂದ ಬೇಕಾದಷ್ಟು ಅರ್ಜಿಗಳು ಬಂದಿವೆ ಎಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನವರು ಕಳುಹಿಸಿದರು. ಅದರಲ್ಲಿ ಮೈಸೂರು ಜಿಲ್ಲೆಯ 5–6 ಜನರ ಹೆಸರು ಬಂದಿದೆ. ಆದರೆ ಒಬ್ಬನೂ ಬಂದಿರಲಿಲ್ಲ. ನೀವು ಏನೋ ಮಾತನಾಡಿದಿರಿ, ಸಿ.ಸಿ.ಎ. ರೂಲುಗಳು ಅನುಕೂಲವಾಗುತ್ತದೆ ಎಂದು. ಆದರೆ ಅದು ಹೆಸರಿಗೆ ಮಾತ್ರ ಇದೆ. ಸಂಬಂಧಪಟ್ಟ ಅಧಿಕಾರಿಗಳು ಹರಿಜನರಿಗೆ ಸಾಕಷ್ಟು ಸಂರಕ್ಷಣೆಯನ್ನು ಮಾಡಲಿಕ್ಕೆ ಆಗಿಲ್ಲ. ಈ ರೂಲುಗಳನ್ನು ಕಾರ್ಯರೂಪಕ್ಕೆ ತರುವಾಗ ಇದು ಅಷ್ಟೊಂದು ಪರಿಣಾಮಕಾರಿಯಾಗಿ ಆಗುತ್ತಾ ಇಲ್ಲ.

ಸ್ವಾಮಿ, ಇನ್ನೊಂದು ವಿಚಾರ. ನೀವು ಹರಿಜನರಿಗೆ ಮನೆ ಕಟ್ಟಿಕೊಡಿ, ಗದ್ದೆ, ಬೇಕಾದ ಜಮೀನು ಕೊಡಿ, ಸಾಕಷ್ಟು ಎಲ್ಲವನ್ನೂ ಕೊಡಿ ಇದರಿಂದ ಹರಿಜನರ ಬಂಧುಗಳಿಗೆ ಅನಾನುಕೂಲ ವಾಗಿದೆಯೇ ವಿನಾ ಅನುಕೂಲವಾಗಿಲ್ಲ ಎಂದು ನಾನು ಹೇಳುತ್ತೇನೆ. ಆದುದರಿಂದ ಪ್ರತಿಯೊಬ್ಬ ಹರಿಜನ ಹೆಣ್ಣುಮಕ್ಕಳಿಗೆ ಒಂದು ಸ್ಟ್ಯಾಂಡರ್ಡ್ ಎಜುಕೇಷನ್ ಅಂದರೆ ಎಸ್. ಎಸ್. ಎಲ್. ಸಿ. ಯನ್ನು ಕಡ್ಡಾಯವಾಗಿ ಮಾಡಿಸಬೇಕು ಎಂದು ನಾನು ಕೇಳುತ್ತೇನೆ ಮತ್ತು ಕೆ.ಆರ್. ನಗರದಲ್ಲಿ ಎರಡು ಹಾಸ್ಟಲುಗಳು ಇವೆ. ಒಂದು ಹಾಸ್ಟಲಿನಲ್ಲಿ 60 ಹುಡುಗರು ಓದಬಹುದು ಆದರೆ ಹರಿಜನರ ಸಂಖ್ಯೆಗೆ 60 ಮಕ್ಕಳಿಗೆ ಓದುವ ಅವಕಾಶ ಇದ್ದರೆ ಏನು ಪ್ರಯೋಜನ ? ಇವೊತ್ತಿನ ದಿವಸ ಕೆ.ಆರ್. ನಗರದ ಪ್ರಜಾಸಂಖ್ಯೆ ತೆಗೆದುಕೊಂಡರೆ 15 ಸಾವಿರ ಜನಸಂಖ್ಯೆ ಇದೆ. ಅದರಲ್ಲಿ ಸುಮಾರು 4–5 ಸಾವಿರ ಹರಿಜನರ ಸಂಖ್ಯೆ ಇದ್ದಾರೆ. ಇದರಲ್ಲಿ 2 ಸಾವಿರ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ, ಇದಕ್ಕಾಗಿ ನೀವು ಎರಡು ಹಾಸ್ಟಲುಗಳನ್ನು ಕೊಟ್ಟರೆ ಎಲ್ಲಿ ಸಾಕಾಗುತ್ತದೆ ? ಇದನ್ನು ಜಾಸ್ತಿ ಮಾಡಬೇಕೆಂದು ನಾನು ಕೇಳುತ್ತೇನೆ. ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಎಸ್.ಎಸ್.ಎಲ್.ಸಿ. ಯನ್ನು ಕಡ್ಡಾಯವಾಗಿ ಮಾಡಿಕೊಡಬೇಕು ಎಂದು ಸಹ ಹೇಳುತ್ತೇನೆ.

ಇನ್ನು ಎರಡನೆಯದಾಗಿ ಮನಶ್ಶಾಸ್ತ್ರದ ಪ್ರಕಾರ ಸವರ್ಣೀಯರು ಇತರ ಹಿಂದೂಗಳು ಎನ್ನುವ ಭಾವನೆ ಸುಧಾರಣೆ ಆಗಬೇಕು. ಎಲ್ಲರೂ ಒಂದೇ ಏಕೀಕೃತವಾದ ಸಮಾಜಕ್ಕೆ ಸೇರಿದವರು ಎಂದರೆ ಆಗ ಮಕ್ಕಳ ಪರಿಸ್ಥಿತಿ ಸುಧಾರಿಸುತ್ತದೆ. ಸಣ್ಣ ಮಕ್ಕಳಿಂದಲೇ ಇದನ್ನು ಪರಿವರ್ತನೆ ಮಾಡಬೇಕು. ಮಕ್ಕಳಿಗೆ ಅವರು ಸವರ್ಣೀಯರು, ಅವರ್ಣೀಯರು ಎಂದು ಹೇಳಬಾರದು. ಸಣ್ಣ ಮಕ್ಕಳಿದ್ದಾಗಲೇ ಇವರ ಮನಸ್ಸನ್ನು ಪರಿವರ್ತನೆಯನ್ನು ಮಾಡಲು ಪ್ರಯತ್ನ ಮಾಡಬೇಕು.

ಇನ್ನು ಪ್ರೈಮರಿ ಶಾಲೆಗಳಲ್ಲಿ ಬಹುಪಾಲು ಹೆಣ್ಣುಮಕ್ಕಳು ಉಪಾಧ್ಯಾಯಿನಿಯಾಗಿರಬೇಕು. ಈಗ ಹರಿಜನರಿಗೆ 18 ಪರ್ಸೆಂಟು ನೌಕರಿಯನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ, ಅದನ್ನು 50 ಪರ್ಸೆಂಟಿಗೆ ಹೆಚ್ಚಿಸಬೇಕು. ಮತ್ತು ಬಹಳಮಟ್ಟಿಗೆ ಹರಿಜನರನ್ನು ಶಾಲಾ ಉಪಾಧ್ಯಾಯರನ್ನಾಗಿ ನೇಮಿಸಬೇಕು ಎಂದು ನಾನು ಕೇಳುತ್ತೇನೆ. ಏಕೆಂದರೆ ನಾವು ಅವರನ್ನು ಹೆಚ್ಚಿನವರು ಅವರು ಕಡಮೆ ಎಂದು ತಿಳಿಯಬಾರದು. ಒಂದು ಶಾಲೆಗೆ ಹೊಲೆಯರ ಉಪಾಧ್ಯಾಯ ಪಾಠ ಮಾಡುತ್ತಾ ಇದ್ದಾರೆ, ಮಕ್ಕಳ ಮನಸ್ಸು ಪರಿವರ್ತನೆ ಯಾಗುತ್ತದೆ. ದೃಷ್ಟಿಯಿಂದ ಪ್ರೈಮರಿ ಎಜುಕೇಷನ್ನಿನಲ್ಲಿ ಹರಿಜನ ಹೆಣ್ಣುಮಕ್ಕಳ ಶಿಕ್ಷಕರಿಗೆ ಹೆಚ್ಚಿನ ಪರ್ಸೆಂಟೇಜನ್ನು ಕೊಡಬೇಕು. ಸೇಕಡ 50 ರಷ್ಟು ಸ್ಥಾನವನ್ನು ಹೆಣ್ಣುಮಕ್ಕಳಿಗೆ ಕೊಡಬೇಕು.

6-00 P.M.

ಇನ್ನು ಮೆಡಿಕಲ್ ಇಲಾಖೆಯಲ್ಲಿ ಇವತ್ತು ಕೆಲವರು ರಾಜಕೀಯ ದೃಷ್ಟಿಯನ್ನುಂಟು ಮಾಡುತ್ತಿದ್ದಾರೆ. ಅನ್ನ ತಿನ್ನುವುದರಲ್ಲಿ, ರೊಟ್ಟಿ ತಿನ್ನುವುದರಲ್ಲಿ ಅಸ್ಪೃಶ್ಯತೆಯ ಮನೋಭಾವ ಬಹಳ ಜಾಸ್ತಿ ಇದೆ. ಆಸ್ಪತ್ರೆಗಳಲ್ಲಿ ಔಷಧಿಗಳನ್ನು ತೆಗೆದುಕೊಳ್ಳಬೇಕೆಂದರೆ, ಸವರ್ಣ ಹಿಂದೂಗಳು ಬಹಳ ಬೇಜಾರು ಪಡುತ್ತಿದ್ದಾರೆ. ಅಲ್ಲಿ ಒಂದು ಸಂಪರ್ಕ ಬೆಳೆಯಬೇಕಾದರೆ, ಆಸ್ಪತ್ರೆಗಳಲ್ಲಿರತಕ್ಕ ನರ್ಸ್‌ರೊಡನೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹೆಣ್ಣುಮಕ್ಕಳಿಗೆ ನರ್ಸಿಂಗ್ ಟ್ರೈನಿಂಗ್ ಕೊಟ್ಟು ಅವರ ಸಂಖ್ಯೆಯನ್ನು ಜಾಸ್ತಿಮಾಡಿ ಆ ಹುದ್ದೆಗಳನ್ನು ಹೆಚ್ಚಿಗೆ ಹರಿಜನ ಹೆಣ್ಣುಮಕ್ಕಳಿಗೆ ಮೀಸಲಾಗಿಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿಮಾಡುತ್ತೇನೆ.

(ಶ್ರೀ ಎಂ. ಬಸವರಾಜು)

ಕಳೆದ 20 ವರ್ಷಗಳಿಂದ ಹರಿಜನರಿಗೆ ಹಳೆ ಹೊಲಗೇರಿ ಇದ್ದಕಡೆ ಈಗ ಹೊಸ ಹೊಲಗೇರಿ ಮಾಡಿದ್ದಾಗಿದೆ. ಈಗ ಮಂಗಳೂರು ಹಂಚು ಹಾಕಿ ಹಳೆಯ ಹೊಲಗೇರಿ ಹತ್ತಿರ ಹೊಸ ಹೊಲಗೇರಿ ಮಾಡಿದಮೇಲೆ ಅಲ್ಲಿ ಸವರ್ಣ ಹಿಂದೂಗಳು ಮನೆಗಳನ್ನು ಕಟ್ಟಿ ಕೊಳ್ಳುವುದಕ್ಕೆ ಒಂದು ಪ್ರೋತ್ಸಾಹವನ್ನು ಕೊಟ್ಟು ಅಲ್ಲಿ ಒಂದು ಏಕೀಕೃತವಾದ ರೀತಿಯಲ್ಲಿ ಮಾಡುವುದಕ್ಕೆ ಸರ್ಕಾರ ಇದುವರೆಗೆ ಏನೊಂದು ಕ್ರಮವನ್ನು ಮಾಡಿಕೊಂಡಿಲ್ಲ. ಎಲ್ಲೆಲ್ಲಿ ಹರಿಜನ ಕಾಲೋನಿಗಳು ಇವೆಯೋ ಅಲ್ಲಿ ಇನ್ನೂ ಇರತಕ್ಕ ಭೂಮಿಗಳನ್ನು ಸ್ವಾಧೀನಪಡಿ ಕೊಂಡು ಹರಿಜನ ಕಾಲೊನಿಯನ್ನು ಅಭಿವೃದ್ಧಿಮಾಡುವುದಕ್ಕೆ ಬದಲಾಗಿ, ಸಾವಿರ ವರ್ಷಗಳಿಂದಲೂ ಕೇವಲ ಹುಲ್ಲು ಷೆಡ್‌ಗಳಲ್ಲಿರತಕ್ಕ ಸವರ್ಣ ಹಿಂದೂಗಳಲ್ಲಿ ಸಂಪರ್ಕ ಜಾಸ್ತಿಯಾಗುವ ರೀತಿಯಲ್ಲಿ ಅಲ್ಲಲ್ಲಿನ ಪಂಚಾಯತಿಗಳು ಒಂದು ಪ್ರೋತ್ಸಾಹಧನವಾಗಿ ಕೊಡುವ ರೀತಿಯಲ್ಲಿ ಕೊಟ್ಟು ಪ್ರೋತ್ಸಾಹ ಕೊಡಬೇಕು. ಅದೇ ರೀತಿಯಲ್ಲಿ ಎರಡು ದೊಡ್ಡ ವಿಷಯಗಳನ್ನು ಇಲ್ಲಿ ಹೇಳಬೇಕಾಗಿ ಬಂದಿದೆ. ಒಂದು, ರಾಷ್ಟ್ರದ ಪ್ರಗತಿಯ ಬಗ್ಗೆ ಕಲವು ಚಿತ್ರಗಳನ್ನು ನೋಡುತ್ತಿದ್ದೇವೆ. ಅಸೆಂಬ್ಲಿಯಲ್ಲಿ ಹರಿಜನರ ಬಗ್ಗೆ ಭಾಷಣಗಳು ಆಗುತ್ತಿರುವಾಗ ಈ ದೇಶದ ಮೇಲೆ ಎಂತಹ ದುಷ್ಪರಿಣಾಮವಾ ದೀತು ಎನ್ನುವುದು ಇನ್ನೊಂದು. ಇದು ನಮ್ಮ ಹಳ್ಳಿಗಾಡಿನ ಜನಗಳಿಗೆ ಅರ್ಥವಾಗುವುದಿಲ್ಲ. ಚುನಾವಣೆಯ ಕಾಲದಲ್ಲಿ ಎಷ್ಟೋ ಭಾಷಣಗಳನ್ನು ಮಾಡಿದರೂ ನಮ್ಮ ಸಮಾಜ ಉದ್ಧಾರವಾಗು ವುದಿಲ್ಲ. ಅಸ್ಪೃಶ್ಯತೆಯೂ ಕೂಡ ಹೋಗುವುದಿಲ್ಲ. ಈಗ ಫಿಲಂ ಡಿವಿಜನ್ ಏನಿದೆಯೋ ಅದರಿಂದ ಅಸ್ಪೃಶ್ಯತೆಯ ಒಂದು ಭಾವನೆ ಜನರಿಗೆ ಅರ್ಥವಾಗಬೇಕು. ನಮ್ಮ ದೇಶದ ಏಳಿಗೆಯಾಗಬೇಕಾ ದರೆ, ಸಾಮಾನ್ಯವಾಗಿ ಹಳ್ಳಿಗಾಡುಗಳಲ್ಲಿ ಫಿಲಂಗಳ ಮೂಲಕ ಅಲ್ಲಿನ ಜನರಿಗೆ ತಿಳುವಳಿಕೆಯುಂಟಾ ಗುವಂತೆ ಪ್ರದರ್ಶನಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಶಾಲಾ ಮಕ್ಕಳ ವಿಷಯದಲ್ಲಿ ಹೇಳುವುದಾದರೆ, ಪ್ರೈಮರಿ ಮತ್ತು ಮಾಧ್ಯಮಿಕ ಮಟ್ಟದಲ್ಲಿ ಅಲ್ಲಿನ ಚಿಕ್ಕ ಮಕ್ಕಳಿಗೆ, ಅದರಲ್ಲಿಯೂ ಅವರ ಒಂದು ಎಳೆಯ ಮನಸ್ಸಿಗೆ ಅರ್ಥವಾಗುವ ರೀತಿಯಲ್ಲಿ ಚಿತ್ರಗಳ ಮೂಲಕ ಮತ್ತು ಒಂದು ಭಾವನೆಯ ಮೂಲಕ ಸರ್ಕಾರದ ಮನಶಾಸ್ತ್ರ ಇಲಾಖೆಯ ನೆರವಿನಿಂದ ಪಾಠಪ್ರವಚನಗಳನ್ನು ಏರ್ಪಾಡುಮಾಡಬೇಕೆಂದು ನಾನು ಸರ್ಕಾರಕ್ಕೆ ಮನವಿಮಾಡುತ್ತೇನೆ.

ಇನ್ನು ವಿಲೇಜ್ ಪಂಚಾಯತ್ ಅಕೌಂಟೆಂಟ್ಸ್ ಮತ್ತು ಸೆಕ್ರೆಟರಿಗಳ ವಿಷಯವಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ. ಇದು ಬಹಳ ದೊಡ್ಡದು. ನಮ್ಮ ಹಳ್ಳಿಗಳಲ್ಲಿ ಶ್ಯಾನುಭೋಗ ಮತ್ತು ಪಟೇಲ್ ಎಂಬುದಾಗಿ ಇರುತ್ತಾರೆ. ಅವರ ನೈತಿಕ ಮಟ್ಟ ಅಧೋಗತಿಗೆ ಬಂದು ಅವರು ತುಂಬಾ ಹೀನಸ್ಥಿತಿಯಲ್ಲಿದ್ದಾರೆ. ಆದರೂ ಶ್ಯಾನುಭೋಗರ ಹತ್ತಿರ, ಸ್ವಾಮಿ, ಬುದ್ಧಿ ಎಂತಲೂ ಪಟೇಲರ ಹತ್ತಿರ ಗೌಡರೆ ಎಂತಲೂ ಜನ ಹೇಳುತ್ತಾರೆ. ಅವರು ಅಂತಹ ಸ್ಥಾನಮಾನದಲ್ಲಿದ್ದರೂ ಅವರು ಆರ್ಥಿಕಮಟ್ಟದಲ್ಲಿ ಬಹಳ ಹೀನಸ್ಥಿತಿಯಲ್ಲಿದ್ದಾರೆ. ಆದರೂ ಪಟೇಲ ಮತ್ತು ಶ್ಯಾನು ಭೋಗರ ಸ್ಥಾನಕ್ಕೆ ಗೌರವ ಕೊಡುತ್ತಾರೆ. ಅಂತಹ ಅನುವಂಶಿಕ ಹುದ್ದೆಗಳನ್ನು ಮತ್ತು ಅವರ ಸ್ಥಾನಮಾನಗಳನ್ನು ರದ್ದುಮಾಡುತ್ತಿದ್ದಾರೆ. ಆದರೆ ಸೇಕಡ 50 ರಷ್ಟನ್ನು ಹರಿಜನರನ್ನೇ ವಿಲೇಜ್ ಅಕೌಂಟೆಂಟ್ಸಾಗಿ ಮತ್ತು ವಿ.ಪಿ. ಸೆಕ್ರೆಟರಿಗಳಾಗಿ ತೆಗೆದುಕೊಳ್ಳಬೇಕು. ಅವರಿಗೆ ಹೆಚ್ಚಿನ ಶಿಕ್ಷಣ ಕೊಟ್ಟು ಅವರನ್ನೇ ಅಲ್ಲಿಗೆ ನೇಮಕಮಾಡಬೇಕು. ಆಗ ಹಳ್ಳಿಗಾಡಿನ ರೈತರ ಸಂಪರ್ಕ ನೇರವಾಗಿ ಬೆಳೆದು ಅವರಿಗೆ ಹೆಚ್ಚಿನ ಗೌರವ ಕೊಡುವ ಭಾವನೆ ಅವರಿಗೆ ಬರುತ್ತದೆ. ಕ್ರಾಂತಿಕಾರಕವಾದ ಬದಲಾವಣೆಯಾಗುತ್ತದೆ. ಇದರಿಂದ ಅಸ್ಪೃಶ್ಯತೆ ನಿವಾರಣೆಗೆ ಹೆಚ್ಚು ಅನುಕೂಲವಾಗುತ್ತದೆಂದು ಹೇಳಿ, ನನಗೆ ಇಷ್ಟುಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ನಾರಾಯಣಗೌಡ.—ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ನನ್ನ ಬೇಡಿಕೆಯ ಮೇಲೆ ಮಾನ್ಯ ಸಭೆಯ ಸದಸ್ಯರು ಬಹುಶಃ ಪರವಾಗಿ ಮತ್ತು ವಿರೋಧವಾಗಿ ಮಾತನಾಡಿ ನನ್ನ ಕೆಲಸವನ್ನು ಸ್ವಲ್ಪ ಹಗುರವಾಗಿ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಹಾಗೂ ಮಾತನಾಡಿದ ಮಾನ್ಯ ಸದಸ್ಯರುಗಳು ಅನೇಕ ಸಲಹೆಗಳನ್ನು ಕೊಟ್ಟಿದ್ದಕ್ಕಾಗಿ ಮತ್ತು ಕೆಲವರು ನನ್ನ ವಿಷಯದಲ್ಲಿ ಸ್ವಲ್ಪ ವಿಶ್ವಾಸಪೂರ್ವಕವಾಗಿ ಮಾತನಾಡಿದ್ದಕ್ಕಾಗಿ ನಾನು ಅವರಿಗೆ ಪ್ರಥಮ ವಾಗಿ ನನ್ನ ಕೃತಜ್ಞತೆಯನ್ನು ಅರ್ಪಿಸಲು ಬಯಸುತ್ತೇನೆ. ಹಾಗೂ ವಿರೋಧವಾಗಿ ಮಾತನಾಡಿ ದಂಥ ಮಾನ್ಯ ಸದಸ್ಯರುಗಳು ಒಂದುವೇಳೆ ಅವರು ವಿರೋಧಮಾಡುವುದಕ್ಕೋಸ್ಕರವಾಗಿಯೇ ಆ ರೀತಿಯಾಗಿ ಮಾತನಾಡಿದ್ದಾರೆಂದು ನಾನು ಭಾವಿಸುವುದಿಲ್ಲ. ಅವರು ಒಂದುವೇಳೆ ಇವತ್ತಿನದಿವಸ

ಏನಾದರೂ ಒಂದಿಷ್ಟು ನಮ್ಮ ಮನಸ್ಸು ಚುಚ್ಚುವ ಹಾಗೆ ಮಾತನಾಡಿದರೆ ಅವರ ಕೆಲಸಗಳು ಬೇಗನೆ ನಡೆಯುತ್ತವೆ ಎನ್ನುವ ಉದ್ದೇಶದಿಂದ ಮಾತನಾಡಿದ್ದಾರೆಂದು ನಾನು ತಿಳಿದುಕೊಂಡು ಅವರ ಉಪಯುಕ್ತವಾದ ಸಲಹೆಗಳಿಗೂ ಸಹ ನಾನು ಪೂರ್ಣ ಗಮನಕೊಡುತ್ತೇನೆಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮುಖ್ಯವಾಗಿ ಈ ಮಾನ್ಯ ಸಭೆಯೊಳಗೆ ಈ ಹರಿಜನ, ಗಿರಿಜನ ಮತ್ತು ಇತರೇ ಜನಾಂಗಗಳ ಉದ್ಧಾರಕ್ಕೋಸ್ಕರವಾಗಿ ಮಾನ್ಯ ಸದಸ್ಯರು ಹೇಳಿರತಕ್ಕ ಹಾಗೆ ಅವರ ಎಲ್ಲಾ ಅರ್ಥಿಕಾಭಿವೃದ್ಧಿಯ ಕಡೆ ಹೆಚ್ಚು ಗಮನಕೊಡದೆ ಅವರ ವಿದ್ಯಾಭಿವೃದ್ಧಿಯ ಕಡೆಗೆ ಹೆಚ್ಚು ಗಮನಕೊಟ್ಟರೆ ಬಹುಶಃ ಆ ಜನಾಂಗ ಹೆಚ್ಚು ಉದ್ಧಾರವಾಗುತ್ತದೆಂದು ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ಆ ಪ್ರಕಾರ ಸರ್ಕಾರದವರೂ ಸಹ ಅದರ ಕಡೆಗೇ ಹೆಚ್ಚು ಗಮನ ಕೊಡುತ್ತಿದ್ದಾರೆಂದು ತೋರಿಸುವುದಕ್ಕೆ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಮುಂದೆ ಇಡಲು ಬಯಸುತ್ತೇನೆ. ನಮ್ಮ ಇಲಾಖೆಯ ಆಶ್ರಯದಲ್ಲ 365 ವಿಮೆನ್ ವೆಲ್‌ಫೇರ್ ಸೆಂಟರ್ಸ್ ಇವೆ. 241 ಹುಡುಗರ ಹಾಸ್ಟಲುಗಳೂ, 106 ಹೆಣ್ಣುಮಕ್ಕಳ ಹಾಸ್ಟಲುಗಳೂ, 14 ಟೆಕ್ನಿಕಲ್ ಹಾಸ್ಟಲುಗಳೂ ಇವೆ. ನಮ್ಮಲ್ಲಿ ಗ್ರಾಂಟ್-ಇನ್-ಏಡ್ ಹಾಸ್ಟಲುಗಳು 145 ಇವೆ. ಇವು ಈಗ ಹೆಚ್ಚಾಗಿ, ಜನತೆ ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ತಮ್ಮ ಗಮನವನ್ನು ಕೊಡುತ್ತಿದ್ದಾರೆ ಹಾಗೂ ಮಾನ್ಯ ಸದಸ್ಯರುಗಳು ಅನೇಕರು ಹೇಳಿದಹಾಗೆ ಜನತೆ ತಮ್ಮ ಮಕ್ಕಳಿಗೆ ಚಿಕ್ಕಂದಿನಲ್ಲಯೇ ಸಾಧಾರಣವಾಗಿ ಆಶ್ರಮ ಸ್ಕೂಲುಗಳಿಗೆ ಮತ್ತು ರೆಸಿಡೆನ್‌ಷಿಯಲ್ ಸ್ಕೂಲುಗಳಿಗೆ ಹೋಗುವ ವ್ಯವಸ್ಥೆ ಮಾಡುವುದರಿಂದ ಅವರು ಅಲ್ಲಿ ಓದುವಾಗ ಅವರಿಗೆ ಯೂನಿಫಾರಂ ಉಡುಪು ಕೊಡಬೇಕು, ಹಾಗೆ ಕೊಡುತ್ತಾ ಇಲ್ಲವೆಂದು ಕೆಲವು ಸದಸ್ಯರು ಹೇಳಿದರು. ನನಗೆ ಅದೇ ಒಂದು ಆಶ್ಚರ್ಯ. ನಾವು ಆ ಮಕ್ಕಳಿಗೆ ಎಲ್ಲರಿಗೂ ಒಂದು ವರ್ಷಕ್ಕೆ ಎರಡು ಸೆಟ್ಟು ಬಟ್ಟೆಗಳನ್ನು ಕೊಡುತ್ತಿದ್ದೇವೆ. ಯಾರು ಯಾರು ನರ್ಸರಿ ಶಾಲೆಗಳಲ್ಲಿ ಓದುತ್ತಿದ್ದಾರೋ ಅವರಿಗೂ ಮತ್ತು ಯಾರು ಯಾರು ಆಶ್ರಮ ಮತ್ತು ಡೆಸ್ಟಿಟ್ಯೂಟ್ಸ್‌ಶಾಲೆಗಳಲ್ಲಿ ಅಭ್ಯಾಸಮಾಡತಕ್ಕವರೆಲ್ಲರಿಗೂ ಎರಡೆರಡು ಸೆಟ್ ಬಟ್ಟೆಗಳನ್ನು ಕೊಡುತ್ತಿದ್ದೇವೆ. ಇನ್ನು ಡಿಮ್ಯಾಂಡ್ ಹೋಂ ಮತ್ತು ರೆಸ್ಕ್ಯೂ ಹೋಂಗಳಲ್ಲಿರತಕ್ಕವರಿಗೆಲ್ಲಾ ಒಂದೊಂದು ವರ್ಷಕ್ಕೆ 4 ಸೆಟ್ ಬಟ್ಟೆಗಳನ್ನು ಒದಗಿಸುತ್ತಿದ್ದೇವೆ.

ಇನ್ನು ಸರ್ಕಾರದವರು ಇಲ್ಲಿಯವರೆಗೂ ಆ ಹಾಸ್ಟಲುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೇನು ತಿಂಗಳು ಒಂದಕ್ಕೆ 25 ರೂಪಾಯಿಗಳ ಪ್ರಕಾರ ಒಂದು ಗ್ರಾಂಟನ್ನು ಕೊಡುತ್ತಿದ್ದರೋ ಅದು ಸಾಲದು ಎಂಬುದಾಗಿ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಸರ್ಕಾರ ಪರಿಶೀಲಿಸಿ ಈ ವರ್ಷದಿಂದ ಆ ಗ್ರಾಂಟನ್ನು 30 ರೂಪಾಯಿಗಳಿಗೆ ಏರಿಸಲು ನಿರ್ಧರಿಸಿದೆ. ಇದರಿಂದಾಗಿ ಸರ್ಕಾರಕ್ಕೆ ವರ್ಷಗೆ 10 ಲಕ್ಷದ 96,800 ರೂಪಾಯಿಗಳು ಖರ್ಚಾಗುತ್ತವೆ; ಅಂದರೆ ಇಷ್ಟು ಹಣ ಹೆಚ್ಚಿಗೆ ಖರ್ಚಾಗುತ್ತದೆ, ಈ ಬಾಬಿಗಾಗಿ. ಸರ್ಕಾರಕೆ ಅಷ್ಟು ದುಡ್ಡು ಹೆಚ್ಚಾಗಿ ಖರ್ಚಾದರೂ ಚಿಂತೆಯಿಲ್ಲ—ಆ ಮಕ್ಕಳ ಆರೋಗ್ಯದೃಷ್ಟಿಯಿಂದ ಇಷ್ಟು ಹಣವನ್ನು ಖರ್ಚುಮಾಡುವುದಕ್ಕೆ ಸರ್ಕಾರ ತೀರ್ಮಾನವನ್ನು ಕೈಗೊಂಡಿದೆ. ಹಾಗೂ ಕೆಲವರು ಈ ಹಾಸ್ಟಲುಗಳಲ್ಲಿ ಅಭ್ಯಾಸ ಮಾಡತಕ್ಕ ನಮ್ಮ ಮಕ್ಕಳು ಅಭ್ಯಾಸದಲ್ಲಿ ಬಹಳ ಹಿಂದುಳಿದಿದ್ದಾರೆಂಬ ಮಾತನ್ನು ಹೇಳಿದ್ದಾರೆ. ಅದಕ್ಕೆ ಏನಾದರೊಂದು ಏರ್ಪಾಡನ್ನು ಮಾಡಿ ಅವರಿಗೆ ಒಂದು ಕೋಚಿಂಗ್ ಕೊಡಲು ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿದ್ದಾರೆ. ಸರ್ಕಾರ ಅದನ್ನು ಎರಡು ರೀತಿಯಿಂದ ಪರಿಶೀಲನೆ ಮಾಡುತ್ತಿದೆ. ಒಂದು—ಈಗ ಆಫೀಸುಗಳಲ್ಲಿ ಎರಡನೇ ದರ್ಜೆಯ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯನ್ನು ಆಫೀಸ್ ಸೂಪರಿಂಟೆಂಡೆಂಟ್ ಆಗಿ ಮಾಡುತ್ತಿದ್ದೇವೆ ಇಂಥವರಲ್ಲಿ ಯಾರು ಯಾರು ಗ್ರಾಜುಯೇಟ್‌ಗಳಾಗಿದ್ದಾರೋ ಅಂಥವರನ್ನು ಅಲ್ಲಿಗೆ ಹಾಕಿದರೆ ಅನುಕೂಲವಾಗುವುದಿಲ್ಲವೇ ಅನ್ನುವುದು ಒಂದು ಆಲೋಚನೆ. ಇನ್ನೊಂದು ರೀತಿಯಲ್ಲಿ 4 ಹೆಣ್ಣು ಹುಡುಗರ ಮತ್ತು 4 ಗಂಡುಹುಡುಗರ ಶಾಲೆಗಳನ್ನು ಪ್ರಾಯೋಗಿಕವಾಗಿ ತೆಗೆದುಕೊಂಡು ಅವರಿಗೆ ಕೋಚಿಂಗ್ ಕೊಡುವುದಕ್ಕೆ ಒಂದು ಕೋಚಿಂಗ್ ಹೋಂ ಮಾಡುವುದು ಒಳ್ಳೆಯದೇ ಎಂಬುದಾಗಿ ಹೀಗೆ ಎರಡು ದೃಷ್ಟಿಗಳಲ್ಲಿ ಇದನ್ನು ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ. ಆದರೆ ಇದರಲ್ಲಿ ಯಾವುದು ಉತ್ತಮವಾದ್ದೋ ಅದನ್ನು ಸರ್ಕಾರ ಮುಂದಿನ ವರ್ಷದಿಂದ ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರು ವಿದ್ಯಾಭಿವೃದ್ಧಿಯ ಬಗ್ಗೆ ಅಷ್ಟೇನೂ ಪ್ರಗತಿಯನ್ನು ಸಾಧಿಸಿಲ್ಲ ಎಂದು ಹೇಳಿದ್ದರೆ, ಇನ್ನು ಕೆಲವರು ಏನೋ ಒಂದು ಸ್ವಲ್ಪಮಟ್ಟಿಗೆ ಪ್ರಗತಿಯನ್ನು ಸಾಧಿಸಿದೆ

(ಶ್ರೀ ಜಿ. ನಾರಾಯಣಗೌಡ)

ಎಂದು ಹೇಳಿದ್ದಾರೆ. ನಾನು ಈಗ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಮುಂದಿಟ್ಟರೆ ಬಹುಶಃ ಸದಸ್ಯರಿಗೂ ಮತ್ತು ದೇಶಕ್ಕೂ ಇದರ ಬಗ್ಗೆ ಸರ್ಕಾರ ಇಲ್ಲಿಯವರೆಗೂ ಏನು ಸಾಧಿಸಿದೆ, ಎಷ್ಟು ಉತ್ತಮ ಕಾರ್ಯ ಮಾಡಿದೆ ಅನ್ನುವುದು ಎಲ್ಲರಿಗೂ ತಿಳಿದಂತಾಗುತ್ತದೆ. ನಾವು ಈ ಬಾಲಕರಿಗೆ ಮೂರು ಹಂತದಲ್ಲಿ ವಿದ್ಯಾರ್ಥಿವೇತನಗಳನ್ನು ಕೊಡುತ್ತಿದ್ದೇವೆ. ಒಂದು—ಪ್ರೀಮೆಟ್ರಿಕ್ ಸ್ಟೇಜ್. ಎರಡನೆಯದು ಪೋಸ್ಟ್ ಮೆಟ್ರಿಕ್ ಸ್ಟೇಜ್ ಮತ್ತು ಮೂರನೆಯದು ಮೆರಿಟ್ ಎಂದು. ಹೀಗೆ ಮೂರು ಹಂತಗಳಲ್ಲಿ ಕೊಡುತ್ತಿದ್ದೇವೆ. ಪ್ರೀಮೆಟ್ರಿಕ್ ಸ್ಟೇಜಿನಲ್ಲಿರತಕ್ಕ ವಿದ್ಯಾರ್ಥಿಗಳು ಸುಮಾರು 22—23 ಸಾವಿರ ಜನ ವಿದ್ಯಾರ್ಥಿಗಳು ಇದರಿಂದ ಸೌಲಭ್ಯ ಪಡೆಯುತ್ತಿದ್ದಾರೆ. ನಮ್ಮ ಮೈಸೂರು ರಾಜ್ಯದಲ್ಲಿ ಬೇರೆ ಬೇರೆಯಾದ ನಾಲ್ಕು ಭಾಗಗಳಿವೆ. ಆ ನಾಲ್ಕು ಭಾಗಗಳಲ್ಲೂ ಹಿಂದಿನಿಂದ ಏನು ಕೊಡುತ್ತಿದ್ದರೋ ಅದನ್ನೇ ಈಗಲೂ ಅಲ್ಲಿ ಕೊಟ್ಟುಕೊಂಡು ಬರುತ್ತಿರುವುದರಿಂದ ಅದರಲ್ಲಿ ಒಂದಕ್ಕೊಂದಕ್ಕೆ ಬಹಳ ವ್ಯತ್ಯಾಸವಿದೆ. ಆದರೆ ಅದನ್ನು ಈಗ ತಪ್ಪಿಸಿ ಎಲ್ಲಾ ಭಾಗದಲ್ಲೂ ರಾಜ್ಯದಲ್ಲಿ ಒಂದೇ ಸಮನಾದ ಪದ್ಧತಿ ಇರಬೇಕು ಎಂದು ಸರ್ಕಾರದವರು ಉದ್ದೇಶಪಟ್ಟಿದ್ದಾರೆ. ಈ ಹಿಂದೆ ಈ ಪ್ರೀ-ಮೆಟ್ರಿಕ್ ಕ್ಲಾಸಿನವರೆಗೆ ಕೊಡುತ್ತಿದ್ದ ವಿದ್ಯಾರ್ಥಿವೇತನವೆಷ್ಟಿತ್ತು ಎಂಬುದನ್ನು ನಾನೀಗ ಸಭೆಯ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಹೈದ್ರಾಬಾದ್ ಕರ್ಣಾಟಕ ಏರಿಯಾದಲ್ಲಿ ಒಂದು ವರ್ಷಕ್ಕೆ ಎರಡನೇ ಸ್ಟಾಂಡರ್ಡಿಗೆ 6 ರೂಪಾಯಿ, 3 ನೇ ಸ್ಟಾಂಡರ್ಡಿಗೆ 8 ರೂಪಾಯಿ, 4 ನೇ ಸ್ಟಾಂಡರ್ಡಿಗೆ 10 ರೂಪಾಯಿ, 5, 6, 7 ನೇ ಸ್ಟಾಂಡರ್ಡುಗಳಿಗೆ 40 ರೂಪಾಯಿ ಮತ್ತು 8 ಮತ್ತು 9 ಸ್ಟ್ಯಾಂಡರ್ಡಿಗೆ 60 ರೂಪಾಯಿ ಹೀಗೆ ಕೊಡಲಾಗುತ್ತಿದೆ. ಇನ್ನು ಬೊಂಬಾಯಿ ಕರ್ಣಾಟಕ ಏರಿಯಾದಲ್ಲಿ ಅಲ್ಲಿ ಲಂಪ್‌ಸಂ ಸ್ಕಾಲರ್‌ಷಿಪ್ಪನ್ನು ಕೊಡುತ್ತಿದ್ದಾರೆ. ಅಲ್ಲಿ 6 ನೇ ಸ್ಟ್ಯಾಂಡರ್ಡ್ಗೆ 9 ರೂಪಾಯಿ 8 ನೇ ಸ್ಟ್ಯಾಂಡರ್ಡಿಗೆ 10 ರೂಪಾಯಿ 9ನೆಯ ಸ್ಟ್ಯಾಂಡರ್ಡಿಗೆ 15 ರೂಪಾಯಿ, 10 ಮತ್ತು 11 ನೇ ಸ್ಟ್ಯಾಂಡರ್ಡಿಗೆ 20 ರೂಪಾಯಿ ಕೊಡಲಾಗುತ್ತಿದೆ. ಇನ್ನು ಮದ್ರಾಸ್ ಕರ್ಣಾಟಕ ಪ್ರದೇಶದಲ್ಲಿ 4 ಮತ್ತು 5 ನೆಯ ಸ್ಟ್ಯಾಂಡರ್ಡಿಗೆ 6 ರೂಪಾಯಿ, 6ನೇ ಸ್ಟ್ಯಾಂಡರ್ಡಿಗೆ 9 ರೂಪಾಯಿ 7 ಮತ್ತು 8 ನೆಯ ಸ್ಟ್ಯಾಂಡರ್ಡಿಗೆ 12 ರೂಪಾಯಿ ಅನಂತರ ಫಸ್ಟ್, ಸೆಕೆಂಡ್ ಮತ್ತು ಥರ್ಡ್ ಫಾರಂಗಳಿಗೆ 15 ರೂಪಾಯಿ, ಫೂರ್ತ್ ಅಂಡ್ ಫಿಫ್ತಿಗೆ 30 ರೂಪಾಯಿಗಳು ಇನ್ನು ಕೊಡಗಿನಲ್ಲಿ 4 ಮತ್ತು 5 ನೆಯ ಕ್ಲಾಸುಗಳಿಗೆ 12 ರೂಪಾಯಿ, 6 ಮತ್ತು 7ನೆಯ ಸ್ಟ್ಯಾಂಡರ್ಡಿಗೆ 5 ರೂಪಾಯಿ 2 ಮತ್ತು 3 ನೇ ಸ್ಟ್ಯಾಂಡರ್ಡಿಗೆ 4 ರೂಪಾಯಿ ಮತ್ತು ಒಂದನೆಯ ಸ್ಟ್ಯಾಂಡರ್ಡಿಗೆ 2 ರೂಪಾಯಿ ಹೀಗೆ ಕೊಡಲಾಗುತ್ತಿದೆ. ಇನ್ನು ಎಕ್ಸ್‌ಹೈದ್ರಾಬಾದ್ ಏರಿಯಾದಲ್ಲಿ ಮೆರಿಟ್ ಬಗ್ಗೆ ಮಿಡಲ್ ಸ್ಕೂಲಿನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ 50 ರೂಪಾಯಿಗಳನ್ನೂ ಮತ್ತು ಹೈಸ್ಕೂಲಿನಲ್ಲಿ ಓದತಕ್ಕವರಿಗೆ 75 ರೂಪಾಯಿಗಳನ್ನೂ ಅಂದರೆ ನೂರಕ್ಕೆ 50 ರಂತೆ ನಂಬರುಗಳನ್ನು ಪಡೆದು ಪಾಸಾದವರಿಗೆ ಮೆರಿಟ್ ಎಂದು ಹೇಳಿ ಈ ಸ್ಕಾಲರ್ ಷಿಪ್‌ಗಳನ್ನು ಕೊಡಲಾಗುತ್ತಿದೆ. ಹೀಗೆ ಇವು ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಾಗಿದ್ದ ಕಾರಣ ಇವನ್ನೆಲ್ಲಾ ಒಂದು ಯೂನಿಫಾರಂ ರೇಟಿನಲ್ಲಿ ಕೊಡುವಂತೆ ಮಾಡಬೇಕೆಂದು ಸರ್ಕಾರದವರು ಇದನ್ನೀಗ ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದಾರೆ ಈ ದಿವಸ ಮೆರಿಟ್ ಸ್ಕಾಲರ್‌ಷಿಪ್ಪನ್ನು ಪಡೆಯತಕ್ಕ ವಿದ್ಯಾರ್ಥಿಗಳ ಸಂಖ್ಯೆ 1680 ಇದೆ. ಇನ್ನು ಕಡೆಯದಾಗಿ ಪೋಸ್ಟ್ ಮೆಟ್ರಿಕ್ ಸ್ಕಾಲರ್‌ಷಿಪ್‌ಗಳನ್ನು ಒಂದೊಂದು ಕಾಲೇಜಿನಲ್ಲೂ ಒಂದೊಂದು ರೀತಿಯಾಗಿ ಕೊಡಲಾಗುತ್ತಿದೆ. ಇದನ್ನು ಸಹಾ ಹೆಚ್ಚಿಸಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಮೊದಲೇ ಮನವಿಮಾಡಿಕೊಂಡಿದ್ದೆವು. ಈ ವಿಷಯವನ್ನು ಅನೇಕ ಮಾನ್ಯ ಸದಸ್ಯರೂ ಸಹಾ ಇಲ್ಲಿ ಚರ್ಚೆಮಾಡಿದ್ದಾರೆ, ಇಲ್ಲಿ ಕೊಡತಕ್ಕ ಸ್ಕಾಲರ್‌ಷಿಪ್ ಬಹಳ ಕಡಿಮೆ ಎಂದು. ಯಾರು ಯಾರು ಈ ಕೋರ್ಸಿನಲ್ಲಿ ಜನರಲ್ ಹಾಸ್ಟಲಿನಲ್ಲಿ ಓದುತ್ತಿದ್ದಾರೋ ಅವರು 100 ರೂಪಾಯಿಗಳವರೆಗೂ ಬೋರ್ಡಿಂಗ್ ಫೀಯನ್ನು ಕೊಡಬೇಕಾಗಿತ್ತು. ಇನ್ನು ಮುಂದೆ ಸರ್ಕಾರದವರೇ ಅದನ್ನು ವಹಿಸಿಕೊಳ್ಳಬೇಕೆಂದು ತೀರ್ಮಾನ ಮಾಡಿದ್ದಾರೆ.

ಈ ವರ್ಷದಲ್ಲಿ ಏನಾಗಿದೆ ಎಂದರೆ, ಒಂದೊಂದು ಕಾಲೇಜಿನಲ್ಲಿಯೂ ನಾನು ಈಗಾಗಲೇ ಹೇಳಿದಹಾಗೆ ಒಂದೊಂದು ರೀತಿ ಇದೆ. ಪ್ರೀ ಯೂನಿವರ್ಸಿಟಿ ಐ.ಎಸ್.ಸಿ., ಐ.ಎ., ಐ.ಕಾಮ್, ಐ.ಎಸ್.ಸಿ. (ಅಗ್ರಿಕಲ್‌ಚರಲ್) ಬಿ.ಎಸ್.ಸಿ., ಬಿ.ಎ., ಬಿ.ಕಾಂ. ಇಂಥವುಗಳಿಗೆ ಯಾರು ಯಾರು ವಿದ್ಯಾರ್ಥಿವೇತನಗಳನ್ನು ಪಡೆಯುತ್ತಿದ್ದಾರೆಯೋ ಅವರಿಗೆ ಹಾಸ್ಟಲುಗಳಲ್ಲಿರುವವರಿಗೆ 40 ರೂಪಾಯಿಗಳನ್ನು ಕೊಡುತ್ತಿದೆ. ಹಾಸ್ಟಲಿನಿಂದ ಹೊರಗಡೆ ಇರುವವರಿಗೆ 27 ರೂಪಾಯಿಗಳನ್ನು

ಕೊಡುತ್ತಿದೆ. ಇದು ಈಗ ಇರುವ ರೇಟು. ಈಗ ಇಂಡಿಯಾ ಸರ್ಕಾರದವರು ಸಹ ಬೇಕಾದಷ್ಟು ಸ್ಕಾಲರ್‌ಷಿಪ್‌ಗಳನ್ನು ಕೊಡುತ್ತಿದ್ದಾರೆ. ಆದ್ದರಿಂದ ಆ ಸ್ಕಾಲರ್‌ಷಿಪ್‌ಗಳನ್ನು ಕೊಡುವ ವಿಷಯದಲ್ಲಿ ಕೆಲವು ಸಲಹೆಗಳನ್ನು ನಾವು ಇಂಡಿಯಾ ಸರ್ಕಾರದವರಿಗೆ ಮಾಡಿದ್ದೇವೆ. ಅದು ಈ ರೀತಿ ಇದೆ:

Course of study	Monthly rates for those residing in hostels.	Monthly rates for Day Scholars.	Rates proposed by the Department	
			Hostelers	Day Scholars
	Rs.	Rs.	Rs.	Rs.
Preparatory/Pre-University, I. Sc. I.A.I.Com., I.Sc., (Agri.) B.Sc., B.A. B.Com., corresponding oriental language/Fine arts courses.	40	27	50	40
M.Sc., M.A., M.Com., LL.B., and III yr. class in Hons. courses, corresponding oriental languages Fine Arts courses.	50	35	75	50
D.Sc., D.Litt., Ph.D.	60	45	75	50
Diploma/Certificate courses in Agri., Veterinary Science, Hygiene and Public Health Course, Sanitary Inspector's Course, Pre-Engineering, Pre-Medical Courses.	40	27	50	40
Diploma and Degree courses in Indian Medicine.	40	27	50	40
Teachers' Training and Physical Education :				
(*a*) Under Graduate course	40	27	50	40
(*b*) Post-graduate course	50	35	75	50
B.Sc. (Agri.), B.V.Sc., Diploma courses in Rural Services/Civil and Rural Engineering.	50	35	75	50
Post-graduate courses in Agriculture, post-diploma courses in Co-operation/Community Develoment.	60	45	75	50

(ಶ್ರೀ ಜಿ. ನಾರಾಯಣಗೌಡ)

Course of study	Monthly rates for those residing in hostels.	Monthly rates for Day Scholars.	Rates proposed by the Department	
			Hostelers	Day Scholars
	Rs.	Rs.	Rs.	Rs.
Bachelor of Nursing and Bachelor of Pharmacy Diploma/Certificate courses in Engineering, Technology, Architect Medicine and courses.	65	50	75	50
Medicine and courses for overseers Draftsmen, Surveyor, Electrician, Tool-maker and Wireless Operator.	65	50	75	50
Degree courses in Engineering, Technology Architecture, Medicine and B.A., M. and S. or other similar courses, Master of Pharmacy.	75	60	100	75
Trade course *e.g.* Telegraphy, Book-keeping, Shorthand, Typewriting Tailoring, Tanning and Leather Goods manufacture, etc.	*Ad hoc* financial assistance at Rs. 20 p.m. (inclusive of fees).		*Ad hoc* financial assistance at Rs. 30 p.m. (Inclusive of fees).	

ಈ ರೀತಿಯಾಗಿ ನಾವು ಮಾನ್ಯ ಸದಸ್ಯರು ಹೇಳುವುದಕ್ಕಿಂತ ಮುಂಚಿತವಾಗಿಯೇ ಶಿಫಾರಸ್ಸು ಮಾಡಿದ್ದೇವೆ. ಇದರಿಂದಲೇ ತಮಗೆ ಗೊತ್ತಾಗುತ್ತದೆ, ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ವಹಿಸಿ ಕೆಲಸ ಮಾಡಿದ್ದಾರೆ ಎಂದು. ಇಷ್ಟು ಅಂಕಿ ಅಂಶಗಳನ್ನು ಕೊಟ್ಟಮೇಲೂ ಕೂಡ ಮಾನ್ಯ ಸದಸ್ಯರಲ್ಲಿ ಕೆಲವರು ತಿಳಿದುಕೊಂಡಿದ್ದಾರೆ, ಸರ್ಕಾರದವರು ಯಾರಿಗೂ ಏನೂ ಸಹಾಯ ಮಾಡುವುದಿಲ್ಲ ಎಂದು ಅದು ಸರಿಯಲ್ಲ ಇದು ಸರ್ಕಾರದವರಿಗೆ ತಿಳಿಯದೇ ಇರುವ ವಿಷಯವೇನೂ ಅಲ್ಲ. ಅಲ್ಲಿಯೂ ಕಷ್ಟ ಸುಖಗಳನ್ನು ಅರಿತಿರುವವರೇ ಇದ್ದಾರೆ. ಆದ್ದರಿಂದ ನಿಮ್ನವರ್ಗದವರ ಪ್ರಗತಿಯ ಬಗ್ಗೆ ಸರ್ಕಾರದವರು ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ಡಿನಾಮಿನೇಷನ್ ಆದ ಹಾಸ್ಟಲುಗಳಾಗಿವೆ ಎಂದು ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ಇದನ್ನು ನಾನ್ ಡಿನಾಮಿನೇಷನಲ್ ಆಗಿ ಮಾಡಿದರೆ ಬಹುಶಃ ಅದರಿಂದ ಅಸ್ಪೃಶ್ಯತೆ ನಿವಾರಣೆ ಆಗುವುದಕ್ಕೆ ಒಂದು ಮಾರ್ಗವಾಗುತ್ತದೆ ಎಂದು ನಾವು ಎಲ್ಲಾ ಹಾಸ್ಟಲುಗಳನ್ನೂ ನಾನ್‌ಡಿನಾಮಿನೇಷನಲ್ ಆಗಿ ಮಾಡಿ ಹಲವಾರು ತಿಂಗಳುಗಳಾದುವು. ಬೀರಪ್ಪ ಕಮಿಟಿಯವರು ಶಿಫಾರಸ್ಸು ಮಾಡಿದ್ದನ್ನು ಕಾರ್ಯಗತ ಮಾಡಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಆಕ್ಷೇಪಣೆ ಮಾಡಿದರು. ಆ ವಿಚಾರಕ್ಕೆ ಆಮೇಲೆ ಬರುತ್ತೇನೆ. ಬೀರಪ್ಪ ಕಮಿಟಿಯವರು ಮಾಡಿರತಕ್ಕ ಶಿಫಾರಸ್ಸುಗಳಲ್ಲಿ ಒಂದು ಶಿಫಾರಸ್ಸಿನಲ್ಲಿ ಯಾರು ಜನರಲ್ ಹಾಸ್ಟಲಗಳನ್ನು ನಡೆಸುತ್ತಾರೆಯೋ ಅದರಲ್ಲಿ 25 ಜನ ಷೆಡ್ಯೂಲ್ಡ್ ಕ್ಯಾಸ್ಟ್ ಹುಡುಗರನ್ನೂ, ಮತ್ತು ಷೆಡ್ಯೂಲ್ ಟ್ರೈಬ್ಸ್

ಹುಡುಗರನ್ನೂ ಸೇರಿಸಬೇಕೆಂದು ಇದೆ. ಅದರ ಪ್ರಕಾರ ಆದೇಶವನ್ನು ಕೊಟ್ಟು 25 ಹುಡುಗರನ್ನು ಪ್ರತಿಯೊಂದು ಜನರಲ್ ಹಾಸ್ಟಲಿನಲ್ಲಿಯೂ ಸೇರಿಸಬೇಕೆಂದು ಹೇಳಿದ್ದೇವೆ. ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳಿಗೆ ಸಹಿತ ಅನೇಕ ಸಂದರ್ಭಗಳಲ್ಲಿ ನಾವು ಗ್ರಾಂಟ್ ಕೊಡುತ್ತಿದ್ದೇವೆ. ಈ ವಿಚಾರ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಗ್ರಾಂಟನ್ನು ಅನೇಕ ಹಾಸ್ಟಲುಗಳಿಗೆ ಕೊಟ್ಟಿದ್ದೇವೆ. ಒಬ್ಬರು ಮಾನ್ಯ ಸದಸ್ಯರು ಹೇಳಿದರು, ಪ್ರೈವೇಟ್ ಹಾಸ್ಟಲುಗಳ ಬಿಲ್ಡಿಂಗಳಿಗೋಸ್ಕರ ಸರ್ಕಾರದವರು ಗ್ರಾಂಟ್ ಕೊಡಬೇಕಾದರೆ ಶೇಕಡಾ 25ರಷ್ಟು ಠೇವಣಿಯನ್ನು ಸರ್ಕಾರದಲ್ಲಿ ಇಡಬೇಕೆಂದು ಸರ್ಕಾರದ ನಿಬಂಧನೆ ಇದೆ. ಅದನ್ನು 1/10 ಭಾಗಕ್ಕೆ ಇಳಿಸಬೇಕೆಂದು ಹೇಳಿದರು. ಖಾಸಗಿಯವರು ಒಂದು ವೇಳೆ ಯಾವ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಮಾಡಿದರೂ ಕೂಡ ಅವರು ತಮ್ಮ ಒಂದು ಸ್ವಂತ ಶಕ್ತಿಯಿಂದ ಮತ್ತು ಸಾರ್ವಜನಿಕರ ಹಣದಿಂದ ಅವುಗಳನ್ನು ಪ್ರಾರಂಭ ಮಾಡುತ್ತಾರೆ ಎಂದು ತಾವುಗಳೆಲ್ಲರೂ ತಿಳಿದುಕೊಂಡಿದ್ದೀರೆಂದು ಕಾಣುತ್ತದೆ. ಸರ್ಕಾರದವರು ಅವರಿಗೆ ಗ್ರಾಂಟ್ ಮೂಲಕ ಒಂದು ನೆರವನ್ನು ನೀಡುತ್ತಿದೆ. ಅವರಿಗೂ ಅನೇಕ ಸಂದರ್ಭಗಳಲ್ಲಿ ಸರ್ವಸಾಧಾರಣವಾಗಿ 4 ಪ್ರೈವೇಟ್ ಹಾಸ್ಟಲುಗಳಿಗೆ 65 ಸಾವಿರ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ಪ್ರೈವೇಟ್ ಹಾಸ್ಟಲುಗಳ ಕಟ್ಟಡಗಳಿಗೋಸ್ಕರ ಸರ್ಕಾರದವರು ಗ್ರಾಂಟ್ ಕೊಡಬೇಕಾದರೆ ಅವರು 25 ಪರ್ಸೆಂಟ್ ಡಿಪಾಜಿಟ್ ಅನ್ನು ಸರ್ಕಾರದಲ್ಲಿ ಇಡಬೇಕೆಂಬ ನಿಬಂಧನೆ ಇದ್ದರೂ ಕೂಡ ಕೆಲವು ಉತ್ತಮವಾದ ರೀತಿಯಲ್ಲಿ ನಡೆಸಿಕೊಂಡು ಬರುವ ವಿದ್ಯಾರ್ಥಿನಿಲಯಗಳಿಗೆ ಗ್ರಾಂಟ್ ಕೊಡುವುದರಲ್ಲಿ ಸರ್ಕಾರದ ಒಂದು ಡಿಸ್‌ಕ್ರಿಷನ್ ಇದೆ. ಅದನ್ನು ಉಪಯೋಗಿಸಿ ಕೆಲವು ಸಂದರ್ಭಗಳಲ್ಲಿ ಶೇಕಡಾ 25 ಪರ್ಸೆಂಟ್ ಡಿಪಾಜಿಟ್ ಇಡಬೇಕೆಂಬುದನ್ನು ಮನ್ನಾ ಮಾಡಿದ್ದೇವೆ.

6-30 P.M.

ಈಗ ಇರತಕ್ಕಂಥ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳನ್ನು ಇನ್ನೂ ಹೆಚ್ಚು ಮಾಡಬೇಕೆಂದು ಕೆಲವು ಸದಸ್ಯರುಗಳು ಹೇಳಿದರು. ಈಗ ಇರತಕ್ಕಂಥ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು, ಆ ಹಾಸ್ಟೆಲ್‌ಗಳಲ್ಲಿ ಎಷ್ಟು ಜನ ಇರುವುದಕ್ಕೆ ಅವಕಾಶವಿದೆ ಮತ್ತು ಈಗ ಎಷ್ಟು ಜನ ವಿದ್ಯಾರ್ಥಿಗಳು ಇದ್ದಾರೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ತಮ್ಮ ಮುಂದೆ ಇಟ್ಟರೆ ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡಬೇಕೇ ಅಥವಾ ಬೇಡವೇ ಎಂಬುದು ತಮಗೇ ಗೊತ್ತಾಗುತ್ತದೆ.

	No. of Hostels	*Sanctioned Strength*	*Actual strength*
Government Hostel for Scheduled Caste for Boys.	187	10,202	8,710
Government Hostel for Girls.	99	3,237	2,644
Government Hostel for Scheduled Tribes, for Boys.	7	449	374
Denotified Tribes for Boys.	21	711	675
Denotified Tribes for Girls.	2	50	25
Ashram Schools for Scheduled Tribes.	44	2,057	1,921
Denotified.	32	1,350	1,257
Nomadic Tribes.	27	1,265	1,189
Residential Schools for Scheduled Castes.	12	1,000	839

ಈ ಅಂಕಿ ಅಂಶಗಳನ್ನು ಏತಕ್ಕೆ ಹೇಳಿದೆನೆಂದರೆ, ಈ ನತದೃಷ್ಟ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಕರ್ತವ್ಯ ಸರ್ಕಾರಕ್ಕೆ ಸೇರಿದ್ದು. ಆ ಒಂದು ದೃಷ್ಟಿಯಿಂದ ಹೇಳುವುದಾದರೆ, ಈಗ ಸ್ಯಾಂಕ್ಷನ್ಡ್ ಸ್ಟ್ರೆಂಗ್ತ್ ಎಷ್ಟು ಇದೆಯೋ ಅಷ್ಟು ಜನ ವಿದ್ಯಾರ್ಥಿಗಳು ಇನ್ನೂ ಬಂದಿಲ್ಲದಿರುವುದರಿಂದ ಹೊಸದಾಗಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭ ಮಾಡುವುದು ಸರಿಯಲ್ಲವೆಂದು ಕಾಣುತ್ತದೆ. ಬೇರೆ ಸ್ಥಳಗಳಲ್ಲಿ ವಿದ್ಯಾರ್ಥಿಗಳು ಇದ್ದು ಅಲ್ಲಿ ಹಾಸ್ಟಲ್ ಇಲ್ಲದಿದ್ದರೆ, ಅಂತಹ ಸಂದರ್ಭಗಳಲ್ಲೂ ಸಹ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿದ್ದೇವೆ. ಈ ಒಂದು ವರ್ಷದಲ್ಲಿ ಹೆಣ್ಣು ಮಕ್ಕಳು ಮತ್ತು ಗಂಡುಮಕ್ಕಳಿಗೆ ಸಂಬಂಧಪಟ್ಟಂತೆ 15 ಹಾಸ್ಟೆಲ್‌ಗಳನ್ನು ಸ್ಯಾಂಕ್ಷನ್ ಮಾಡಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಬೇರೆ ಬೇರೆ ಜಾತಿಗಳ ಹಾಸ್ಟೆಲ್‌ಗಳಿಗೆ ಬದಲು ಜನರಲ್ ಹಾಸ್ಟೆಲ್ ಮಾಡುತ್ತಿದ್ದೇವೆಂದು ಹೇಳಿದಿರಿ. ಯಾವ ನಿಯಮದ ಮೇರೆ ಈ ತತ್ವವನ್ನು ಅನುಷ್ಠಾನಕ್ಕೆ ತರುತ್ತೀರಿ ?

ಶ್ರೀ ಜಿ. ನಾರಾಯಣ ಗೌಡ.—ಯಾರಾದರೂ ಹಾಸ್ಟೆಲ್ ಪ್ರಾರಂಭ ಮಾಡಿದರೆ ಶೇಕಡ 25ರಷ್ಟು ಬೇರೆ ಕೋಮಿನವರನ್ನು ಆ ಹಾಸ್ಟೆಲ್‌ಗೆ ಸೇರಿಸಬೇಕೆಂದು ಕಡ್ಡಾಯವಾದ ನಿಯಮ ವನ್ನು ಮಾಡಿದ್ದೇವೆ. ಈಗಿರತಕ್ಕಂಥ ಹಾಸ್ಟೆಲ್‌ಗಳನ್ನು ನಾನ್-ಡಿನಾಮಿನೇಷನ್ ಆಗಿ ಮಾಡಿದ್ದೇವೆ.

ಶ್ರೀ ಡಿ. ಎಸ್. ನಾಡಕರ್ಣಿ (ಅಂಕೋಲ).—ನಮ್ಮ ರಾಜ್ಯದಲ್ಲಿ ಒಟ್ಟು ಎಷ್ಟು ಜನ ಹರಿಜನರ ಮಕ್ಕಳಿದ್ದಾರೆ ಮತ್ತು ಅವರಲ್ಲಿ ಎಷ್ಟು ಪ್ರಗತಿಯಾಗಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ಆ ವಿವರ ಇಲ್ಲ. ಇಷ್ಟು ಮಾತ್ರ ಹೇಳುತ್ತೇನೆ, ನಮ್ಮ ರಾಜ್ಯ ದೊಳಗೆ ಈಗ 5 ಯೂನಿವರ್ಸಿಟಿ ಹಾಸ್ಟೆಲ್‌ಗಳು ಇವೆ. ಇವುಗಳು ಡೈರೆಕ್ಟರ್ ಆಫ್ ಕೊಲಿಜಿಯೆಟ್ ಎಜುಕೇಷನ್ ಅವರ ಅಧೀನದಲ್ಲಿವೆ. ಎರಡು ಬೆಂಗಳೂರಿನಲ್ಲಿವೆ, ಒಂದು ತುಮಕೂರಿನಲ್ಲಿದೆ ; ಒಂದು ಚಿತ್ರದುರ್ಗದಲ್ಲಿದೆ ಮತ್ತೊಂದು ಹಾಸನದಲ್ಲಿದೆ. ಬೆಂಗಳೂರು ಮತ್ತು ತುಮಕೂರಿನಲ್ಲಿ ರುವ ಹಾಸ್ಟೆಲಿನ ವಿದ್ಯಾರ್ಥಿಗಳು ಈಗಿನ ಕಾಲಕ್ಕೆ ನಮಗೆ ಹೆಚ್ಚು ಖರ್ಚು ಬರುವುದರಿಂದ ಸರ್ಕಾ ರದವರು ಸಹಾಯ ಮಾಡಬೇಕೆಂದು ಬಂದು ಕೇಳಿಕೊಂಡರು. ಈಗ ಪರೀಕ್ಷೆ ಸಮಯವಾದ್ದರಿಂದ ಈ ವಿದ್ಯಾರ್ಥಿಗಳಿಗೆ ಹೆಚ್ಚು ಖರ್ಚು ಬರುತ್ತದೆ. ಈಗಿರತಕ್ಕಂಥ ಹಾಸ್ಟೆಲ್‌ಗಳನ್ನು ನಾನ್ ಡಿನಾಮಿ ನೇಷನ್ ಆಗಿ ಪರಿವರ್ತನೆ ಮಾಡಿದರೆ ಕೇಂದ್ರ ಸರ್ಕಾರದವರಿಂದ ಸಹಾಯ ಪಡೆದು ನೂರು ರೂಪಾಯಿಗಳವರೆಗೆ ಇವರಿಗೆ ಖರ್ಚು ಮಾಡಲು ಹಣ ಕೊಡುವುದಕ್ಕೆ ಅವಕಾಶವಾಗುತ್ತದೆಂದು ಡೈರೆಕ್ಟರ್ ಆಫ್ ಕೊಲಿಜಿಯೆಟ್ ಎಜುಕೇಷನ್ ಅವರಿಗೆ ಹೇಳಿದೆ. ಅದರ ಪ್ರಕಾರ ಅವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಈಗ ಪರೀಕ್ಷೆ ಸಮಯವಾದ್ದರಿಂದ ಬೆಂಗಳೂರು ಮತ್ತು ತುಮಕೂರು ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳಿಗೆ ಬರತಕ್ಕಂಥ ಹೆಚ್ಚಿನ ಖರ್ಚನ್ನು ಸಮಾಜ ಕಲ್ಯಾಣ ಇಲಾಖೆ ಯವರು ವಹಿಸಿಕೊಳ್ಳಬೇಕೆಂದು ಅಲ್ಲಿನ ಅಧಿಕಾರಿಯವರಿಗೆ ತಿಳಿಸಿದ್ದೇವೆ.

Sri J. P. SARWESH (Serum).—In Gulbarga, there is no such hostel for College. Is there any proposal this year ?

Sri G. NARAYANA GOWDA.—There is no proposal.

ಹರಿಜನರ ಆರ್ಥಿಕ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಮಾನ್ಯ ಸದಸ್ಯರುಗಳು ಕೆಲವರು ಹೇಳಿದರೆ ಮತ್ತೆ ಕೆಲವು ಮಾನ್ಯ ಸದಸ್ಯರುಗಳು ಇವರ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕೆಂದು ಹೇಳಿದರು. ಕೇವಲ ಕೋಳಿ ಮತ್ತು ಕುರಿಗಳನ್ನು ಇವರಿಗೆ ಕೊಟ್ಟರೆ ಇವರ ಏಳಿಗೆಯಾಗುವುದಿಲ್ಲವೆಂದು ಶ್ರೀಮತಿ ನಾಗಮ್ಮನವರು ಹೇಳಿದರು. ಇವು ಗಳನ್ನು ಅವರಿಗೆ ಕೊಡುವುದು ಅವರ ಅಭಿವೃದ್ಧಿಯಾಗಲಿ ಎಂದು. ಅಭಿವೃದ್ಧಿಯ ಬಗ್ಗೆ ಇವರಿಗೆ ಸಾಕಷ್ಟು ತಿಳಿವಳಿಕೆ ಇಲ್ಲವಾಗಿದೆ. ಇವರ ಆರ್ಥಿಕ ಅಭಿವೃದ್ಧಿಯಾಗಬೇಕಾದರೆ ತಂಗಡಿ ಚೆಕ್ಕೆಯನ್ನು ಇವರಿಗೇ ಕೊಡಿ ಎಂದು ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದರು. ಈ ಬಗ್ಗೆ ಒಂದು ಸಹಕಾರ ಸಂಘವನ್ನು ಮಾಡಿ ಆ ಮೂಲಕ ಕೊಡುವುದು ಒಳ್ಳೆಯದೇ ಅಥವಾ ವೈಯುಕ್ತಿಕವಾಗಿ ಕೊಡುವುದು ಒಳ್ಳೆಯದೇ ಎಂಬುದು ಒಂದು ವಿಚಾರವಾಗಿದೆ. ವೈಯುಕ್ತಿಕ ವಾಗಿ ಕೊಟ್ಟರೆ ಕೋಳಿ, ಕುರಿ ಕೊಟ್ಟಂತೆ ಆಗುತ್ತದೆಯೋ ಏನೋ ಎಂಬ ಅನುಮಾನವಿದೆ.

ಶ್ರೀ ಎ. ಮುನಿಯಪ್ಪ.—ಕೋಳಿ, ಕುರಿ ಕೊಟ್ಟಂತೆ ಆಗುತ್ತದೆಂದು ಹೇಳುವುದಾದರೆ ಬೇರೆ ಜನಾಂಗಕ್ಕೆ ಕೊಟ್ಟ ಅನುಕೂಲಗಳನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂಬು ದನ್ನು ಗಣನೆಗೆ ತೆಗೆದುಕೊಂಡಿದ್ದೀರಾ ?

ಶ್ರೀ ಜಿ. ನಾರಾಯಣ ಗೌಡ.—ಹರಿಜನರಿಗೆ ಕೊಟ್ಟ ಅನುಕೂಲಗಳನ್ನು ದುರುಪಯೋಗ ಪಡಿಸಿಕೊಳ್ಳಲು ಬೇರೆ ಜನಾಂಗದವರು ಪ್ರವೇಶ ಮಾಡುತ್ತಿದ್ದಾರೆ. ತಂಗಡಿಚಕ್ಕೆಯ ಬಗ್ಗೆ ಹರಿಜನರ ಒಂದು ಸಹಕಾರಸಂಘವನ್ನು ಮಾಡಿಕೊಂಡು, ಸರ್ಕಾರದವರು ಟೆಂಡರ್ ಕರೆದಾಗ, ಇವರು ಸಹ ಟೆಂಡರ್ ಹಾಕಿಕೊಂಡರೆ ಕೆಲವೊಂದು ರಿಯಾಯಿತಿಗಳನ್ನು ತೋರಿಸುವ ಬಗ್ಗೆ ಸರ್ಕಾರ ದವರು ಪರಿಶೀಲನೆ ಮಾಡುತ್ತಾರೆಂದು ಶ್ರೀಮಾನ್ ಸಿದ್ಧವೀರಪ್ಪನವರಿಗೆ ಹೇಳುತ್ತೇನೆ.

ಇನ್ನು ನಮ್ಮಲ್ಲಿ 225 ವ್ಯವಸಾಯದ ಕಾಲೊನಿಗಳಿವೆ. 1965ರವರೆಗೆ ಕೇಂದ್ರಸರ್ಕಾರದ ಸಹಾಯವನ್ನು ಪಡೆದುಕೊಂಡು ಈ 225 ಕಾಲೋನಿಗಳನ್ನು ಮಾಡಿದ್ದೇವೆ. ಈ ಕಾಲೋನಿಗಳಲ್ಲಿ ಕೆಲಸ ಮಾಡುವವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಮತ್ತು ಎತ್ತು ಗಾಡಿಗಳನ್ನು ಕೊಡಿಸಿದ್ದೇವೆ. ಸಾಕಷ್ಟು ಜಮೀನು ಕೊಡಿಸಿದ್ದೇವೆ. ಆದರೆ ಈ ಅಗ್ರಿಕಲ್ಚರಲ್ ಕಾಲೊನೀಸ್ ಯಾವ ರೀತಿಯಲ್ಲಿವೆ ಎಂದು ಒಂದು ವೇಳೆ ಕೇಂದ್ರ ಸರ್ಕಾರದವರು ಪರಿಶೀಲನೆ ಮಾಡಿದರೆ, ಇದು ಯಾವ ಮಟ್ಟಕ್ಕೆ ಬರಬೇಕಾಗಿತ್ತೋ ಆ ಮಟ್ಟಕ್ಕೆ ಬರಲಿಲ್ಲ. ಆದ್ದರಿಂದ ಇದನ್ನು ಮುಂದೆ ಕೊಡಲು ಸಾಧ್ಯವಿಲ್ಲವೆಂದು ನಿಲ್ಲಿಸಿಬಿಡಬಹುದು. ನಾವು ಇದನ್ನು ಮುಂದುವರಿಸಬೇಕು ಮಲ್ಟಿ ಪರ್ಪಸ್ ಕೋಆಪರೇಟಿವ್ ರಿಹ್ಯಾಬಿಲಿಟೇಶನ್ ಪ್ರಾಜೆಕ್ಟ್ 12 ಮಾಡಿದ್ದೇವೆ. ಅದನ್ನು ಕೂಡ ಸ್ವಲ್ಪ ಯೋಚಿಸಿ ಮಾಡುವುದು ಉತ್ತಮವೆಂದು ಹೋದವರ್ಷ ಶೇಕಡಾ 25 ರಷ್ಟು ನೀರಾವರಿ ಜಮೀನು ಸಿಕ್ಕಿದಲ್ಲಿ ಮಾಡಿದ್ದೇವೆ. ಮುಂದೆ ಇದನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಯೋಚನೆ ಮಾಡುತ್ತೇವೆ. ಅದೇ ರೀತಿ ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಇವೆ. ಇದಕ್ಕೆ ನಾವು ಸ್ವಲ್ಪ ಹಣ ಕೊಡದಿದ್ದರೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಲ್ಯಾಂಡ್ ರಿಕ್ಲಮೇಶನ್, ಮತ್ತು ಇರಿಗೇಶನ್ ವೆಲ್ಸ್‌ಗೆ ಮತ್ತು ಪಂಪ್‌ಸೆಟ್ಟುಗಳಿಗೆ ಹಣ ಬೇಕು. ಹೀಗೆ ಒಟ್ಟು 41 ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳಿಗೆ ನಾವು ಮೂರು ಲಕ್ಷ 18 ಸಾವಿರ ರೂಪಾಯಿ ಕೊಟ್ಟಿದ್ದೇವೆ. ರಿಕ್ಲಮೇಶನ್ ಆಫ್ ಲ್ಯಾಂಡ್ ಮತ್ತು ಇರಿಗೇಶನ್ ವೆಲ್ಸ್‌ಗೋಸ್ಕರ 75 ಪರ್‌ಸೆಂಟ್ ಲೋನ್, 25 ಪರ್‌ಸೆಂಟ್ ಸಬ್ಸಿಡಿ ಕೊಡುತ್ತೇವೆ. ಆಮೇಲೆ ಪಂಪಸೆಟ್ಟಿಗೆ ಪೂರಾ ಲೋನ್. ಹೀಗೆ ಮೂರು ಲಕ್ಷ 18 ಸಾವಿರ ಕೊಟ್ಟಿದ್ದೇವೆ. ಅವರಿಗೆ ನೆರವು ಸಿಗಲಿ ಎನ್ನುವ ದೃಷ್ಟಿಯಿಂದ ಡೈರಿ ಫಾರ್ಮ್ ಮತ್ತು ಪೌಲ್ಟ್ರಿ ಫಾರ್ಮಿಂಗೆ ಸಹಾಯವನ್ನು ನಾವು ಕೊಟ್ಟಿದ್ದೇವೆ.

Sri J. P. SARWESH.—Regarding dairy farms you are telling that in Sedum they have registered the land. But since 1½ years up till now you have not looked into it.

Sri G. NARAYANA GOWDA.—No land has been sanctioned to that Society.

Sri J. P. SARWESH.—I want to make one point clear, Sir, I may be given one minute, Sir.

Mr. CHAIRMAN.—The member will please take his seat in the first instance. If he wants to ask anytning he may do it coolly and the Minister will reply. The Minister May be allowed first to reply.

ಶ್ರೀ ಜಿ. ನಾರಾಯಣ ಗೌಡ.—ನಾವು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಡೈರಿ ಫಾರ್ಮಿಂಗಿಗೆ ಕೊಟ್ಟ ಹಣವನ್ನು ಹೇಳುತ್ತೇನೆ. ಷೆಡ್ಯೂಲ್ಡ್ ಕಾಸ್ಟಿಗೆ 91 ಸಾವಿರ 250 ರೂಪಾಯಿ, ಷೆಡ್ಯೂಲ್ಡ್ ಟ್ರೈಬ್ಸ್‌ಗೆ 56 ಸಾವಿರ ರೂಪಾಯಿ, ಡಿನೋಟಿಫೈಡ್‌ಗೆ ಒಂದು ಲಕ್ಷದ 90 ಸಾವಿರ ರೂಪಾಯಿ, ಮತ್ತು ನೊಮ್ಯಾಡಿಕ್ ಮತ್ತು ಸೆಮಿ–ನೊಮಾಡಿಕ್‌ಗೆ 98 ಸಾವಿರ ರೂಪಾಯಿ, ಹೀಗೆ ಒಟ್ಟು ಮೂರು ಲಕ್ಷದ 35 ಸಾವಿರ 250 ರೂಪಾಯಿ. ಆ ಮೇಲೆ ಷೆಡ್ಯೂಲ್ಡ್ ಕಾಸ್ಟಿಗೆ 56 ಸಾವಿರ, ಷೆಡ್ಯೂಲ್ಡ್ ಟ್ರೈಬ್ಸ್‌ಗೆ 8 ಸಾವಿರ, ಡಿನೋಟಿಫೈಡ್ ಟ್ರೈಬ್ಸ್‌ಗೆ 20 ಸಾವಿರ, ನೊಮ್ಯಾಡಿಕ್ ಮತ್ತು ಸೆಮಿ ನೊಮ್ಯಾಡಿಕ್‌ಗೆ 12 ಸಾವಿರ. ಹೀಗೆ ಒಟ್ಟಿಗೆ 96 ಸಾವಿರ ರೂಪಾಯಿ ಕೊಟ್ಟಿದ್ದೇವೆ. ಇದರ ಜೊತೆಗೆ 53 ಟ್ರೈನಿಂಗಿಗೆ ಇನ್ ಟೈಲರಿಂಗ್ ಎಂಬ ಕೇಂದ್ರಗಳು ಇವೆ. ಇದರಲ್ಲಿ ಒಂದು ವರ್ಷ ನಾವು ತರಬೇತಿಯನ್ನು ಕೊಡುತ್ತೇವೆ. ಅನಂತರ ಅವರಿಗೆ ಒಂದು ಪರೀಕ್ಷೆಯನ್ನು ಮಾಡಿ, ಅದರಲ್ಲಿ ಪಾಸಾದರೆ ಅವರಿಗೆ ಒಂದು ಹೊಲಿಗೆ ಯಂತ್ರವನ್ನು ಸಹಿತ ಉಚಿತವಾಗಿ ಕೊಡುತ್ತೇವೆ. ಇದನ್ನು ಅನೇಕರು ತೆಗೆದುಕೊಂಡಿದ್ದಾರೆ; ಮತ್ತು ಅದರಿಂದ ಪ್ರಯೋಜನವನ್ನು ಹೊಂದಿದ್ದಾರೆ. ಟ್ರೈನಿಂಗ್ ಸಮಯದಲ್ಲಿ ತಿಂಗಳಿಗೆ 20 ರೂಪಾಯಿ ಸ್ಟೈಪೆಂಡ್ ಕೊಡುತ್ತೇವೆ. ನಾನು ಒಂದು ಸಲ ಈ ಟ್ರೈನಿಂಗ್ ಸೆಂಟರಿಗೆ ಭೇಟಿ ಕೊಟ್ಟಾಗ ನೋಡಿದ ಪ್ರಕಾರ, ಈ ತರಬೇತಿ ಕಾಲವನ್ನು ಒಂದು ವರ್ಷವಿರುವುದನ್ನು ಎರಡು ವರ್ಷ ಮಾಡಬೇಕೆಂದು ಎನಿಸಿತು. ಬಹುಶಃ ಮುಂದಿನ ವರ್ಷದಿಂದ ಎರಡು ವರ್ಷ ಮಾಡುವುದಕ್ಕೆ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಹಾಗೆ ಕಾಯಿರ್ ಸೆಂಟರ್ಸ್ 5 ಇವೆ. ಅಲ್ಲಿಯೂ ಸ್ಟೈಪೆಂಡ್ 50 ರೂಪಾಯಿ ಕೊಡುತ್ತಿದ್ದೇವೆ. ಇನ್ನು ಟೈಲರಿಂಗ್ ಕಲಿತಮೇಲೆ ಅನೇಕರಿಗೆ ವೃತ್ತಿ ಸಿಗದಿರಬಹುದು, ಅದರಿಂದ ನಾವು ಒಂದು ಟೈಲರಿಂಗ್ ಪ್ರೊಡಕ್ಷನ್ ಸೆಂಟರ್ ಮಾಡಿ ಅವರನ್ನು

(ಶ್ರೀ ಜಿ. ನಾರಾಯಣ ಗೌಡ)

ಅಲ್ಲಿ ತೆಗೆದುಕೊಂಡು ದಿನ ಕೂಲಿ ಕೊಡುತ್ತಿದ್ದೇವೆ. ಅಂಥ ಯೂನಿಟ್ಟುಗಳು 5 ಇವೆ. ನಮ್ಮಲ್ಲಿ ಆಕ್ಯುಪೇಶನಲ್ ಇನ್‌ಸ್ಟಿಟ್ಯೂಟ್ ಎರಡು ಇವೆ. ಅದರೊಳಗೆ ಟೈಲರಿಂಗ್ ಮತ್ತು ಸ್ಟೆನೋಗ್ರಾಫಿ ಶಿಕ್ಷಣವನ್ನು ಕೊಡುತ್ತಿದ್ದಾರೆ. ಇದರ ಜೊತೆಗೆ ನಮ್ಮಲ್ಲಿ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಮತ್ತು ಬೇರೆ ಪ್ರಿಂಟಿಂಗ್ ಪ್ರೆಸ್ ಇವೆ ಮತ್ತು ಬೇರೆ ಕಾರ್ಖಾನೆಗಳಿಗೆ ಶೆಡ್ಯೂಲ್ಡ್ ಕಾಸ್ಟ್ ಶೆಡ್ಯೂಲ್ಡ್ ಟ್ರೈಬ್‌ಗಳನ್ನು ಟ್ರೈನಿಂಗಿಗೆ ಕಳಿಸಿಕೊಡುತ್ತೇವೆ. ಅನೇಕ ಸಂದರ್ಭಗಳಲ್ಲಿ ಟ್ರೈನಿಂಗ್‌ಪಡೆದ ಜನರಿಲ್ಲದಿರುವುದರಿಂದ ಅನಾನುಕೂಲವಾಗಿದೆ. ಆ ದೃಷ್ಟಿ ಯಿಂದ ಟ್ರೈನಿಂಗ್ ಕೊಡುವುದಕ್ಕೋಸ್ಕರ ನಾವು ಸ್ಟೈಪೆಂಡ್ ಕೊಟ್ಟು ಕಲಿಸಿಕೊಡುತ್ತಿದ್ದೇವೆ. ಅವರ ಟ್ರೈನಿಂಗ್ ಸೆಂಟರ್ ಹೀಗೆ ಇವೆ. ಶೆಡ್ಯೂಲ್ಡ್ ಕಾಸ್ಟ್—896, ಶೆಡ್ಯೂಲ್ಡ್ ಟ್ರೈಬ್ 116, ಡಿನೋಟಿಫೈಡ್ 134. Number of trainees undergoing training in Government printing press :

Scheduled Caste	...	74
Scheduled Tribes	...	8
Denotified Tribes	...	3
Nomadic and Semi-Nomadic tribes	...	1
No. of trainees undergoinig training in private printing press :	...	14
No. of trainees undergoing training at Mat Weavers' Co-operative Society Jogichettihally, Bellary District	...	10
Government Electric Factory	...	45
Central Industrial Workshop	...	10
H. A. L.	...	40

ಅವರಿಗೆಲ್ಲಾ ಸ್ಟೈಪೆಂಡ್ ಕೊಡುತ್ತಿದ್ದೇವೆ.

ಆಮೇಲೆ ಕೆಲವು ಮಾನ್ಯ ಸದಸ್ಯರುಗಳು ವಸತಿ ಸೌಕರ್ಯಗಳನ್ನು ಮಾಡಿಕೊಡಲು ಮನೆ ಕೊಡುವುದರ ಬಗ್ಗೆ ಕೆಲವು ಆಕ್ಷೇಪಣೆಗಳನ್ನು ಎತ್ತಿದರು. ನಾವು 1966ರ ವರೆಗೆ ಒಂದು ಮನೆಗೆ ನಾನೂರು ರೂಪಾಯಿಗಳೆಂದು ಗ್ರಾಂಟು ರೂಪದಲ್ಲಿ ಕೊಟ್ಟು ಇದುವರೆಗೆ ಸುಮಾರು 43 ಸಾವಿರ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಇದೂ ಅಲ್ಲದೆ 1966ರ ಒಳಗೆ ನಾವು ಷೆಡ್ಯೂಲು ಕ್ಯಾಸ್ಟು ಹಾಗೂ ಟ್ರೈಬ್ಸ್‌ಗಳಿಗಾಗಿ ಒಂದು ಹೌಸಿಂಗು ಕಾರ್ಪೊರೇಷನ್ ಮಾಡಿ ಅವರಿಗೆ ಸುಮಾರು ಮೂರು ವರೆ ಕೋಟಿಯಷ್ಟು ಹಣವನ್ನು ಸಾಲವಾಗಿ ಎಲ್. ಐ. ಸಿ. ಮೂಲಕ ತೆಗೆದುಕೊಂಡು ಕೊಡಲಾ ಯಿತು ಮತ್ತು ಅವರು ಇದರಿಂದ ಸುಮಾರು ಹತ್ತು ಲಕ್ಷದಷ್ಟು ಹಣವನ್ನು ಷೇರು ಕ್ಯಾಪಿಟಲ್‌ಗಾಗಿ ಉಪಯೋಗಿಸಿಕೊಂಡು ಸುಮಾರು ಮೂರು ಲಕ್ಷ ನಲವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮನೆಗಳನ್ನು ಕಟ್ಟಿದ್ದಾರೆ. ಆದರೆ ಇದರ ಬಗ್ಗೆ ಮಾತನಾಡುತ್ತಾ ಅನೇಕ ಸದಸ್ಯರು ಇದರಿಂದ ಏನೂ ಪ್ರಯೋಜನವಿಲ್ಲ ಎಂದು ಹೇಳಿದರು. ನಾನು ಇವೊತ್ತಿನ ದಿವಸ ತಮಗೆ ಒಂದು ವಿಚಾರ ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಅದು 12,888 ಮನೆಗಳಿಗಾಗಿ ಸುಮಾರು 2,47,84,000 ರೂಪಾಯಿಗಳನ್ನು ಇಲ್ಲಿಯವರೆಗೆ ನಾನು ಮಂಜೂರು ಮಾಡಿದ್ದೇನೆ. ಇದರ ಬಗ್ಗೆ ತಾವು ಸ್ವಲ್ಪ ತಿಳಿದುಕೊಳ್ಳಬೇಕು ಎಂದು ಇಲ್ಲಿ ವಿವರಗಳನ್ನು ಹೇಳುತ್ತಿದ್ದೇನೆ. ಇದರ ಜೊತೆಗೆ ನಾವು ಇನ್ನೂರು ರೂಪಾಯಿಗಳಷ್ಟು ಟಿಂಬರನ್ನು ಪುಕ್ಕಟೆಯಾಗಿ ಇವರಿಗೆ ಕೊಡುತ್ತಿದ್ದೇವೆ. ಅನೇಕ ಸಂದರ್ಭಗಳಲ್ಲಿ ಇವು ಸರಿಯಾಗಿ ಉಪಯೋಗವಾಗುತ್ತಿವೆ. ಆದರೆ ಇಲ್ಲಿ ಸದಸ್ಯರು ಫ್ರೀ ಟಿಂಬರು ಎಂದು ಕೊಡು ವುದು ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಿಲ್ಲ ಎಂದು ಹೇಳಿದರು. ಎಲ್ಲೋ ಒಂದೆರಡು ಕಡೆಗಳಲ್ಲಿ ಹಾಗಾಗಿರಬಹುದು. ಅಂತಹ ಕಡೆಗಳಿಂದ ದೂರುಗಳು ಬಂದರೆ ಅದನ್ನು ಕೂಡಲೇ ತನಿಖೆ ಮಾಡಿ ಸರಿಯಾದ ರೀತಿಯಲ್ಲಿ ಹಂಚಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಎಲ್ಲೋ ಒಂದು ಕಡೆ ದುರುಪಯೋಗವಾಗುತ್ತಿದೆ ಎಂದು ಎಲ್ಲಾ ಕಡೆಗಳಲ್ಲಿಯೂ ಹಾಗಾಗುತ್ತಿದೆ ಎಂದು ಹೇಳುವುದು ಸರಿಯಾಗಿರುವುದಿಲ್ಲ. ಎಲ್ಲಿ ದುರುಪಯೋಗವಾಗಿದೆ ಎನ್ನುವ ಸನ್ನಿವೇಶಗಳನ್ನು ತನಿಖೆ ಮಾಡಲು ಅಲ್ಲಲ್ಲಿ ಅಧಿಕಾರಿಗಳನ್ನು ಇಡಲಾಗಿದೆ. ಹಿಂದೆ ಗ್ರಾಮಪಂಚಾಯತಿಗಳವರೇ ಸರ್ಟಿಫಿಕೇಟು ಕೊಟ್ಟರೆ ಸಾಕು ಎಂದು ಈ ಫ್ರೀ ಟಿಂಬರನ್ನು ಕೊಡಲಾಗುತ್ತಿತ್ತು. ಈಗ ಇದನು

ತಪ್ಪಿಸಿ ಎಲ್ಲರೂ ಆಯಾ ಪ್ರದೇಶದಲ್ಲಿರುವ ಬಿ.ಡಿ.ಓ. ರವರ ಮೂಲಕವೇ ಸರ್ಟಿಫಿಕೇಟನ್ನು ಟಿಂಬರಿಗಾಗಿ ತರಬೇಕೆಂದು ಮತ್ತು ಟಿಂಬರು ತೆಗೆದುಕೊಂಡು ಹೋದಮೇಲೆ ಅದನ್ನು ಉಪಯೋಗಿಸಿದ್ದಾರೆಯೋ ಇಲ್ಲವೇ ಎನ್ನುವುದನ್ನು ಬಿ. ಡಿ. ಓ. ರವರು ನೋಡಿ ತನಿಖೆ ಮಾಡಬೇಕೆಂದೂ ವಿಧಾಯಕ ಮಾಡಲಾಗಿದೆ ಮತ್ತು ಎಲ್ಲಾ ಜವಾಬುದಾರಿಗಳನ್ನೂ ಬಿ. ಡಿ. ಓ. ರವರ ಮೇಲೆಯೇ ಹಾಕಿರುವುದರಿಂದ ಹೆಚ್ಚು ದುರುಪಯೋಗವಾಗುವುದಕ್ಕೆ ಈಗ ಅವಕಾಶವಾಗುವುದಿಲ್ಲ ಮತ್ತು ಪರಿಣಾಮಕಾರಿಯಾಗಿ ಇದರ ಕೆಲಸಗಳು ನಡೆಯಬೇಕೆಂದು ಈ ಅಧಿಕಾರಗಳನ್ನೆಲ್ಲಾ ಆಯಾ ಬಿ. ಡಿ. ಓ. ಗಳಿಗೆ ವಹಿಸಲಾಗಿದೆ. ಶ್ರೀಮಾನ್ ದುಗ್ಗಪ್ಪನವರು ಹಾಗೂ ಇನ್ನಿಬ್ಬರು ಸದಸ್ಯರು ಇಲ್ಲ ಹೇಳಿದರು, ಕಾರ್ಪೊರೇಷನ್ ಎಂದು ಮಾಡಿ ಇದಕ್ಕೆ ಒಬ್ಬರು ಡೆವಲಪ್‌ಮೆಂಟು ಕಮಿಷನರು ಎಂದು ದೊಡ್ಡದಾಗಿ ಮಾಡಿದ್ದೀರಿ, ಹಿಂದೆ ಇದು ಇರಲಿಲ್ಲ ಈಗ ಏಕೆ ಮಾಡಲಾಯಿತು ಎಂದು. ಇದು ಪ್ರಥಮತಃ 1966 ರಲ್ಲಿ ಪ್ರಾರಂಭವಾಗಿರುವುದು. ಬಹುಶಃ ಮೂರು ವರ್ಷಗಳ ಕಾಲ ಇವರು ಸರಕಾರದ ಕಡೆಯಿಂದ ನೇಮಕವಾಗಿರುವ ಅಧಿಕಾರಿಗಳಾಗಿರಬಹುದು. ಮೂರು ವರ್ಷಗಳು ಕಳೆದ ನಂತರ ಇದನ್ನು ಖಾಸಗಿಯವರೇ ವಹಿಸಿಕೊಂಡು ಇನ್ನೂ ಚೆನ್ನಾಗಿ ನಡೆಸಬಹುದು. ಇದನ್ನು ಮಾನ್ಯ ಸದಸ್ಯರಾದ ಶ್ರೀ ದುಗ್ಗಪ್ಪನವರು ತಿಳಿದೂ ತಿಳಿದೂ ಸುಮ್ಮನೆ ಇಲ್ಲಿ ಒಂದು ಟೀಕೆ ಮಾಡಬೇಕೆಂದು ಮಾಡುತ್ತಿದ್ದಾರೆ.

ಆಮೇಲೆ ಇದರ ಜೊತೆಗೆ ಬಹಳ ಬಡವರಾಗಿರುವ ಹರಿಜನರಿಗಾಗಿ ಅಶಕ್ತರಾಗಿರುವವರು ಹಾಗೂ ನಿರ್ಗತಿಕರಾಗಿರುವವರಿಗೆ ಅನುಕೂಲ ಮಾಡುವುದಕ್ಕಾಗಿ ಸರಕಾರದವರು ಸಾಧ್ಯವಾದಷ್ಟು ಏನಾದರೂ ಮಾಡೋಣ ಎಂದು ಷೆಡ್ಯೂಲು ಕ್ಯಾಸ್ಟಿನವರಿಗಾಗಿ 50 ಸಾವಿರ ಷೆಡ್ಯೂಲು ಟ್ರೈಬ್ಸ್‌ನವರಿಗಾಗಿ 50 ಸಾವಿರ ಮತ್ತು ಡೀನೋಟಿಫೈಡ್ ಟ್ರೈಬ್ಸ್‌ನವರಿಗಾಗಿ 50 ಸಾವಿರ ಎಂದು ಬಜೆಟ್ಟಿನಲ್ಲಿ ಇದಕ್ಕಾಗಿ ಪ್ರತ್ಯೇಕವಾಗಿ ತೆಗೆದು ಇರಿಸಲಾಗಿತ್ತು. ಒಂದು ವೇಳೆ ಒಂದೊಂದು ತಾಲ್ಲೂಕಿನಲ್ಲಿ ಇಂತಹ ಜನಾಂಗದವರು ಒಬ್ಬಿಬ್ಬರು ಬರಬಹುದು ಎಂದು ಸರ್ವೆ ಸಾಧಾರಣವಾಗಿ ಇದನ್ನು ಪ್ರಜಾಸಂಖ್ಯೆಯ ಮೇಲೆ ಹಂಚಿಕೆ ಮಾಡಿದ್ದೇವೆ. ಒಂದು ವೇಳೆ ಈ ರೀತಿ ತೆಗೆದು ಇಟ್ಟಿರುವ ಹಣದಿಂದ ತೀರ ನಿರ್ಗತಿಕರಾಗಿರುವವರಿಗೆ ಸ್ವಲ್ಪಮಟ್ಟಿಗಾದರೂ ಪ್ರಯೋಜನವಾಗಲಿ ಎಂದು ಒಂದು ದೃಷ್ಟಿಯಿಂದ ಇದನ್ನೆಲ್ಲಾ ಮಾಡಲಾಗಿದೆ. ಈಚೆಗೆ ತಮಗೆಲ್ಲಾ ತಿಳಿದಂತೆ ಚಿತ್ರದುರ್ಗದಲ್ಲಿ ನಾಲ್ಕು ಮನೆಗಳು ಸುಟ್ಟು ಹೋದವು. ಇಂತಹ ಸಂದರ್ಭಗಳಲ್ಲಿ ಈಗ ನಾವು ತೆಗೆದು ಇಟ್ಟಿರುವ ಹಣದಿಂದ ಸ್ವಲ್ಪಮಟ್ಟಿನ ಸಹಾಯವನ್ನು ಹಿಂದುಳಿದ ಈ ಜನಕ್ಕೆ ಕೊಡಲು ಅನುಕೂಲವಾಗಬಹುದು ಎಂದು ಇಷ್ಟು ಹಣವನ್ನು ಬೇರೆ ನಿಗದಿಮಾಡಿ ಇಡಲಾಗಿದೆ ಮತ್ತು ಅವರಿಗೆ ಮನೆಗಳನ್ನು ಕಟ್ಟುವುದಕ್ಕೆ ಅನುಕೂಲವಾಗಲಿ ಎಂದು ಇಂತಹ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ಮಾಡಬಹುದು ಎಂದು ಇದನ್ನು ಮಾಡುತ್ತಿದ್ದೇವೆ.

ಕಡೆಯದಾಗಿ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಹೇಳುತ್ತಾ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಇಲ್ಲಿ ಏನು ಹೇಳಿದರೋ ಅದು ಬಹುಶಃ ಸೂಕ್ತವಾಗಿದೆ. ಇದನ್ನು ನಾವು ತಡೆಗಟ್ಟುವುದಕ್ಕಾಗಿ ಪ್ರಯತ್ನಗಳನ್ನೇನೋ ಮಾಡುತ್ತಿದ್ದೇವೆ. ಸರ್ವೇಸಾಧಾರಣವಾಗಿ ಇದನ್ನು ಮಾಡುವುದರಿಂದ ಎಷ್ಟು ಪ್ರಯೋಜನವಾಗಿದೆ ಎನ್ನುವುದಕ್ಕೆ ಬೇಕಾದರೆ ಇದರ ಬಗ್ಗೆ ಎಲ್ಲ ಅಂಕಿ ಅಂಶಗಳನ್ನು ಕೊಡುತ್ತೇನೆ. ಇದರಿಂದ ಎಷ್ಟುಮಟ್ಟಿನ ಅಸ್ಪೃಶ್ಯತಾ ನಿವಾರಣೆಯಾಗಿದೆ ಎನ್ನುವುದು ತಮಗೆಲ್ಲಾ ಗೊತ್ತಾಗುತ್ತದೆ. ಆಮೇಲೆ ಮಾನ್ಯ ಸದಸ್ಯರಾದ ಶ್ರೀಮಾನ್ ಪುಟ್ಟರಂಗನಾಥರವರು ಅಸ್ಪೃಶ್ಯತಾ ನಿವಾರಣೆ ಬಗ್ಗೆ ಪೂಜ್ಯ ಮಹಾತ್ಮಾ ಗಾಂಧಿಯವರು ಯಾವ ರೀತಿ ಮಾಡಬೇಕೆಂದು ಹೇಳಿದ್ದರೋ ಅದರಂತೆ ಅಸ್ಪೃಶ್ಯತಾ ನಿವಾರಣೆ ಮಾಡಲು ಇನ್ನೂ ಸಾಧ್ಯವಾಗಿಲ್ಲ ಎಂದು ಹೇಳಿದರು. ನಾನು ನೋಡಿದಂತೆ ಕೆಲವು ಕಡೆಗಳಲ್ಲಿ ಪಂಚಾಯತಿಗಳವರು ಬಹಳ ಉಪಯುಕ್ತವಾದ ಕೆಲಸಕಾರ್ಯಗಳನ್ನು ಇದರ ಬಗ್ಗೆ ಮಾಡಿದ್ದಾರೆ. ನಾನೂ ಕೂಡ ಒಂದೆರಡು ಪಂಚಾಯತಿಗಳನ್ನು ಹೋಗಿ ನೋಡಿಕೊಂಡು ಬಂದಿದ್ದೇನೆ. ಹೊನ್ನೆನಹಳ್ಳಿ ಪಂಚಾಯತಿಯನ್ನು ನೋಡಿಕೊಂಡು ಬಂದಿದ್ದೇನೆ, ಅಲ್ಲಿರುವ ಪಂಚಾಯತಿ ಚೇರ್ಮನ್ನರವರು ಮತ್ತು ಇತರ ಸದಸ್ಯರುಗಳು ಬಹಳ ಉತ್ತಮವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ನನಗೆ ಅವರು ಮಾಡಿರುವ ಕೆಲಸವನ್ನು ನೋಡಿ ಬಹಳ ಒಪ್ಪಿಗೆಯಾದುದರಿಂದ ಅವರ ಕೆಲಸಗಳನ್ನು ಇನ್ನೂ ಚೆನ್ನಾಗಿ ಮಾಡಲು ಅನುಕೂಲವಾಗುವಂತೆ ನಾನು ಒಂದು ಸಾವಿರ ರೂಪಾಯಿಗಳಷ್ಟು ದುಡ್ಡನ್ನು ಹೆಚ್ಚಾಗಿ ಕೊಟ್ಟಿದ್ದೇನೆ. ಇದನ್ನೆಲ್ಲಾ ಇನ್ನೂ ಚೆನ್ನಾಗಿ ಪರಿಶೀಲನೆ ಮಾಡಿ ನೋಡೋಣ. ಮುಂದೆ ಬೇಕಾದರೆ ಇದನ್ನು ತೆಗೆಯೋಣ ಎಂದರೆ ಮುಂದೆ ನೋಡೋಣ.

ಹಾಗೇ ಅನೇಕ ಮಾನ್ಯ ಸದಸ್ಯರುಗಳು ಇಲ್ಲಿ ಅಸ್ಪೃತಾ ನಿವಾರಣೆಯ ಬಗ್ಗೆ ಮಹಾತ್ಮಗಾಂಧಿಯವರು ಏನು ಹೇಳಿದ್ದಾರೆ ಎನ್ನುವುದಕ್ಕಾಗಿ ಅವರ ಹೆಸರನ್ನು ಎತ್ತಿ ಇಲ್ಲಿ ಹೇಳಿದರು. ಅವರು

(ಶ್ರೀ ಜಿ. ನಾರಾಯಣ ಗೌಡ)

ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಏನು ಹೇಳಿದ್ದಾರೆ ಎನ್ನುವುದಕ್ಕೆ ಮಾನ್ಯ ಸದಸ್ಯರು ಮುಂದೆ ಅವರೇ ಹೇಳಿರುವ ಕೆಲವು ಮಾತುಗಳನ್ನು ಇಲ್ಲಿ ಓದುವುದು ಸೂಕ್ತ ಎಂದು ಇಲ್ಲಿ ಕೆಲವು ವಾಕ್ಯಗಳನು ಮಾತ್ರ ಇಲ್ಲಿ ಓದುತ್ತೇನೆ.

7-00 P.M.

"ದೇವಾಲಯದಲ್ಲಿ ಹೋಗಿ ಪೂಜೆ ಮಾಡುವ ಹಕ್ಕು ನಿಮಗೂ ಇರಲೇ ಬೇಕು. ಪಾಠ ಶಾಲೆಗಳಲ್ಲಿ ಇತರ ಜಾತಿಯ ಮಕ್ಕಳ ಜೊತೆಗೆ ವ್ಯಾಸಂಗ ಮಾಡುವ ಅಧಿಕಾರ ಇವರಿಗೂ ಇರಬೇಕು. ಇದು ಅಸ್ಪೃಶ್ಯತೆಯ ಬಗ್ಗೆ ಇರುವ ನನ್ನ ವಿವರಣೆ."

ಬೆಳಗಾಂನಲ್ಲಿ ಮಾಡಿದ ಭಾಷಣ ಯಂಗ್ ಇಂಡಿಯಾದ 22-1-1925 ರ ಸಂಚಿಕೆಯಲ್ಲಿ ಪ್ರಕಟ ವಾಗಿದೆ.

ಆ ಮೇಲೆ ಅನೇಕ ಮಾನ್ಯ ಸದಸ್ಯರು ಬೀರಪ್ಪ ಕಮಿಟಿ ರಿಪೋರ್ಟ್ ಪ್ರಸ್ತಾಪ ಮಾಡಿ ಅದರ ಶಿಫಾರಸ್ಸುಗಳ ಬಗ್ಗೆ ಏನೂ ಮಾಡಲಿಲ್ಲ ಎಂದು ಹೇಳಿದ್ದಾರೆ. ಬೀರಪ್ಪ ಕಮಿಟಿಯು 22 ಶಿಫಾರಸ್ಸು ಗಳನ್ನು ಮಾಡಿದ್ದಾರೆ. ಅದರಲ್ಲಿ 11 ಶಿಫಾರಸ್ಸುಗಳನ್ನು ನಾವು ಈಗಾಗಲೇ ಕಾರ್ಯಗತ ಮಾಡಿದ್ದೇವೆ. ಇನ್ನು ಉಳಿದ ಶಿಫಾರಸ್ಸುಗಳಲ್ಲಿ 3 ಶಿಫಾರಸ್ಸುಗಳನ್ನು ಶೇಕಡ 50 ರಿಂದ 75 ರ ವರೆಗೆ ಕಾರ್ಯಗತ ಮಾಡಿದ್ದೇವೆ. ಇನ್ನುಳಿದ 8 ಶಿಫಾರಸ್ಸುಗಳು ಪರಿಶೀಲನೆಯಲ್ಲಿವೆ. ಆದುದ ರಿಂದ ನಾವು ಏನೂ ಮಾಡಲಿಲ್ಲ ಎಂದು ಹೇಳಿದ್ದು ಸರಿಯಲ್ಲ. ಇದರ ಹೊಣೆಗಾರಿಕೆ ಸರಕಾರದ ಮೇಲೆ ಇದೆ, ಸಾರ್ವಜನಿಕರ ಮೇಲೆ ಇದೆ, ಮುಂಖಂಡರ ಮೇಲೆ ಹೊಣೆಗಾರಿಕೆ ಇದೆ. ಸಮಾಜ ಸುಧಾರಣೆಯ ಕೆಲಸದಲ್ಲಿ ಪ್ರತಿಯೊಬ್ಬರೂ ತಮ್ಮ ಕೈಲಾದ ಮಟ್ಟಿಗೆ ಪ್ರಯತ್ನ ಮಾಡಬೇಕಾದುದು ಅಗತ್ಯ ಎಂದು ನಾವು ಮನಗಂಡಿದ್ದೇವೆ. ಇದನ್ನು ತಿಳಿದುಕೊಂಡು ನಾವು ಎಲ್ಲ ರೀತಿಯ ಸಹಾಯ ಸರಕಾರ ನೀಡಲು ಸಿದ್ಧರಾಗಿದ್ದೇವೆ. ಮುಖ್ಯವಾಗಿ ಈ ಸಮಾಜ ಸುಧಾರಣೆಯ ಕೆಲಸ ಪರಿಣಾಮ ಕಾರಿಯಾಗಬೇಕೆಂದು ವಿದ್ಯಾಭ್ಯಾಸ ಅನುಕೂಲ ಒದಗಿಸಿಕೊಡಲು ಅನೇಕ ಕಾರ್ಯ ಕೈಕೊಂಡಿ ದ್ದೇವೆ. ಬೋಡಿಂಗ್ ಚಾರ್ಜನ್ ವಿಚಾರದಲ್ಲಿ ಒಬ್ಬ ವಿದ್ಯಾರ್ಥಿ ಹಾಸ್ಟೆಲ್ಲಿನಲ್ಲಿ ಕಾಶನ್ ಮನಿ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ಅವನನ್ನು ಹಾಸ್ಟಲ್ಲಿಗೆ ಸೇರಿಸುವುದಿಲ್ಲ. ಇದಕ್ಕಾಗಿ ಐದೂವರೆ ಲಕ್ಷ ರೂಪಾಯಿ ಕಾಶನ್ ಮನಿ ವಿದ್ಯಾರ್ಥಿಗಳಿಗೋಸ್ಕರ ಕೊಟ್ಟು ಆಮೇಲೆ ರೀಇಂಬರ್ಸ್ ಮಾಡಿ ಕೊಂಡಿದ್ದೇವೆ. ಈ ರೀತಿ ಸಹಾಯ ಮಾಡಿದ್ದೇವೆ. ಬೋರ್ಡಿಂಗ್ ಫೀಜ್ 100 ರೂಪಾಯಿ ಇಲ್ಲವೆ 75 ರೂಪಾಯಿ ವಸೂಲು ಮಾಡುತ್ತಿದ್ದಾರೆ. 75 ರೂಪಾಯಿಗೆ ಮೇಲ್ಪಟ್ಟು ಇರುವುದನ್ನು 100 ರೂಪಾಯಿವರೆಗೆ ನಾವು ಕೊಡುವುದಕ್ಕೆ ಸಿದ್ಧರಾಗಿದ್ದೇವೆ.

ನಾನು ಈಗಾಗಲೇ ಹೇಳಿದ ಹಾಗೆ ಷೆಡ್ಯೂಲ್ಡ್ ಕ್ಯಾಸ್ಟ್ ಹಾಸ್ಟೆಲ್ಲುಗಳಲ್ಲಿ ಪ್ರಾಯೋಗಿಕವಾಗಿ ಕೋಚಿಂಗ್ ಇಂಟ್ರಡ್ಯೂಸ್ ಮಾಡುವುದಕ್ಕೆ ಈ ವರ್ಷದಿಂದ ಪ್ರಯತ್ನ ಪಡುತ್ತೇವೆ. ಎಂಟು ಹಾಸ್ಟೆಲ್ಲುಗಳಲ್ಲಿ ಪ್ರಾಯೋಗಿಕವಾಗಿ ನಡೆಸಿಕೊಂಡು ಬರುತ್ತೇವೆ. ಗ್ರಾಂಟ್ಸ್ ಡಿಜರ್ವಿಂಗ್ ಇನ್ಸ್ಟಿಟ್ಯೂಷನ್ಸ್‌ಗಳಿಗೆ ಗ್ರಾಂಟ್ಸ್ ಕೊಡುವುದಕ್ಕೆ ಹಿಂತೆಗೆಯುವುದಿಲ್ಲ. ಉತ್ತಮ ಅರ್ಹತೆ ಇರುವ ಇನ್ಸ್ಟಿಟ್ಯೂಷನ್‌ಗಳಿಗೆ ಈಗಾಗಲೇ ದುಡ್ಡು ಕೊಟ್ಟಿದ್ದೇವೆ ಎನ್ನುವುದು ತಮಗೆಲ್ಲರಿಗೂ ಗೊತ್ತಿದೆ.

ಕಡೆಯದಾಗಿ ಅನೇಕ ಷೆಡ್ಯೂಲ್ಡ್ ಕಾಸ್ಟ್, ಷೆಡ್ಯೂಲ್ ಟ್ರೈಬ್ಸ್‌ಗೆ ಸಂಬಂಧಪಟ್ಟವರಾ ಗ್ರಾಜ್ಯು ಯೇಟ್ಸ್ ಲಾಯರುಗಳಾಗುವುದಕ್ಕೆ ಪುಸ್ತಕ ಭಂಡಾರ ಸಹಾಯಮಾಡಿ ಎಂದು ನಮ್ಮಲ್ಲಿ ಕೇಳು ತ್ತಿದ್ದಾರೆ. ಇದನ್ನು ಪರಿಶೀಲನೆ ಮಾಡಿ ನೋಡಲು ಪುಸ್ತಕ ಬಂಢಾರಕ್ಕೆ ಸಹಾಯ ಮಾಡುವುದ ಕ್ಕಿಂತ ಎನ್‌ರೋಲ್‌ಮೆಂಟ್ ಫೀಜ್ ಕೊಡುವುದು ಒಳ್ಳೆಯದು ಎಂದು ಗೊತ್ತಾಗಿದೆ. ಯಾಕಂದರೆ, ಪುಸ್ತಕ ಬಂಢಾರಕ್ಕೆ ಸಹಾಯ ಕೊಟ್ಟಿರುವುದರಲ್ಲಿ ಪರೀಕ್ಷೆಮಾಡಿ ನೋಡಿದಲ್ಲಿ ಅವರು ಪುಸ್ತಕಗಳನ್ನು ಇಟ್ಟುಕೊಂಡಿಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ.

ಶ್ರೀಮಾನ್ ಮುನಿಯಪ್ಪನವರು ಒಂದು ಸೂಚನೆ ಮಾಡಿದರು. ತಾಲ್ಲೂಕಿನಲ್ಲಿ ಇರತಕ್ಕಂಥ ಹಾಸ್ಟೆಲ್ಲುಗಳನ್ನು ಸೂಪರ್‌ವೈಜ್ ಮಾಡುವುದಕ್ಕೆ ಒಂದು ತಾಲ್ಲೂಕ ಕಮಿಟಿಮಾಡಬೇಕೆಂದು ಅವರು ಹೇಳಿದರು. ಮುಂದಿನ ವರ್ಷದಿಂದ ಇದನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ. ಮಾನ್ಯ ಸದಸ್ಯರು ಅನೇಕ ವಿಷಯಗಳ ಬಗ್ಗೆ ಸೂಚನೆ ಮಾಡಿದ್ದಾರೆ. ಇಷ್ಟೇ ಅಲ್ಲದೆ ಅನೇಕ ಕತ್ತರಿ ನಿರ್ಣಯಗಳ ಮೂಲಕ ಸ್ಥಳೀಯ ವಿಷಯಗಳನ್ನು ತಿಳಿಸಿ ಸೂಚನೆ ಕೊಟ್ಟಿದ್ದಾರೆ. ಅವುಗಳನ್ನು ಪರಿಶೀಲನೆ ಮಾಡಿ ಗಮನಕ್ಕೆ ತೆಗೆದುಕೊಳ್ಳುತ್ತೇವೆ. ನಮಗೆ ಎಷ್ಟು ಮಾಡುವುದಕ್ಕೆ ಸಾಧ್ಯವೋ

ಅಷ್ಟೂ ಮಾಡುತ್ತೇವೆ. ಯಾಕೆಂದರೆ, ಹಾಸಿಗೆ ಇದ್ದಷ್ಟು ಕಾಲು ಚಾಚಬೇಕಾಗುತ್ತದೆ. ಇದು ಎಲ್ಲರಿಗೂ ಗೊತ್ತಿದೆ.

ಈ ಬೇಡಿಕೆಯನ್ನು ಮಾನ್ಯ ಸದಸ್ಯರು ಒಮ್ಮತದಿಂದ ಅಂಗೀಕರಿಸುತ್ತಾರೆಂದು ನಿರೀಕ್ಷಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ನೌಕರಿಯಲ್ಲಿ ಇರತಕ್ಕ ಹರಿಜನರ ಪರ್ಸೆಂಟೇಜ್ ಎಷ್ಟೆಷ್ಟು ಎನ್ನುವುದನ್ನು ಹೇಳಲಿಲ್ಲ ದಯವಿಟ್ಟು ಅದನ್ನು ಹೇಳಬೇಕು.

ಶ್ರೀ ಜಿ. ನಾರಾಯಣ ಗೌಡ.—ಈಗ ನಮ್ಮಲ್ಲಿ ಇರುವುದು 1965 ರ ಕೊನೆಯವರೆಗಿನ ಅಂಕಿ ಅಂಶಗಳು. ಒಟ್ಟು 140 ಯುನಿಟ್ಟುಗಳಲ್ಲಿ 57 ಯೂಟ್ಟುಗಳ ಪರಿಶೀಲನೆ ನಡೆಸಿದ್ದೇವೆ. ಕ್ಲಾಸ್ 4 ನೌಕರಿಗಳನ್ನೇ ಶೇಕಡ 15 ರಷ್ಟು ಷೆಡ್ಯೂಲ್ ಕ್ಯಾಸ್ಟಿನವರಿಗೆ ಕೊಡುವುದಕ್ಕೆ ಪ್ರಯತ್ನ ಪಟ್ಟಿಲ್ಲ ಎಂದು ಅವರು ಹೇಳಿದರು. ಪರಿಶೀಲನೆ ಮಾಡಿದ 57 ಯೂನಿಟ್ಟುಗಳ ಲೆಕ್ಕಾಚಾರದಲ್ಲಿ ಇದು 14·32 ಪರ್ಸೆಂಟು ಇದೆ. 1965ರ ಅಂಕಿಅಂಶಗಳ ಪ್ರಕಾರ ಕ್ಲಾಸ್ 1 ಇದರಲ್ಲಿ 3·72 ಪರ್ಸೆಂಟ್ ಕ್ಲಾಸ್ 2 ನಲ್ಲಿ 4·03 ಪರ್ಸೆಂಟ್ ಮತ್ತು ಕ್ಲಾಸ್ 3 ನಲ್ಲಿ 6·29 ಪರ್ಸೆಂಟ್ ಇದೆ.

Sri J. P. SARWESH.—There are only two questions, Sir.

The first question is, the Department was spending on each child 10 nP. to 20 nP. in Nursery Schools. Why this amount is reduced now ?

The second question is, according to the directions, of the Department, denotified tribes formed milk societies in Sedum, they registered it. Unfortunately, those societies which were not registered were given in Gulbarga district, but those societies which were registered are not given. Why this discrimination ?

ಶ್ರೀ ಜಿ. ನಾರಾಯಣ ಗೌಡ.—ಕೇರ್ ಸಂಸ್ಥೆಯಿಂದ ಮತ್ತು ಬೇರೆ ಸಂಸ್ಥೆಗಳಿಂದ ಅವರಿಗೆ ಅನೇಕ ರೀತಿಯ ಸಹಾಯ ದೊರೆಯುತ್ತಾ ಇರುವುದರಿಂದ ಈಗ ಅಷ್ಟು ಕಡಿಮೆ ಮಾಡಿದ್ದೇವೆ.

ಸೇಡಂನಲ್ಲಿ ಏಕೆ ಡೈರಿ ಫಾರಂ ಕೊಟ್ಟಿಲ್ಲ ಎಂದರೆ, ನನಗೆ ತಿಳಿದಹಾಗೆ—Subject to correction ಅಲ್ಲಿ ಯಾವ ಸಂಘದ ವಿಷಯವನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದರ ವಶಕ್ಕೆ ಜಮಾನು ಇನ್ನೂ ಬಂದಿಲ್ಲ. ಆ ಜಮೀನು ಬರದೆ ಇರುವುದರಿಂದ ಜಮೀನು ಬರುವ ವರೆಗೂ ಸ್ವಲ್ಪ ಸಾವಕಾಶವಾಗಿದೆ ಎಂದು ತಿಳಿಸಲು ಇಚ್ಛೆ ಪಡುತ್ತೇನೆ.

ಶ್ರೀ ಪಿ. ಆಂಜನಪ್ಪ (ಪಾವಗಡ).—ಹರಿಜನರು, ಗಿರಿಜನರು ಇವರಲ್ಲಿ ಓದಿರುವವರಿಗೆ ಕೆಲಸ ಸಿಕ್ಕುವುದು ಕಷ್ಟವಾಗಿದೆ. ಅವರನ್ನೆಲ್ಲ ಮಿಲಟರಿಗೆ ಸೇರಿಸುತ್ತೀರೋ, ಏನು ಮಾಡುತ್ತೀರಿ ಸ್ವಾಮಿ ?

ಶ್ರೀ ಜಿ. ನಾರಾಯಣ ಗೌಡ.—ಇಷ್ಟಪಟ್ಟವರು ಸೇರಬಹುದು.

ಶ್ರೀ ಐ. ಸೋಮಶೇಖರಪ್ಪ.—ನಿಮ್ನವರ್ಗದವರ ಅಭಿವೃದ್ಧಿಗೋಸ್ಕರ ಮನೆಗಳನ್ನು ಕಟ್ಟಲು ಕೊಡುವ 400 ರೂಪಾಯಿಗಳು ಬಹಳ ಕಡಮೆ ಆಗಿರುವುದರಿಂದ 700 ರೂಪಾಯಿ ವರೆಗೆ ಹೆಚ್ಚಿಸ ಬೇಕೆಂದು ಸರ್ಕಾರ ಯೋಚನೆ ಮಾಡುತ್ತಿರುವುದಾಗಿ ಕಳೆದ ವರ್ಷ ತಿಳಿಸಿದ್ದರು. ಆ ಬಗ್ಗೆ ಸರ್ಕಾರದ ನಿರ್ಧಾರವೇನಾಗಿದೆ ಎಂದು ತಿಳಿಸುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ಹರಿಜನ ಗಿರಿಜನರಿಗೆ ಮನೆಗಳಿಗಾಗಿ 50,000 ರೂಪಾಯಿ ಇಟ್ಟುಕೊಂಡು ಒಂದೊಂದು ಮನೆಗೆ 700 ರೂಪಾಯಿಗಳನ್ನೂ, ಫ್ರೀ ಟಿಂಬರ್ 200 ರೂಪಾಯ್ಯಿಗಳ ಕಿಮ್ಮತ್ತಿನದನ್ನು ಕೊಡುತ್ತಿದ್ದೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಅಸ್ಪೃಶ್ಯತೆ ನಿವಾರಣೆ ಬಗ್ಗೆ ಹೇಳುತ್ತ ಸಾಕಷ್ಟು ನಿವಾರಣೆ ಮಾಡಿದ್ದೇವೆಂದು ಹೇಳಿದರು. ಚನ್ನರಾಯಪಟ್ಟಣ ತಾಲ್ಲೂಕು ಹೊನ್ನಮಾರನಹಳ್ಳಿಯಲ್ಲಿ ನಡೆದ ಪ್ರಕರಣದಲ್ಲಿ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಿಗೂ ಗೃಹಮಂತ್ರಿಗಳಿಗೂ ಅರ್ಜಿ ಸಲ್ಲಿಸಿದ್ದೇನೆ. ಡಿಸೆಂಬರ್ ತಿಂಗಳಿನಲ್ಲಿ ಕೊಟ್ಟ ಅರ್ಜಿಗೆ ಗೃಹಮಂತ್ರಿಗಳು ಈ ತಿಂಗಳು ಉತ್ತರ ಕೊಡುತ್ತಿದ್ದಾರೆ ಮತ್ತು ಈ ಬಗ್ಗೆ ಅವರು ಯಾವ ರೀತಿ ಕ್ರಮ ತೆಗೆದುಕೊಂಡಿದ್ದಾರೆ, ಏನು ಪರಿಶೀಲನೆ ಮಾಡಿದ್ದಾರೆ, ನೀವು ತೆಗೆದುಕೊಳ್ಳುವ ಕ್ರಮವೇನು, ಅವನಿಗೆ ಪರಿಹಾರ ದೊರಕಿದೆಯೇ ಎಂದು ಹೇಳುವುದಕ್ಕೆ ಸಾಧ್ಯವೇ ಸ್ವಾಮಿ ?

ಶ್ರೀ ಜಿ. ನಾರಾಯಣ ಗೌಡ.—ಅದು ಗೃಹ ಶಾಖೆಗೆ ಸಂಬಂಧಪಟ್ಟ ವಿಚಾರ. ಅವರಿಗೆ ನಾವು ಕಳಿಸಿಕೊಡುತ್ತೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ವಿದ್ಯಾರ್ಥಿಗಳಿಗೆ ಈಗ ಕೊಡತಕ್ಕ, ಸ್ಕಾಲರ್‌ಷಿಪ್ ಬಹಳ ಕಡಮೆಯಾಗಿರುವುದರಿಂದ, ಈಗಿನ ಕಾಲದವುಟ್ಟಿಗೆ ಧಾರಣೆ ಏರಿರುವುದರಿಂದ ಅದನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ನಾನಾಗಲೇ ಹೇಳಿದೆ. ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಾಗಿದೆ. ಅದನ್ನೆಲ್ಲ ಏಕರೂಪವಾಗಿ ಮಾಡಿ ಒಂದು ವೇಳೆ ಹೆಚ್ಚಿಸುವುದಕ್ಕೆ ಸಾಧ್ಯವಿದ್ದರೆ ನೋಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಸಿದ್ಧವೀರಪ್ಪನವರು ಮಾತನಾಡುತ್ತ ಹರಿಜನರ ಕಲ್ಯಾಣಾಭಿವೃದ್ಧಿಗಾಗಿ 90 ಲಕ್ಷ ರೂಪಾಯಿ ಖರ್ಚು ಮಾಡುತ್ತ ಇರುವುದು ಬಹಳ ಕಡಮೆ ಇರುವುದರಿಂದ ಅದನ್ನು ಐದು ಕೋಟಿ ರೂಪಾಯಿಗಳಿಗಾದರೂ ಹೆಚ್ಚಿಸಬೇಕು ಎಂದು ಹೇಳಿದರು. ಅದನ್ನು ಏನು ಮಾಡುತ್ತೀರಿ ? ಪ್ರತಿ ಇಲಾಖೆಯಲ್ಲಿಯೂ 18 ಪರ್ಸೆಂಟ್ ಕೆಲಸಗಳನ್ನು ಕೊಡಿಸಿಕೊಡುವುದಕ್ಕೆ ಏನು ಮಾಡುತ್ತೀರಿ ?

Sri G. NARAYANA GOWDA.—It is a suggestion for action, Sir.

ಶ್ರೀ ಎ. ರಾಮಚಂದ್ರ.—ಟೈಲರಿಂಗ್ ಪ್ರೊಡಕ್ಷನ್ ಸೆಂಟರಿನಲ್ಲಿ ಹಣ ಕೊಡುವಾಗ 25 ಪರ್ಸೆಂಟ್ ಖೋತಾ ಮಾಡಿಕೊಡುತ್ತಿದ್ದಾರೆ. ಇದರಿಂದ ಸುಮಾರು 15 ರೂಪಾಯಿ ಬರುತ್ತದೆ. ಇದನ್ನು ಪೂರ್ತಿಯಾಗಿ ಕೊಡಬಾರದೇ ಸ್ವಾಮಿ ?

ಶ್ರೀ ಜಿ. ನಾರಾಯಣ ಗೌಡ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಎಸ್. ಅರಕೇರಿ.—ಕಳೆದ ಐದಾರು ವರ್ಷಗಳಲ್ಲಿ ಸಾವಿರಾರು ಪದವೀಧರರು, ಹತ್ತಾರು ಸಾವಿರ ಮೆಟ್ರಿಕ್ಯುಲೇಟ್ಸ್ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ರಿಜಿಸ್ಟರ್ ಮಾಡಿಸಿ ಕೆಲಸವಿಲ್ಲದೆ ಒದ್ದಾಡುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಯಾವರೀತಿ ಪರಿಹಾರ ಮಾಡಬಹುದೆಂದು ವಿಚಾರ ಮಾಡುತ್ತೀರಾ ಸ್ವಾಮಿ ?

ಶ್ರೀ ಜಿ. ನಾರಾಯಣ ಗೌಡ.—ಎವಾಲ್ಯುಯೇಷನ್ ಸೆಲ್ ಇದೆ. ಅವರು ಇದನ್ನೆಲ್ಲ ನೋಡುತ್ತಾರೆ.

Mr. CHAIRMAN.—The question is :

"That a sum not exceeding Rs. 3,24,99,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969 in respect of 'Miscellaneous Social and Developmental Organisations'."

The motion was adopted.

Mr. CHAIRMAN.—The motion is adopted and the demand granted.

The House will now adjourn and re-assemble at 1.00 P.M. tomorrow.

The House adjourned at Fifteen Minutes past Seven of the Clock to meet again at One of the Clock on Friday, the 5th April 1968.

WD 10764—GPB—600—16-7-1968